ಶುಕ್ರವಾರ, ಜುಲೈ 2, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಹಿಳಾ ಕಣ್ಗಾವಲು
ಜಮ್ಮು ಮತ್ತು ಕಾಶ್ಮೀರದ ಗಂದೇರ್ಬಾಲ್ ಜಿಲ್ಲೆಯ ಚೆಕ್‌ಪೋಸ್ಟ್‌ನಲ್ಲಿ ಗುರುವಾರ ನಿಯೋಜನೆಗೊಂಡಿದ್ದ ಅಸ್ಸಾಂ ರೈಫಲ್‌ನ ಮಹಿಳಾ ಸಿಬ್ಬಂದಿ

ಪ್ರಿಯ ಬೆಂಗಳೂರಿಗರಿಗೆ, ಹೆಚ್ಚು ಶಾಪಿಂಗ್ ಮಾಡಲು
ಇಲ್ಲಿವೆ ಎರಡು ಹೊಸ ಹೊಳೆಯುವ ಕಾರಣಗಳು.

ಭೀಮ, ಇದೀಗ
ಮಲ್ಲೇಶ್ವರಂನಲ್ಲಿ ಪ್ರಾರಂಭವಾಗಿದೆ

ಜಯನಗರದಲ್ಲಿ ಸಂಪೂರ್ಣ ಹೊಸದಾದ
ಮಳಿಗೆ ಪುನರಾರಂಭವಾಗಿದೆ

2ನೇ ಜುಲೈ 2021 ರಂದು ಭೀಮ ಹೊಚ್ಚಹೊಸ ಮಳಿಗೆಯನ್ನು ಆರಂಭಿಸುತ್ತಿದೆ. ಈ ಅದ್ದೂರಿ ಸಮಾರಂಭಕ್ಕೆ ನಿಮ್ಮೆಲ್ಲರಿಗೂ ಆದರದ ಸ್ವಾಗತ. ನಿಮ್ಮ ಮನೆಯವರೆಲ್ಲರಿಗೂ ಅದ್ಭುತ ಕೊಡುಗೆಗಳು ಹಾಗೂ ಇತರ ವಿಶೇಷತೆಗಳೂ ಇಲ್ಲಿವೆ.

ಬೆಳ್ಳಿಯ ಅತಿದೊಡ್ಡ ಸಂಗ್ರಹದ ಅನುಭವ ಪಡೆಯಿರಿ

ಚಿನ್ನದ ಕೊಡುಗೆ
ಗ್ರಾಂ ಗೆ
₹**3,599*** ವರೆಗೂ
ಅತಿ ಕಡಿಮೆ ಬೆಲೆಗೆ
ಚಿನ್ನ ಖರೀದಿಸಿ

ವಜ್ರದ ಕೊಡುಗೆ
ಪ್ರತಿ ಕ್ಯಾರೆಟ್‌ಗೆ
1 ಗ್ರಾಂ ಚಿನ್ನದ ನಾಣ್ಯ*
ಉಚಿತವಾಗಿ ಪಡೆಯಿರಿ ಮತ್ತು
ಪ್ರತಿ ಕ್ಯಾರೆಟ್‌ಗೆ
₹**7,500**
ರಿಯಾಯಿತಿ ಪಡೆಯಿರಿ

ಭೀಮ ಟೋಲ್ ರಹಿತ ಸಹಾಯವಾಣಿ
1800-121-9076
(ಬೆಳಗ್ಗೆ 10 ಗಂಟೆಯಿಂದ ಸಂಜೆ 7 ಗಂಟೆವರೆಗೆ)

ಮೇಲಿನ ಕೊಡುಗೆಗಳ ಅವಧಿ 2 ರಿಂದ 7 ಜುಲೈ, 2021 ವರೆಗೆ

ಮಲ್ಲೇಶ್ವರಂ : ನಂ.148, 2ನೇ ಮುಖ್ಯರಸ್ತೆ, ಸಂಪಿಗೆ ರಸ್ತೆ, 8ನೇ ಕ್ರಾಸ್ ಹತ್ತಿರ.
ಜಯನಗರ : ನಂ.122/ಸಿ, 8ನೇ ಮುಖ್ಯ ರಸ್ತೆ, ಎನ್.ಎಮ್.ಕೆ.ಆರ್.ವಿ ಮಹಿಳಾ ಕಾಲೇಜು ಎದುರು, ಜಯನಗರ 3ನೇ ಬ್ಲಾಕ್.
ಬೆಂಗಳೂರು • ಉಡುಪಿ • ಹಾಸನ • ಮಂಗಳೂರು • ಶಿವಮೊಗ್ಗ • ವಿಜಯವಾಡ

ಭೀಮ ಇಲ್ಲಿಯೂ ಲಭ್ಯ: **bhimagold.com** | amazon.in | | |

*ಷರತ್ತುಗಳು ಮತ್ತು ನಿಬಂಧನೆಗಳು ಅನ್ವಯಿಸುತ್ತವೆ. ಮಳಿಗೆಯ ಚಿತ್ರಣ ವಿನ್ಯಾಸಕಾರರ ಕಾಲ್ಪನಿಕ ಅಭಿವ್ಯಕ್ತಿ, ವಾಸ್ತವಕ್ಕಿಂತ ಭಿನ್ನವಾಗಿರಬಹುದು.
ನಮ್ಮ ಮಳಿಗೆಗಳಲ್ಲಿ ಕೋವಿಡ್ -19 ರ ಎಲ್ಲಾ ನಿಯಮಾವಳಿಗಳನ್ನು ಪಾಲಿಸುತ್ತೇವೆ.

BHIMA JEWELLERS
GOLD • DIAMONDS • SILVER • PLATINUM
INDIA • UAE
SINCE 1925

ಗಾಂಧಿ ಆಶ್ರಮ ಅಭಿವೃದ್ಧಿ: ಸೂಚನೆ

ಅಹಮದಾಬಾದ್: ಸಬರಮತಿ ಗಾಂಧಿ ಆಶ್ರಮದ ಅಭಿವೃದ್ಧಿಗೆ ರೂಪಿಸಲಾಗಿರುವ ಯೋಜನೆಗೆ ತಾತ್ವಿಕ ಒಪ್ಪಿಗೆ ನೀಡುವ ನಿರ್ಣಯವನ್ನು ಅಂಗೀಕರಿಸುವಂತೆ ಗುಜರಾತ್ ಸರ್ಕಾರವು ಆಶ್ರಮಕ್ಕೆ ಸಂಬಂಧಿಸಿದ ಐದು ಟ್ರಸ್ಟ್‌ಗಳನ್ನು ಕೇಳಿದೆ.

ಮಹಾತ್ಮ ಗಾಂಧಿ ಅವರು ಸ್ಥಾಪಿಸಿದ ಸಬರಮತಿ ಆಶ್ರಮವನ್ನು ವಿಶ್ವ ದರ್ಜೆಯ ಸ್ಮಾರಕವನ್ನಾಗಿ ಪರಿವರ್ತಿಸುವ ಉದ್ದೇಶದಿಂದ, ಅಲ್ಲಿ ಅಭಿವೃದ್ಧಿ ಕಾರ್ಯಗಳ ಯೋಜನೆಯನ್ನು ಸರ್ಕಾರ ರೂಪಿಸಿದೆ.

ಸಂಬಂಧಿಸಿದ ಟ್ರಸ್ಟ್‌ಗಳು ತಮ್ಮ ಆಸ್ತಿ, ಚಟುವಟಿಕೆ, ನಿವಾಸಿಗಳು ಮತ್ತು ಇತರರ ಸಂಬಂಧಿತ ದಾಖಲೆಗಳನ್ನು ವಾರದೊಳಗೆ ಸಲ್ಲಿಸುವಂತೆ ಸರ್ಕಾರ ಸೂಚಿಸಿದೆ. ಈ ಸಂಬಂಧ ಗುರುವಾರ ಸಭೆ ಸೇರಿದ್ದ ಟ್ರಸ್ಟಿಗಳು ಆಶ್ರಮದ ಪುನರಾಭಿವೃದ್ಧಿಗಾಗಿ ಸರ್ಕಾರ ಹೊಂದಿರುವ ಅಧಿಕೃತ ಯೋಜನೆಯ ಮಾಹಿತಿ ಒದಗಿಸುವಂತೆ ಕೋರಲು ನಿರ್ಧರಿಸಿದ್ದಾರೆ.

ಮುಖ್ಯಮಂತ್ರಿ ಬಿಎಸ್‌ವೈ ಪುತ್ರ ವಿಜಯೇಂದ್ರ ಹೆಸರಿನಲ್ಲಿ ಹಣ ವಸೂಲಿ ಆರೋಪ

ಸಚಿವ ಶ್ರೀರಾಮುಲು ಆಪ್ತ ಸಹಾಯಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪುತ್ರ ಬಿ.ವೈ. ವಿಜಯೇಂದ್ರ ಹೆಸರು ಬಳಸಿಕೊಂಡು ಜನರನ್ನು ವಂಚಿಸುತ್ತಿದ್ದ ಆರೋಪದಡಿ ರಾಜು ಅಲಿಯಾಸ್ ರಾಜಣ್ಣ (35) ಎಂಬುವರನ್ನು ನಗರದ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಬಳ್ಳಾರಿ ನಿವಾಸಿ ರಾಜಣ್ಣ, ಸಚಿವ ಬಿ. ಶ್ರೀರಾಮುಲು ಅವರ ಆಪ್ತ ಸಹಾಯಕನೆಂದು ಗೊತ್ತಾಗಿದೆ. ವಿಜಯೇಂದ್ರ ಅವರು ನೀಡಿದ್ದ ದೂರು ಆಧರಿಸಿ ಆತನನ್ನು ಬಂಧಿಸಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಆತನನ್ನು ಕಸ್ಟಡಿಗೆ ಪಡೆಯಬೇಕಿದೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

ಮುಖ್ಯಾಂಶಗಳು
- ಬಿ.ವೈ.ವಿಜಯೇಂದ್ರ ನೀಡಿದ್ದ ದೂರು
- ವೈರಲ್ ಆಗಿದ್ದ ರಾಜಣ್ಣ ಮೊಬೈಲ್ ಸಂಭಾಷಣೆ
- ಬಂಧನಕ್ಕೆ ಹೋದಾಗ ಕರ್ತವ್ಯಕ್ಕೆ ಅಡ್ಡಿ–ಆರೋಪ

‘ಬಿಜೆಪಿ ರಾಜ್ಯ ಉಪಾಧ್ಯಕ್ಷರೂ ಆಗಿರುವ ವಿಜಯೇಂದ್ರ ತನಗೆ ಆಪ್ತರೆಂದು ರಾಜಣ್ಣ ಹೇಳಿಕೊಳ್ಳುತ್ತಿದ್ದ. ವಿಜಯೇಂದ್ರ ಮೂಲಕವೇ ಸರ್ಕಾರದ ಕೆಲಸ ಕೊಡಿಸುವ ಆಮಿಷವೊಡ್ಡಿ ಉದ್ಯಮಿಯೊಬ್ಬರಿಂದ ಇತ್ತೀಚೆಗಷ್ಟೇ ಲಕ್ಷಾಂತರ ರೂಪಾಯಿ ಹಣ ಪಡೆದಿದ್ದ ಎನ್ನಲಾಗಿದೆ. ಸರ್ಕಾರಿ ಕೆಲಸ ಕೊಡಿಸುವ ಹಾಗೂ ವರ್ಗಾವಣೆ ಮಾಡಿಸುವುದಾಗಿಯೂ ಆರೋಪಿ ಹಲವರಿಗೆ ಆಮಿಷವೊಡ್ಡಿ ಹಣಕ್ಕೆ ಬೇಡಿಕೆ ಇಟ್ಟಿದ್ದ.’

‘ಸಚಿವರ ಮನೆಯಲ್ಲೇ ಸೆರೆ’

ರಾಜಣ್ಣ

‘ಪ್ರಕರಣ ದಾಖಲಾಗುತ್ತಿದ್ದಂತೆ ಆರೋಪಿ ತಲೆಮರೆಸಿಕೊಂಡಿದ್ದ. ಬೆಂಗಳೂರಿನಲ್ಲಿ ಗುರುವಾರ ಆತ ಕಾಣಿಸಿಕೊಂಡಿದ್ದ. ಮೊಬೈಲ್ ನೆಟ್‌ವರ್ಕ್ ಸುಳಿವು ಆಧರಿಸಿ ಕಾರ್ಯಾಚರಣೆ ನಡೆಸಿದ ಸಿಸಿಬಿ ಪೊಲೀಸರು, ಸೆವೆನ್ ಮಿನಿಸ್ಟರ್ ಕ್ವಾರ್ಟರ್ಸ್‌ನಲ್ಲಿರುವ ಶ್ರೀರಾಮುಲು ಮನೆ ಆವರಣದಲ್ಲೇ ಆತನನ್ನು ಬಂಧಿಸಿದ್ದಾರೆ’ ಎಂದು ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಬಂಧನಕ್ಕೆ ಹೋಗಿದ್ದ ವೇಳೆ ಮನೆಯಲ್ಲಿದ್ದ ಕೆಲವರು, ಕರ್ತವ್ಯಕ್ಕೆ ಅಡ್ಡಿಪಡಿಸಿದ್ದರು. ಅವರ ವಿರುದ್ಧವೂ ಕ್ರಮ ಜರುಗಿಸಲಾಗುವುದು. ಜೊತೆಗೆ, ಸಂಭಾಷಣೆ ಆಡಿಯೊವನ್ನು ಪರೀಕ್ಷೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಆರೋಪಿ ಬಳಿ ಸದ್ಯಕ್ಕೆ ಯಾವುದೇ ಹಣ ಸಿಕ್ಕಿಲ್ಲ. ತನಿಖೆ ಮುಂದುವರಿದಿದೆ’ ಎಂದೂ ಹೇಳಿದರು.

‘ಉದ್ಯಮಿಯೊಬ್ಬರ ಜೊತೆ ಆರೋಪಿ ರಾಜಣ್ಣ ನಡೆಸಿದ್ದ ಮೊಬೈಲ್ ಸಂಭಾಷಣೆ ಇತ್ತೀಚೆಗೆ ಎಲ್ಲೆಡೆ ಹರಿದಾಡಿತ್ತು. ವಿಜಯೇಂದ್ರ ಹೆಸರು ಪ್ರಸ್ತಾಪಿಸಿದ್ದ ಆರೋಪಿ, ‘ರಾಜ್ಯ ಸರ್ಕಾರದಲ್ಲಿ ಮುಖ್ಯಮಂತ್ರಿ ಅವರಿಗಿಂತ ಪುತ್ರನದ್ದೇ ಹೆಚ್ಚು ಮಾತು ನಡೆಯುತ್ತದೆ. ಹಣ ಕೊಟ್ಟರೆ, ವಿಜಯೇಂದ್ರ ಅವರ ಮೂಲಕವೇ ನಿಮ್ಮ ಕೆಲಸ ಮಾಡಿಸುತ್ತೇನೆ’ ಎಂಬುದಾಗಿ ತಿಳಿಸಿದ್ದ. ಅದನ್ನು ನಂಬಿ ಉದ್ಯಮಿ ಹಣವನ್ನೂ ಕೊಟ್ಟಿರುವ ಮಾಹಿತಿ ಇದೆ’ ಎಂದೂ ಸಿಸಿಬಿ ಮೂಲಗಳು ತಿಳಿಸಿವೆ.

‘ಸಂಭಾಷಣೆ ಆಡಿಯೊ ಗಮನಕ್ಕೆ ಬರುತ್ತಿದ್ದಂತೆ ವಿಜಯೇಂದ್ರ ಅವರೇ ನಗರದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದರು. ಈ ಬಗ್ಗೆ ಎಫ್‌ಐಆರ್ ದಾಖಲಿಸಿಕೊಂಡು ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿತ್ತು’ ಎಂದೂ ಹೇಳಿವೆ.

ಸುದ್ದಿ 2 ನಿಮಿಷ

‘ಮನೆಗೆಲಸ ಕಾರ್ಮಿಕರಿಗಾಗಿ ಮಾರ್ಗಸೂಚಿ ಮಾರ್ಪಾಡು’

ಬೆಂಗಳೂರು: ಮನೆಗೆಲಸ ಕಾರ್ಮಿಕರು ಕೋವಿಡ್ ಲಾಕ್‌ಡೌನ್ ಪರಿಹಾರ ₹2 ಸಾವಿರ ಪಡೆಯಲು ನೋಂದಾಯಿಸಿಕೊಳ್ಳಲು ಸುಲಭ ಆಗುವಂತೆ ಮಾರ್ಗಸೂಚಿ ಮಾರ್ಪಡಿಸಲಾಗುವುದು ಎಂದು ಹೈಕೋರ್ಟ್‌ಗೆ ಕಾರ್ಮಿಕ ಇಲಾಖೆ ತಿಳಿಸಿದೆ.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ₹150 ರಿಂದ ₹250ರ ತನಕ ಕಮಿಷನ್ ವಸೂಲಿ ಮಾಡಲಾಗುತ್ತಿದೆ ಎಂದು ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ(ಕೆಎಸ್‌ಎಲ್‌ಎಸ್‌ಎ) ವರದಿ ಸಲ್ಲಿಸಿತ್ತು.

ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದ ಕಾರ್ಮಿಕ ಇಲಾಖೆ ಕಾರ್ಯದರ್ಶಿ, ‘ಕಮಿಷನ್ ವಸೂಲಿ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ’ ಎಂದು ವಿವರ ಸಲ್ಲಿಸಿದರು.

‘ಕಾರ್ಮಿಕ ಇಲಾಖೆ ಪಟ್ಟಿ ಮಾಡಿರುವ ದಾಖಲೆಗಳನ್ನು ಒದಗಿಸುವುದು ಮನೆ ಕೆಲಸ ಕಾರ್ಮಿಕರಿಗೆ ಕಷ್ಟವಾಗಲಿದೆ. ಉದ್ಯೋಗದಾತರಿಂದ ಪ್ರಮಾಣ ಪತ್ರ, ಬ್ಯಾಂಕ್ ಖಾತೆಯ ವಿವರ, ಆಧಾರ್ ಕಾರ್ಡ್ ಮಾತ್ರ ಪಡೆದು ಪರಿಹಾರ ನೀಡಲು ಸಾಧ್ಯವೇ’ ಎಂದು ಕಾರ್ಮಿಕ ಇಲಾಖೆ ಕಾರ್ಯದರ್ಶಿಗೆ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಮೌಖಿಕವಾಗಿ ಪ್ರಶ್ನಿಸಿತು.

ಮಾರ್ಪಡಿಸಿದ ಮಾರ್ಗಸೂಚಿ ಮತ್ತು ಕ್ರಮ ಕೈಗೊಂಡ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿದ ಪೀಠ, ವಿಚಾರಣೆಯನ್ನು ಜುಲೈ 5ಕ್ಕೆ ಮುಂದೂಡಿತು.

ರಾಜ್ಯಗಳಿಗೆ ಒಬಿಸಿ ಘೋಷಿಸುವ ಅಧಿಕಾರ ಇಲ್ಲ: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ನೀಡುವ ಉದ್ದೇಶದಿಂದ ಸಮುದಾಯಗಳನ್ನು ಇತರ ಹಿಂದುಳಿದ ವರ್ಗಗಳು (ಒಬಿಸಿ) ಎಂದು ಘೋಷಿಸುವ ರಾಜ್ಯಗಳ ಅಧಿಕಾರವನ್ನು ಮೊಟಕುಗೊಳಿಸಿರುವ ಮೇ 5ರ ತೀರ್ಪನ್ನು ಮರು ಪರಿಶೀಲಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಈ ಕುರಿತು ಕೇಂದ್ರ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ.

ಸಮುದಾಯಗಳನ್ನು ಹಿಂದುಳಿದವು ಎಂದು ಗುರುತಿಸುವ ಏಕೈಕ ಅಧಿಕಾರ ರಾಷ್ಟ್ರಪತಿಗೆ ಮಾತ್ರ ಇದೆ ಎಂದು ನ್ಯಾಯಾಲಯ ಹೇಳಿದೆ.

ಮರಾಠಾ ಕೋಟಾವನ್ನು ರದ್ದುಪಡಿಸುವಾಗ, ನ್ಯಾಯಮೂರ್ತಿ ಅಶೋಕ್ ಭೂಷಣ್ ಅವರ ಅಧ್ಯಕ್ಷತೆಯ ಐವರು ನ್ಯಾಯಮೂರ್ತಿಗಳ ಪೀಠವು ಮೇ 5 ರಂದು ನೀಡಿದ್ದ ತೀರ್ಪಿನಲ್ಲಿ ಸಂವಿಧಾನದ 102ನೇ ತಿದ್ದುಪಡಿಯ ಮಾನ್ಯತೆಯನ್ನು ಎತ್ತಿಹಿಡಿದು, ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗಕ್ಕೆ ಸಾಂವಿಧಾನಿಕ ಹಕ್ಕು ಇದೆ ಎಂದು ಹೇಳಿತ್ತು. ಅಲ್ಲದೆ, ರಾಜ್ಯಗಳಿಗೆ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಪಟ್ಟಿಗಳನ್ನು ಸಿದ್ಧಪಡಿಸುವ ಅಧಿಕಾರ ಇಲ್ಲ ಎಂದೂ ನ್ಯಾಯಾಲಯ ಘೋಷಿಸಿತ್ತು.

ಈ ತೀರ್ಪಿನ ವಿರುದ್ಧ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಪರಿಶೀಲನಾ ಅರ್ಜಿ ಸಲ್ಲಿಸಿತ್ತು.

ಲಸಿಕೆ ಕಾರ್ಯಕ್ರಮ: ವಿದ್ಯಾರ್ಥಿಗಳಿಗೂ ಆದ್ಯತೆ

ಬೆಂಗಳೂರು: ಕೋವಿಡ್ ಲಸಿಕೆ ಕಾರ್ಯಕ್ರಮದ ಅನುಷ್ಠಾನದ ವೇಳೆ ಕಾಲೇಜು ವಿದ್ಯಾರ್ಥಿಗಳಿಗೂ ಆದ್ಯತೆ ಮೇರೆಗೆ ಲಸಿಕೆ ಹಾಕಲು ಬಿಬಿಎಂಪಿ ಮುಂದಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ‘ಕಾಲೇಜು ವಿದ್ಯಾರ್ಥಿಗಳು ತರಗತಿಗೆ ಹಾಜರಾಗಲು ಕೋವಿಡ್ ಹೊಂದಿರದ ಬಗ್ಗೆ ಪ್ರಮಾಣಪತ್ರ ತೋರಿಸುವುದನ್ನು ಕಡ್ಡಾಯಗೊಳಿಸಿಲ್ಲ. ಆದರೆ, ಕಾಲೇಜುಗಳನ್ನು ಆರಂಭಿಸುವ ವೇಳೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಲಸಿಕೆ ಹಾಕಿಸಿಕೊಂಡಿದ್ದರೆ ಒಳ್ಳೆಯದು. ವಿದ್ಯಾರ್ಥಿಗಳಿಗೆ ಲಸಿಕೆ ಹಾಕುವ ಸಲುವಾಗಿಯೇ ವಿಶೇಷ ಶಿಬಿರಗಳನ್ನು ಆಯೋಜಿಸಲಿದ್ದೇವೆ. ಬುಧವಾರ 60 ಕಾಲೇಜುಗಳಲ್ಲಿ ವಿಶೇಷ ಶಿಬಿರಗಳನ್ನು ಏರ್ಪಡಿಸಿದ್ದೇವೆ’ ಎಂದರು.

‘ನಗರದಲ್ಲಿ ಲಸಿಕೆ ಹಾಕುವ ಕಾರ್ಯಕ್ರಮಗಳು ಸಾಂಗವಾಗಿ ನಡೆಯುತ್ತಿವೆ. ದೇಶದ ಇತರ ಮಹಾನಗರಗಳಿಗೆ ಹೋಲಿಸಿದರೆ, ನಮ್ಮ ನಗರದಲ್ಲಿ ಲಸಿಕೆ ಪಡೆದವರ ಸಂಖ್ಯೆ ಹೆಚ್ಚು ಇದೆ. ವಯಸ್ಕ ನಿವಾಸಿಗಳಲ್ಲಿ ಶೇ 50ಕ್ಕಿಂತಲೂ ಹೆಚ್ಚು ಮಂದಿ ಲಸಿಕೆ ಪಡೆದಿರುವುದು ಬೆಂಗಳೂರಿನಲ್ಲಿ ಮಾತ್ರ. ಲಸಿಕೆಯ ಲಭ್ಯತೆ ನೋಡಿಕೊಂಡು ಜನರ ಮನೆ ಬಾಗಿಲಿಗೆ ತಲುಪಿಸುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದ್ದೇವೆ’ ಎಂದು ತಿಳಿಸಿದರು.

‘ನಗರದಲ್ಲಿ ನಿತ್ಯ 1.5 ಲಕ್ಷ ಮಂದಿಗೆ ಲಸಿಕೆ ನೀಡಲು ಅಗತ್ಯವಿರುವಷ್ಟು ಪೂರ್ವ ಸಿದ್ಧತೆ ಮಾಡಿಕೊಂಡಿದ್ದೇವೆ. ಆದರೆ, ಬೇಡಿಕೆ ಇರುವಷ್ಟು ಲಸಿಕೆ ನಮಗೆ ಪೂರೈಕೆ ಆಗುತ್ತಿಲ್ಲ. ಬಿಬಿಎಂಪಿಗೆ ನಿತ್ಯ ಅಂದಾಜು 40 ಸಾವಿರದಿಂದ 50 ಸಾವಿರ ಡೋಸ್‌ಗಳು ಮಾತ್ರ ಪೂರೈಕೆಯಾಗುತ್ತಿವೆ. ನಗರದ ಖಾಸಗಿ ಆಸ್ಪತ್ರೆಗಳ ಮೂಲಕ ನಿತ್ಯ 30 ಸಾವಿರದಿಂದ 40 ಸಾವಿರದಷ್ಟು ಡೋಸ್‌ಗಳನ್ನು ನೀಡಲಾಗುತ್ತಿದೆ’ ಎಂದರು.

ನಗರದ ಕೋವಿಡ್ ಅಂಕಿ–ಅಂಶ

- 12,14,235 ▲ ಒಟ್ಟು ಪ್ರಕರಣಗಳು (12,13,559 ನಿನ್ನೆಯ ವಿವರ)
- 33,516 ▼ ಸಕ್ರಿಯ ಪ್ರಕರಣಗಳು
- 11,65,074 ▲ ಗುಣಮುಖರಾದವರು
- 15,644 ▲ ಒಟ್ಟು ಸಾವು

ಗುರುವಾರದ ಏರಿಕೆ

- ಹೊಸ ಪ್ರಕರಣ 675 ▼
- ಗುಣಮುಖ 10,840 ▲
- ಸಾವು 18 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಹೇಳಿಕೆ

ಕಾರ್ಮಿಕ ಸಹಾಯಧನಗಳ ಹೆಚ್ಚಳಕ್ಕೆ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕ ಕಲ್ಯಾಣ ಮಂಡಳಿಯ ಮೂಲಕ ಕಾರ್ಮಿಕರು ಮತ್ತು ಅವರ ಕುಟುಂಬದ ಸದಸ್ಯರಿಗೆ ನೀಡುವ ಸಹಾಯಧನಗಳ ಮೊತ್ತದಲ್ಲಿ ಭಾರಿ ಏರಿಕೆ ಮಾಡುವ ನಿರ್ಣಯಗಳನ್ನು ಗುರುವಾರ ನಡೆದ ಮಂಡಳಿಯ ಸಭೆಯಲ್ಲಿ ಕೈಗೊಳ್ಳಲಾಗಿದೆ ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ತಿಳಿಸಿದರು.

ಮಂಡಳಿಯ ಸಭೆಯ ಬಳಿಕ ಮಾತನಾಡಿದ ಅವರು, ‘ಕಾರ್ಮಿಕರ ಮಾಸಿಕ ಪಿಂಚಣಿಯ ಮೊತ್ತವನ್ನು ₹ 2,000ದಿಂದ ₹ 3,000ಕ್ಕೆ ಹೆಚ್ಚಿಸಲಾಗಿದೆ. ಕುಟುಂಬ ಪಿಂಚಣಿಯನ್ನು ₹ 1,000ದಿಂದ ₹ 2,000ಕ್ಕೆ ಹೆಚ್ಚಿಸಲಾಗಿದೆ. ಹೆರಿಗೆ ಸೌಲಭ್ಯಗಳನ್ನು ₹ 20,000 ದಿಂದ ₹ 25,000ಕ್ಕೆ, ಹೆಣ್ಣುಮಗುವಿಗೆ ನೀಡುವ ಸಹಾಯಧನವನ್ನು ₹ 30,000ದಿಂದ ₹ 35,000ಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ’ ಎಂದರು.

ವಿದ್ಯಾರ್ಥಿಗಳಿಗೆ ನೀಡುವ ಪ್ರೋತ್ಸಾಹಧನವನ್ನೂ ಹೆಚ್ಚಿಸುವ ತೀರ್ಮಾನ ಮಾಡಲಾಗಿದೆ. ನರ್ಸರಿ ಹಂತದಿಂದ ನಾಲ್ಕನೇ ತರಗತಿವರೆಗಿನ ಮಕ್ಕಳಿಗೆ 5,000 (ಹಿಂದೆ ₹ 3,000), ಐದರಿಂದ ಎಂಟನೇ ತರಗತಿ ವಿದ್ಯಾರ್ಥಿಗಳಿಗೆ ₹ 9,000 (ಹಿಂದೆ ₹ 8,000), ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ₹ 12,000 (ಹಿಂದೆ ₹ 10,000) ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ₹ 15,000 (ಹಿಂದೆ ₹ 10,000) ಪ್ರೋತ್ಸಾಹಧನ ನೀಡಲು ನಿರ್ಧರಿಸಲಾಗಿದೆ ಎಂದು ಅವರು ತಿಳಿಸಿದರು.

ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಚಿವ ಶಿವರಾಮ ಹೆಬ್ಬಾರ್ ಅವರು ವಲಸೆ ಕಾರ್ಮಿಕರಿಗೆ ದಿನಸಿ ಕಿಟ್ ವಿತರಿಸಿದರು. ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜೆ.ಕಲ್ಪನಾ, ಕಾರ್ಮಿಕ ಆಯುಕ್ತ ಅಕ್ರಂ ಪಾಷಾ, ಕಾರ್ಮಿಕ ಕಲ್ಯಾಣ ಮಂಡಳಿ ನಿರ್ದೇಶಕರಾದ ನಾಗನಾಥ, ಎಂ.ಪ್ರಕಾಶ್, ಶಿವಾನಿ ಭಟ್ಕಳ ಇದ್ದರು.

ಕೈಗಾರಿಕಾ ತರಬೇತಿ ಕೇಂದ್ರಗಳ ವಿದ್ಯಾರ್ಥಿಗಳಿಗೆ ₹ 20,000 (ಹಿಂದೆ ₹ 12,000), ಪದವಿ ವಿದ್ಯಾರ್ಥಿಗಳಿಗೆ ₹ 25,000 (ಹಿಂದೆ ₹ 15,000), ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ₹ 40,000 (ಹಿಂದೆ ₹ 25,000), ಡಿಪ್ಲೊಮಾ ವಿದ್ಯಾರ್ಥಿಗಳಿಗೆ ₹ 20,000 (ಹಿಂದೆ ₹ 15,000), ವೈದ್ಯಕೀಯ ಪದವಿ ವಿದ್ಯಾರ್ಥಿಗಳಿಗೆ ₹ 50,000 (ಹಿಂದೆ ₹ 30,000), ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಿಗೆ ₹ 70,000 (ಹಿಂದೆ ₹ 40,000) ಮತ್ತು ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿಗಳಿಗೆ ₹ 50,000 (ಹಿಂದೆ ₹ 25,000) ಪ್ರೋತ್ಸಾಹಧನ ನೀಡುವ ಪ್ರಸ್ತಾವಕ್ಕೆ ಮಂಡಳಿ ಒಪ್ಪಿಗೆ ನೀಡಿದೆ ಹೆಬ್ಬಾರ್ ಹೇಳಿದರು.

ರಾಷ್ಟ್ರೀಯ ಕಾನೂನು ಶಾಲೆ ಹಾಗೂ ಐಐಟಿಗಳಲ್ಲಿ ವ್ಯಾಸಂಗ ಮಾಡುವ ಕಟ್ಟಡ ಕಾರ್ಮಿಕರ ಮಕ್ಕಳ ಸಂಪೂರ್ಣ ಶೈಕ್ಷಣಿಕ ವೆಚ್ಚವನ್ನು ಮಂಡಳಿಯಿಂದ ಭರಿಸಲಾಗುವುದು. ಇತರ ಕಾನೂನು ಕಾಲೇಜುಗಳ ವಿದ್ಯಾರ್ಥಿಗಳಿಗೆ ₹ 30,000 ನೀಡಲಾಗುವುದು. ಅರೆ ವೈದ್ಯಕೀಯ ಮತ್ತು ಬಿ.ಎಡ್ ವಿದ್ಯಾರ್ಥಿಗಳಿಗೂ ಪ್ರೋತ್ಸಾಹ ಧನ ನೀಡಲು ನಿರ್ಧರಿಸಲಾಗಿದೆ ಎಂದು ಅವರು ಹೇಳಿದರು.

ಕಟ್ಟಡ ಕಾರ್ಮಿಕರ ವೈದ್ಯಕೀಯ ಸಹಾಯಧನವನ್ನು ₹ 10,000 ದಿಂದ ₹ 20,000ಕ್ಕೆ ಹಾಗೂ ವಿವಾಹ ಸಹಾಯಧನವನ್ನು ₹ 50,000ದಿಂದ ₹ 60,000ಕ್ಕೆ ಹೆಚ್ಚಿಸಲಾಗಿದೆ. ರಾಜ್ಯದ 8 ಲಕ್ಷ ಮಂದಿ ಕಾರ್ಮಿಕರು ಮತ್ತು ಅವರ ಕುಟುಂಬದ ಸದಸ್ಯರು ಈ ಯೋಜನೆಗಳ ಪ್ರಯೋಜನ ಪಡೆಯಲಿದ್ದಾರೆ. ಇದಕ್ಕಾಗಿ ವರ್ಷಕ್ಕೆ ₹ 100 ಕೋಟಿ ವೆಚ್ಚ ಮಾಡಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಜಿ.ಕಲ್ಪನಾ, ಕಾರ್ಮಿಕ ಇಲಾಖೆ ಆಯುಕ್ತ ಅಕ್ರಂ ಪಾಷಾ, ಕಾರ್ಮಿಕ ಕಲ್ಯಾಣ ಮಂಡಳಿ ನಿರ್ದೇಶಕರಾದ ನಾಗನಾಥ, ಪ್ರಕಾಶ ಎಂ. ನಾಡಗೇರ್, ಶಿವಾನಿ ಭಟ್ಕಳ, ಹಣಕಾಸು ಇಲಾಖೆಯ ಅಧಿಕಾರಿಗಳು ಮತ್ತು ವಿವಿಧ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಸಭೆಯಲ್ಲಿದ್ದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	18.32 ಕೋಟಿ ▲	3.04 ಕೋಟಿ ▲
ಸಕ್ರಿಯ ಪ್ರಕರಣ	1.15 ಕೋಟಿ ▲	5.05 ಲಕ್ಷ ▼
ಗುಣಮುಖ	16.77 ಕೋಟಿ ▲	2.95 ಕೋಟಿ ▲
ಸಾವು	39.66 ಲಕ್ಷ ▲	4.00 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.92 ಲಕ್ಷ ▲	43,169 ▼
ಗುಣಮುಖ	3.69 ಲಕ್ಷ ▼	54,246 ▼
ಸಾವು	8,505 ▲	782 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 14,195 ▲ ಅಮೆರಿಕ; 45,859 ▼ ಬ್ರೆಜಿಲ್; 21,042 ▲ ರಷ್ಯಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 48.93 ▼ ಅಮೆರಿಕ; 11.82 ▼ ಬ್ರೆಜಿಲ್; 3.78 ▲ ರಷ್ಯಾ

(ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು): 1.22 ಲಕ್ಷ ಮಹಾರಾಷ್ಟ್ರ ▲; 24,981 ದೆಹಲಿ ▲; 32,721 ತಮಿಳುನಾಡು ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 60.70 ಮಹಾರಾಷ್ಟ್ರ ▲; 29.37 ಕೇರಳ ▲; 24.84 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ಜಲಮಂಡಳಿ: ಅರ್ಹ ಅಭ್ಯರ್ಥಿಗಳಿಗೆ ದಾಖಲಾತಿ ಪರಿಶೀಲನೆಗೆ ಆಹ್ವಾನ

ಬಿಇ ಅಭ್ಯರ್ಥಿಗಳೂ ಎಇ ಆಗಬಹುದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿಪೂರ್ವ ಅಥವಾ ಪದವಿಯ ಯಾವುದೇ ಹಂತದಲ್ಲಿ ಕಂಪ್ಯೂಟರ್ ವಿಜ್ಞಾನ ವ್ಯಾಸಂಗ ಮಾಡಿದ ಅಭ್ಯರ್ಥಿಗಳು ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರು ಎಂದು ಬೆಂಗಳೂರು ಜಲಮಂಡಳಿ ಹೇಳಿದೆ. ಅಲ್ಲದೆ, ಅರ್ಹ ಅಭ್ಯರ್ಥಿಗಳನ್ನು ದಾಖಲೆ ಪರಿಶೀಲನೆಗೆ ಆಹ್ವಾನಿಸಿದೆ.

ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದರೂ, ‘ಕಂಪ್ಯೂಟರ್ ಸಾಕ್ಷರತೆ’ ಕೋರ್ಸ್‌ನ ಪ್ರಮಾಣಪತ್ರ ಸಲ್ಲಿಸದವರಿಗೆ ಸಹಾಯಕ ಎಂಜಿನಿಯರ್ ಹುದ್ದೆ ನೀಡಲು ಸಾಧ್ಯವಿಲ್ಲ ಎಂದು ಜಲಮಂಡಳಿ ಹೇಳಿತ್ತು. ಪದವಿಯಲ್ಲಿ ಕಂಪ್ಯೂಟರ್ ಸೈನ್ಸ್ ಓದಿದ ಅನೇಕ ಅಭ್ಯರ್ಥಿಗಳು ಅವಕಾಶದಿಂದ ವಂಚಿತರಾಗಿದ್ದರು. ಈ ಕುರಿತು ‘ಬಿಇ ಪದವೀಧರ ಎಇ ಹುದ್ದೆಗೆ ಅನರ್ಹ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ 2020ರ ಮಾರ್ಚ್ 3ರಂದು ವಿಶೇಷ ವರದಿ ಪ್ರಕಟವಾಗಿತ್ತು.

ಬಿ.ಇ ಪದವೀಧರ ಎ.ಇ ಹುದ್ದೆಗೆ ಅನರ್ಹ

‘ಪ್ರಜಾವಾಣಿ’ಯಲ್ಲಿ ಪ್ರಕಟವಾಗಿದ್ದ ವಿಶೇಷ ವರದಿಯ ಸ್ಕ್ರೀನ್‌ಶಾಟ್

ವರದಿ ಫಲಶ್ರುತಿ

‘ಬಿಇಯಲ್ಲಿ ಮೊದಲ ರ‍್ಯಾಂಕ್ ಬಂದಿದ್ದರೂ, ನಾನು ಎಇ ಹುದ್ದೆಗೆ ಅರ್ಹವಾಗಿರಲಿಲ್ಲ. ಕೇವಲ ಕಂಪ್ಯೂಟರ್ ಸಾಕ್ಷರತೆ ಕೋರ್ಸ್‌ನ ಪ್ರಮಾಣಪತ್ರ ನೀಡದ ಕಾರಣಕ್ಕೆ ಅವಕಾಶ ನಿರಾಕರಿಸಿದ್ದರು. ‘ಪ್ರಜಾವಾಣಿ’ಯಲ್ಲಿ ಬಂದ ವರದಿಯ ಆಧಾರದ ಮೇಲೆ ಜಲ ಮಂಡಳಿಯನ್ನು ಪ್ರಶ್ನಿಸಿದ್ದೆವು. ಇದೇ ವರದಿ ಆಧರಿಸಿ, ನ್ಯಾಯಾಲಯದ ಮೊರೆ ಹೋಗಿದ್ದೆವು. ಈಗ ನಮಗೆ ನ್ಯಾಯ ಸಿಕ್ಕಿದೆ’ ಎಂದು ಅಭ್ಯರ್ಥಿಯೊಬ್ಬರು ಸಂತಸ ಹಂಚಿಕೊಂಡರು.

‘ಪಿಯು ಅಥವಾ ಪದವಿಯ ಯಾವುದೇ ಹಂತದಲ್ಲಿ ಕಂಪ್ಯೂಟರ್ ಸಾಕ್ಷರತೆ ಓದಿದ್ದರೂ ಹುದ್ದೆಗೆ ಅರ್ಹ ಎಂದು ಜಲಮಂಡಳಿ ಹೇಳಿದೆ. ಈಗ ದಾಖಲೆ ಪರಿಶೀಲನೆಗೆ ಆಹ್ವಾನಿಸಿದೆ’ ಎಂದು ಅವರು ತಿಳಿಸಿದರು.

15,16ಕ್ಕೆ ದಾಖಲೆ ಪರಿಶೀಲನೆ: 24.08.2018ರ ನೇರ ನೇಮಕಾತಿ ಅಧಿಸೂಚನೆಗೆ ಅನುಗುಣವಾಗಿ ವಿವಿಧ ವೃಂದದ ಒಟ್ಟು 30 ಅಭ್ಯರ್ಥಿಗಳನ್ನು ಮೂಲ ದಾಖಲೆಗಳ ಪರಿಶೀಲನೆಗೆ ಆಹ್ವಾನಿಸಲಾಗಿದೆ. ಇದೇ 15 ಮತ್ತು 16ಕ್ಕೆ ದಾಖಲೆ ಪರಿಶೀಲನೆ ನಡೆಯಲಿದೆ.

ಮಾಹಿತಿಗೆ ಮಂಡಳಿಯ ಜಾಲತಾಣ www.bwssb.gov.in ಸಂಪರ್ಕಿಸಬಹುದು.

ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ಗುರುವಾರ ನಡೆದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಪತ್ರಕರ್ತರ ಬೇಡಿಕೆಗಳುಳ್ಳ ಮನವಿಯನ್ನು ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರಿಗೆ ಸಲ್ಲಿಸಿದರು

ಪತ್ರಕರ್ತರಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಲಹೆ

‘ವೇಗದ ಭರದಲ್ಲಿ ಸುದ್ದಿಯ ಸಾರವನ್ನು ಮರೆಯದಿರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ವೇಗವಾಗಿ ಸುದ್ದಿ ಪ್ರಕಟಿಸುವ ಭರದಲ್ಲಿ ಪತ್ರಕರ್ತರು ಸುದ್ದಿಯ ಸಾರವನ್ನು ಮರೆಯಬಾರದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಲಹೆ ನೀಡಿದರು.

ಪತ್ರಿಕಾ ದಿನಾಚರಣೆ ಪ್ರಯುಕ್ತ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘಗಳು ಜಂಟಿಯಾಗಿ ಗುರುವಾರ ಆಯೋಜಿಸಿದ್ದ ಆನ್‌ಲೈನ್ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಎರಡು ಶತಮಾನಗಳ ಹಿಂದೆ ಹರ್ಮನ್ ಮೊಗ್ಲಿಂಗ್ ಮೂಲಕ ಕನ್ನಡ ಪತ್ರಿಕೋದ್ಯಮ ಆರಂಭವಾಯಿತು. ಈಗ ತಂತ್ರಜ್ಞಾನ ಮತ್ತು ಇಂಟರ್‌ನೆಟ್ ಸೇವೆಯ ಲಭ್ಯತೆಯಿಂದಾಗಿ ಪತ್ರಿಕೋದ್ಯಮದ ಸ್ವರೂಪವೇ ಬದಲಾಗಿದೆ. ಎಷ್ಟೇ ಅವಸರ, ಒತ್ತಡಗಳು ಇದ್ದರೂ ಸತ್ಯ, ಪ್ರಾಮಾಣಿಕತೆ ಮತ್ತು ವಸ್ತುನಿಷ್ಠತೆಯ ಆಧಾರದಲ್ಲೇ ಸುದ್ದಿಗಳನ್ನು ನೀಡುವುದನ್ನು ರೂಢಿಸಿಕೊಂಡರೆ ಮಾತ್ರ ಮಾಧ್ಯಮ ಕ್ಷೇತ್ರದ ನೈಜ ಧ್ಯೇಯದಂತೆ ನಡೆದಂತಾಗುತ್ತದೆ ಎಂದರು.

ಕೋವಿಡ್ ಅವಧಿಯಲ್ಲಿ ಪತ್ರಕರ್ತರು ಮತ್ತು ಮಾಧ್ಯಮ ಕ್ಷೇತ್ರದ ನೌಕರರ ಹಿತರಕ್ಷಣೆಗೆ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. ಕೋವಿಡ್‌ನಿಂದ ಮೃತಪಟ್ಟ 31 ಪತ್ರಕರ್ತರ ಕುಟುಂಬಗಳಿಗೆ ತಲಾ ₹ 5 ಲಕ್ಷ ಪರಿಹಾರ ವಿತರಿಸಲಾಗಿದೆ. 25,000ಕ್ಕೂ ಹೆಚ್ಚು ಪತ್ರಕರ್ತರು ಮತ್ತು ಅವರ ಕುಟುಂಬದವರಿಗೆ ಉಚಿತವಾಗಿ ಕೋವಿಡ್ ಲಸಿಕೆ ನೀಡಲಾಗಿದೆ ಎಂದು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ‘ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಪತ್ರಕರ್ತರಿಗೆ ತಮಿಳುನಾಡು ಮಾದರಿಯಲ್ಲಿ ನೆರವು ನೀಡಬೇಕು. ಗ್ರಾಮೀಣ ಪ್ರದೇಶದ ಪತ್ರಕರ್ತರಿಗೆ ಆರೋಗ್ಯ ವಿಮೆ ಮತ್ತು ಬಸ್ ಸೌಲಭ್ಯ ಒದಗಿಸಬೇಕು’ ಎಂದು ಮನವಿ ಮಾಡಿದರು.

ಮುಖ್ಯಮಂತ್ರಿಯವರ ಸಲಹೆಗಾರ ಎಂ. ಲಕ್ಷ್ಮಿನಾರಾಯಣ, ಮಾಧ್ಯಮ ಸಲಹೆಗಾರ ಎನ್. ಭೃಂಗೀಶ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಡಾ.ಪಿ.ಎಸ್. ಹರ್ಷ, ಇಂಡಿಯನ್ ಫೆಡರೇಷನ್ ಫಾರ್ ವರ್ಕಿಂಗ್ ಜರ್ನಲಿಸ್ಟ್ಸ್ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ, ಕಟ್ಟಡ ಸಮಿತಿ ಅಧ್ಯಕ್ಷ ಮದನ್ ಗೌಡ, ಕಾರ್ಯನಿರತ ಪತ್ರಕರ್ತರ ಸಂಘದ ಪದಾಧಿಕಾರಿಗಳಾದ ಮತ್ತಿಕೆರೆ ಜಯರಾಂ, ಲೋಕೇಶ್, ಪುಂಡಲೀಕ ಬಾಳೋಜಿ, ಬಿ. ಮಲ್ಲಿಕಾರ್ಜುನ, ಸಂಜೀವ್ ರಾವ್ ಕುಲಕರ್ಣಿ, ಉಮೇಶ್ವರ, ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳ ಸಂಪಾದಕರ ಸಂಘದ ಅಧ್ಯಕ್ಷ ಕೆಂಚೇಗೌಡ ಇದ್ದರು.

ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಆಯೋಜಿಸಿದ ಲಸಿಕೆ ವಿತರಣಾ ಅಭಿಯಾನದಲ್ಲಿ ಬಿಪಿಎಲ್ ಕುಟುಂಬದ ಸದಸ್ಯರು ಲಸಿಕೆ ಪಡೆದುಕೊಂಡರು.

ಬಿಪಿಎಲ್: ಸಾವಿರ ಮಂದಿಗೆ ಲಸಿಕೆ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಸಂಸ್ಥೆಯು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ (ಬಿಪಿಎಲ್) ಸಾವಿರ ಮಂದಿಗೆ ನಗರದಲ್ಲಿ ಉಚಿತವಾಗಿ ಕೋವಿಡ್ ಲಸಿಕೆ ವಿತರಿಸಿದೆ.

ಈ ಕಾರ್ಯಕ್ಕೆ ನಾರಾಯಣ ಹೃದಯಾಲಯ, ಸರ್ಕಾರೇತರ ಸಂಸ್ಥೆಯಾದ ಥನಲ್, ಕರ್ನಾಟಕ ಬೆಂಗಾಲಿ ಸ್ವರ್ಣ ಶಿಲ್ಪಿ ಅಸೋಸಿಯೇಷನ್ ಹಾಗೂ ವಿಶ್ವಕರ್ಮ ಸೇವಾ ಸಮಿತಿ ಸಹಕಾರ ನೀಡಿವೆ.

‘ಕೋವಿಡ್ ಮೂರನೇ ಅಲೆಯನ್ನು ಎದುರಿಸಬೇಕಾದರೆ ದೇಶದ ಜನತೆ ಲಸಿಕೆ ಪಡೆದುಕೊಳ್ಳಬೇಕು. ರೋಗನಿರೋಧಕ ಶಕ್ತಿ ವೃದ್ಧಿಗೆ ಲಸಿಕೆ ಸಹಕಾರಿ. ಹಾಗಾಗಿ, ದುರ್ಬಲ ವರ್ಗದವರಿಗೆ ಲಸಿಕೆ ಪಡೆಯಲು ನೆರವಾಗುತ್ತಿದ್ದೇವೆ. ಸಮಾಜದ ಆರೋಗ್ಯ ಮತ್ತು ಯೋಗಕ್ಷೇಮ ಕಾಪಾಡಲು ಎಲ್ಲ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ’ ಎಂದು ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹ್ಮದ್ ಅವರು ತಿಳಿಸಿದರು.

ಓಕಳಿಪುರದಲ್ಲಿರುವ ರೇಷ್ಮೆ ಭವನಕ್ಕೆ ಭೇಟಿ ನೀಡಿದ್ದ ತೋಟಗಾರಿಕಾ ಹಾಗೂ ರೇಷ್ಮೆ ಸಚಿವ ಆರ್.ಶಂಕರ್, ಇಲಾಖೆಯ ನೂತನ ಕಟ್ಟಡ ನಿರ್ಮಾಣಕ್ಕಾಗಿ ಸ್ಥಳ ಪರಿಶೀಲಿಸಿದರು. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ಅಧ್ಯಕ್ಷೆ ಸವಿತಾ ವಿ.ಅಮರಶೆಟ್ಟಿ, ವ್ಯವಸ್ಥಾಪಕ ನಿರ್ದೇಶಕಿ ಬಿ.ಫೌಜಿಯಾ ತರನ್ನುಮ್, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಆಯುಕ್ತ ಪೆದ್ದಪ್ಪಯ್ಯ ಇದ್ದರು.

‘ಪರಿಸರ ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಗಳನ್ನು ಉಲ್ಲಂಘಿಸುವ ಕೈಗಾರಿಕೆಗಳ ಮೇಲೆ ಮುಲಾಜಿಲ್ಲದೆ ಕ್ರಮ ಕೈಗೊಂಡು, ದಂಡ ವಿಧಿಸಲಾಗುವುದು. ತಪ್ಪಿತಸ್ಥ ಅಧಿಕಾರಿಗಳ ಮೇಲೆಯೂ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಪರಿಸರ ಜೀವಿಶಾಸ್ತ್ರ ಹಾಗೂ ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಎಚ್ಚರಿಕೆ ನೀಡಿದರು.

ಪರಿಸರ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮರಳು, ಕಲ್ಲು, ಗ್ರಾನೈಟ್ ಸಾಗಣೆಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನೀಡುತ್ತಿರುವ ಪರವಾನಗಿ ಮಾದರಿಯಲ್ಲಿ, ತ್ಯಾಜ್ಯ ವಿಲೇವಾರಿಗೆ ನಿಖರವಾಗಿ ತೂಕ ಮಾಡಿ ಪರವಾನಗಿ ನೀಡುವ ವ್ಯವಸ್ಥೆ ಜಾರಿಗೆ ತರಲಾಗುವುದು’ ಎಂದು ತಿಳಿಸಿದರು.

ಮುಂದಿನ ವಾರ ಪರಿಶೀಲನೆ: ‘ವಿವಿಧೆಡೆ ಕೈಗಾರಿಕೆಗಳು ತ್ಯಾಜ್ಯವನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸದೆ, ನದಿ- ಕೆರೆ ಸೇರಿದಂತೆ ಜಲಮೂಲಗಳಿಗೆ ನೇರವಾಗಿ ಹಾಕುತ್ತಿರುವುದು ಮತ್ತು ಖಾಲಿ ಜಮೀನುಗಳಲ್ಲಿ ತುಂಬುತ್ತಿರುವ ಬಗ್ಗೆ ದೂರುಗಳು ಬಂದಿವೆ. ಹೀಗಾಗಿ, ಮುಂದಿನ ವಾರದಿಂದ ಕೈಗಾರಿಕಾ ಪ್ರದೇಶಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸುತ್ತೇನೆ’ ಎಂದರು.

‘ಕೆ.ಸಿ ವ್ಯಾಲಿ ಯೋಜನೆಯಡಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ 129 ಕೆರೆಗಳನ್ನು ತುಂಬಿಸುವ ಕಾರ್ಯ ಪ್ರಗತಿಯಲ್ಲಿದ್ದು, 84 ಕೆರೆಗಳನ್ನು ತುಂಬಿಸಲಾಗಿದೆ. ಆದರೆ, ಮೊದಲ ಹಾಗೂ ಎರಡನೇ ಹಂತದಲ್ಲಿ ತ್ಯಾಜ್ಯ ನೀರನ್ನು ವೈಜ್ಞಾನಿಕವಾಗಿ ಸಂಸ್ಕರಿಸದೇ ಕೆರೆಗಳನ್ನು ತುಂಬಿಸಿರುವುದರಿಂದ ಆ ಭಾಗದ ಅಂತರ್ಜಲ ವಿಷವಾಗಿ ಬದಲಾಗಿದೆ. ಮೂರನೇ ಹಂತದಲ್ಲಿ ವೈಜ್ಞಾನಿಕವಾಗಿ ತ್ಯಾಜ್ಯ ನೀರು ಸಂಸ್ಕರಿಸಿ ಕೆರೆಗಳಿಗೆ ನೀರು ತುಂಬಿಸಲಾಗುವುದು’ ಎಂದು ಸಚಿವರು ಸೂಚಿಸಿದರು.

‘ಇಸ್ರೇಲ್ ತಂತ್ರಜ್ಞಾನ ಬಳಸಿ ತ್ಯಾಜ್ಯ ನೀರು ಸಂಸ್ಕರಿಸಿದರೆ ನೀರಿನ ಗುಣಮಟ್ಟ ಉತ್ತಮವಾಗಲಿದ್ದು, ಕೃಷಿಗೆ ಬಳಸಬಹುದು. ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು’ ಎಂದೂ ಅಧಿಕಾರಿಗಳಿಗೆ ಯೋಗೀಶ್ವರ್ ಅವರು ಸಲಹೆ ನೀಡಿದರು.

ಎನ್‌ಎಲ್‌ಎಸ್‌ಐಯು: ರಾಜ್ಯದ ವಿದ್ಯಾರ್ಥಿಗಳಿಗೆ ಶೇ 25 ಸೀಟು ಮೀಸಲು

ಬೆಂಗಳೂರು: ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿಯು (ಎನ್‌ಎಲ್‌ಎಸ್‌ಐಯು) ಕರ್ನಾಟಕದ ವಿದ್ಯಾರ್ಥಿಗಳಿಗೆ ಈ ವರ್ಷದಿಂದ ಶೇ 25ರಷ್ಟು ಸೀಟುಗಳನ್ನು ಮೀಸಲು ಇರಿಸಿದೆ. ಬೆಂಗಳೂರಿನಲ್ಲಿರುವ ಈ ವಿಶ್ವವಿದ್ಯಾಲಯವು ಸ್ಥಳೀಯ ಕೋಟಾದಡಿ ಈ ಮೀಸಲಾತಿಯನ್ನು ನೀಡಿದೆ.

ಕರ್ನಾಟಕದ ಶಿಕ್ಷಣ ಸಂಸ್ಥೆಗಳಲ್ಲಿ 10 ವರ್ಷಗಳಿಗಿಂತ ಹೆಚ್ಚು ಕಾಲ ಓದಿದವರು ಈ ಕೋಟಾದಡಿ ಅರ್ಜಿ ಸಲ್ಲಿಸಬಹುದು. 2021–22ನೇ ಶೈಕ್ಷಣಿಕ ವರ್ಷದಲ್ಲಿ ಬಿಎ–ಎಲ್‌ಎಲ್‌ಬಿ ಮತ್ತು ಎಲ್‌ಎಲ್‌ಎಂಗೆ ಪ್ರವೇಶ ಪಡೆಯ ಬಯಸುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆದರೆ, ಈ ಸೌಲಭ್ಯ ಸಿಗಬೇಕೆಂದರೆ, ಅಭ್ಯರ್ಥಿಗಳು ಕ್ಲ್ಯಾಟ್ 2021ರ (ಸಾಮಾನ್ಯ ಕಾನೂನು ಪ್ರವೇಶ ಪರೀಕ್ಷೆ) ಅರ್ಜಿಯನ್ನು ಪರಿಷ್ಕರಿಸಿ, ಕರ್ನಾಟಕದ ವಿದ್ಯಾರ್ಥಿ ಎಂಬ ಮಾಹಿತಿಯನ್ನು ಭರ್ತಿ ಮಾಡಬೇಕು ಎಂದು ವಿಶ್ವವಿದ್ಯಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗಳು ನೀಡಿದ ವ್ಯಾಸಂಗ ಪ್ರಮಾಣ ಪತ್ರವನ್ನು ಕೌನ್ಸೆಲಿಂಗ್ ಅಥವಾ ಪ್ರವೇಶ ಪ್ರಕ್ರಿಯೆ ವೇಳೆ ಸಲ್ಲಿಸಬೇಕು ಎಂದೂ ವಿಶ್ವವಿದ್ಯಾಲಯ ಹೇಳಿದೆ.

ರಾಜ್ಯದ ವಿದ್ಯಾರ್ಥಿಗಳ ಹಿತ ಕಾಪಾಡುವ ಮತ್ತು ಕನ್ನಡಿಗ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಮೀಸಲಾತಿ ನಿಗದಿ ಮಾಡಲು ಕಾಯ್ದೆಗೆ ತಿದ್ದುಪಡಿ ಮಾಡಿತ್ತು. ಈ ವಿದ್ಯಾಲಯಕ್ಕೆ ರಾಜ್ಯ ಸರ್ಕಾರ ಭೂಮಿ ನೀಡಿದ್ದೂ ಅಲ್ಲದೆ, ಅನುದಾನ ನೀಡುತ್ತಲೇ ಬಂದಿತ್ತು. ಎಂದು ಹಿಂದಿನ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಕಾಯ್ದೆ ತಿದ್ದುಪಡಿ ಸಂದರ್ಭದಲ್ಲಿ ತಿಳಿಸಿದ್ದರು.

ಪ್ರಯಾಣಿಕರನ್ನು ಆಕರ್ಷಿಸುವ ಉದ್ದೇಶದಿಂದ ಸುರಂಗ ನಿರ್ಮಾಣ

ರೈಲು ನಿಲ್ದಾಣದಲ್ಲಿ ‘ಅಮೆಜಾನ್ ನದಿ’ ಅನುಭವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಕ್ಕೆ ಭೇಟಿ ನೀಡುವವರಿಗೆ ಇನ್ಮುಂದೆ ವಿಶೇಷ ಆಕರ್ಷಣೆಯೊಂದು ಸ್ವಾಗತ ಕೋರಲಿದೆ.

ರೈಲುಗಳಿಗಾಗಿ ಕಾಯುವ ಪ್ರಯಾಣಿಕರನ್ನು ಆಕರ್ಷಿಸುವ ಉದ್ದೇಶದಿಂದ ನಿಲ್ದಾಣದಲ್ಲಿ ಅಮೆಜಾನ್ ನದಿ ಕಲ್ಪನೆಯಡಿ 12 ಅಡಿ ಉದ್ದದ ಸುರಂಗವನ್ನು ನಿರ್ಮಿಸಲಾಗಿದೆ. ಈ ಸುರಂಗದೊಳಗೆ ಮತ್ಸ್ಯಾಗಾರ (ಅಕ್ವೇರಿಯಂ) ರೂಪಿಸಲಾಗಿದೆ. ಸುರಂಗದೊಳಗೆ ಸಾಗುತ್ತಿದ್ದರೆ, ಅಮೆಜಾನ್ ನದಿಯೊಳಗೆ ಸಾಗುತ್ತಿರುವ ಮೀನುಗಳನ್ನು ಪ್ರತ್ಯಕ್ಷ ನೋಡುತ್ತಿರುವಂತೆ ಭಾಸವಾಗುತ್ತದೆ. ಸಾಗರದಲ್ಲಿ ಕಾಣಸಿಗುವ ಮತ್ಸ್ಯಪ್ರಭೇದಗಳು, ಸಮುದ್ರಜೀವಿಗಳ ಮಾದರಿಗಳು ಇಲ್ಲಿ ಇವೆ. ಈ ಸುರಂಗ ಪ್ರವೇಶಕ್ಕೆ ₹25 ಶುಲ್ಕ ನಿಗದಿ ಮಾಡಲಾಗಿದೆ.

ಭಾರತೀಯ ರೈಲ್ವೆ ನಿಲ್ದಾಣ ಅಭಿವೃದ್ಧಿ ನಿಗಮವು (ಐಆರ್‌ಎಸ್‌ಡಿಸಿ) ₹1.2 ಕೋಟಿ ವೆಚ್ಚದಲ್ಲಿ ಈ ಸುರಂಗವನ್ನು ನಿರ್ಮಿಸಿದೆ.

‘ಕೋವಿಡ್ ಇರುವುದರಿಂದ ಸದ್ಯ ಈ ಸುರಂಗದಲ್ಲಿ ಒಂದು ಬಾರಿಗೆ 25 ಜನರಿಗೆ ಮಾತ್ರ ಪ್ರವೇಶಾವಕಾಶ ನೀಡಲಾಗುತ್ತಿದೆ. ಜನರು ರೈಲಿಗಾಗಿ ಕಾಯುವ ಸಮಯವನ್ನೂ ಸಂತಸದಿಂದ ಕಳೆಯಬೇಕು ಎಂಬ ಉದ್ದೇಶ ನಮ್ಮದು’ ಎಂದು ಐಆರ್‌ಎಸ್‌ಡಿಸಿ ವ್ಯವಸ್ಥಾಪಕ ನಿರ್ದೇಶಕ ಎಸ್.ಕೆ. ಲೋಹಿಯಾ ಹೇಳಿದರು.

ನಗರದ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ‘ಅಮೆಜಾನ್ ನದಿ’ ಕಲ್ಪನೆಯಡಿ ರೂಪಿಸಲಾಗಿರುವ ಸುರಂಗವನ್ನು ವೀಕ್ಷಿಸುತ್ತಿರುವ ಸಿಬ್ಬಂದಿ —ಪ್ರಜಾವಾಣಿ ಚಿತ್ರ

ಶುಕ್ರವಾರ, ಜುಲೈ 2, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 183 | ಪುಟ 12

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಲಾಕ್‌ಡೌನ್ ನಿರ್ಬಂಧ ಸಡಿಲಿಕೆಯಿಂದ ಚಿತ್ರರಂಗದ ಚಟುವಟಿಕೆ ಮತ್ತೆ ಗರಿಗೆದರುತ್ತಿದ್ದು, ಚಿತ್ರೀಕರಣದಲ್ಲಿ ತಲ್ಲೀನರಾಗಿರುವ ನಟ ನಿಶ್ವಿಕಾ ನಾಯ್ಡು 'ಗುರು ಶಿಷ್ಯರು' ಚಿತ್ರದಲ್ಲಿ ಹಳ್ಳಿಮೇಷ್ಟ್ರಿಗೆ 'ಸಖತ್' ಜೋಡಿಯಾಗಿದ್ದಾರೆ.



ಆಳ-ಅಗಲ ಗಡಿನಾಡು ಕಾಸರಗೋಡಿನಲ್ಲಿ ಕನ್ನಡಕ್ಕೆ ಕುತ್ತು

'ಡ್ರೋನ್ ದಾಳಿ ಎದುರಿಸಲು ಸಿದ್ಧತೆ' 9

ರಾಜ್ಯದಲ್ಲಿ ಸಕ್ರಿಯ ಪ್ರಕರಣ 65 ಸಾವಿರಕ್ಕೆ ಇಳಿಕೆ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,319 ▼	15,680 ▼	₹ 48,550 (ಬೆಂಗಳೂರು)	₹70,900 (ಬೆಂಗಳೂರು)	74.55 ▼

SADGURU AYURVEDA

ಸದ್ಗುರು ಆಯುರ್ವೇದ

GRADE 1 SOAP

ಗ್ರಾಮ್ ಫ್ಲೋರ್ ಸೋಪ್

ಪರಿಶುದ್ಧ ಕಡಲೆ ಹಿಟ್ಟಿನೊಂದಿಗೆ ತಯಾರಿಸಲಾಗಿದೆ

For Trade Enquiry.: 8970703070

GRAMFLOURSOAP

Protect Skin, Improves Fairness and Complexion

ಹೆಚ್ಚು ವೇಗವಾಗಿ, ವ್ಯಾಪಕವಾಗಿ ಹರಡುವ ಸಾಮರ್ಥ್ಯದ ಕೊರೊನಾ ರೂಪಾಂತರಿ

ನೂರು ದೇಶಗಳಲ್ಲಿ ಡೆಲ್ಟಾ ತಳಿ

ವಿಶ್ವಸಂಸ್ಥೆ/ಜಿನೀವಾ (ಪಿಟಿಐ): ಕೋವಿಡ್-19ರ ಡೆಲ್ಟಾ ರೂಪಾಂತರ ತಳಿಯು ವೇಗವಾಗಿ ಮತ್ತು ವ್ಯಾಪಕವಾಗಿ ಹರಡುತ್ತಿದೆ. ಜಗತ್ತಿನಾದ್ಯಂತ ಮತ್ತೊಂದು ಬಾರಿ ಕೋವಿಡ್ ಪ್ರಕರಣಗಳು ಹೆಚ್ಚಳವಾಗಲು ಇದು ಕಾರಣವಾಗಬಹುದು ಎಂಬ ಆತಂಕ ವ್ಯಕ್ತವಾಗಿದೆ.

ಸುಮಾರು ನೂರು ದೇಶಗಳಲ್ಲಿ ಡೆಲ್ಟಾ ರೂಪಾಂತರ ತಳಿ ಪತ್ತೆಯಾಗಿದೆ. ಅತಿ ವೇಗವಾಗಿ ಹರಡುವ ಸಾಮರ್ಥ್ಯ ಇರುವ ಈ ತಳಿಯು ಜಗತ್ತಿನಲ್ಲಿ ಅತ್ಯಂತ ವ್ಯಾಪಕವಾಗಿರುವ ಕೊರೊನಾ ವೈರಾಣು ತಳಿ ಎನಿಸಿಕೊಳ್ಳಲಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಗುರುವಾರ ಎಚ್ಚರಿಕೆ ನೀಡಿದೆ.

'96 ದೇಶಗಳಲ್ಲಿ ಡೆಲ್ಟಾ ರೂಪಾಂತರ ತಳಿಯು ಪತ್ತೆಯಾಗಿದೆ. ತಳಿಗಳನ್ನು ಗುರುತಿಸುವ ಸಾಮರ್ಥ್ಯಕ್ಕೆ ಮಿತಿ ಇದೆ. ಹಾಗಾಗಿ, ಇನ್ನೂ ಹೆಚ್ಚಿನ ದೇಶಗಳಲ್ಲಿಯೂ ಈ ತಳಿ ಇರುವ ಸಾಧ್ಯತೆ ಇದೆ. ಪ್ರಕರಣಗಳ ಸಂಖ್ಯೆ ಹೆಚ್ಚಳ ಮತ್ತು ರೋಗಿಗಳು ಆಸ್ಪತ್ರೆಗೆ ದಾಖಲಾಗಲು ಈ ತಳಿ ಕಾರಣವಾಗುತ್ತಿದೆ ಎಂದು ಹಲವು ದೇಶಗಳು ಹೇಳಿವೆ' ಎಂದು ಆರೋಗ್ಯ ಸಂಸ್ಥೆ ತಿಳಿಸಿದೆ.

ಮುಂದಿನ ಕೆಲವು ತಿಂಗಳುಗಳಲ್ಲಿ ಈ ವೈರಾಣು ತಳಿಯು ಇತರ ಎಲ್ಲ ತಳಿಗಳನ್ನು ಹಿಂದಿಕ್ಕಿ ಅತ್ಯಂತ ಅಪಾಯಕಾರಿ ತಳಿ ಎನಿಸಿಕೊಳ್ಳಲಿದೆ ಎಂದು ಅದು ಎಚ್ಚರಿಸಿದೆ.

ವ್ಯಕ್ತಿ, ಸಮುದಾಯ ಮತ್ತು ಸಮಾಜ ಮಟ್ಟದಲ್ಲಿ ಸೋಂಕು ತಡೆ ಮತ್ತು ನಿಯಂತ್ರಣದ ಎಲ್ಲ ಲಭ್ಯ ಕ್ರಮಗಳನ್ನು ಸಾಂಕ್ರಾಮಿಕದ ಆರಂಭದಿಂದಲೇ ಜಾರಿಗೆ ತರಲಾಗಿದೆ. ಅವೇ ಕ್ರಮಗಳು ಡೆಲ್ಟಾ ತಳಿಯ ತಡೆಗೂ ಅನ್ವಯ ಆಗಲಿವೆ. ಅಂದರೆ, ಅಂತರ ಕಾಯ್ದುಕೊಳ್ಳುವಿಕೆ, ಮಾಸ್ಕ್ ಧರಿಸುವಿಕೆಯಂತಹ ಕ್ರಮಗಳನ್ನು ಪಾಲಿಸಬೇಕು ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ರೂಪಾಂತರ ತಳಿಯು ಹೆಚ್ಚು ವೇಗವಾಗಿ ಮತ್ತು ವ್ಯಾಪಕವಾಗಿ ಹರಡುತ್ತದೆ ಎಂದಾದರೆ, ಅದನ್ನು ತಡೆಯುವುದಕ್ಕೆ ಕೈಗೊಳ್ಳುವ ಕ್ರಮಗಳು ದೀರ್ಘ ಕಾಲ ಜಾರಿಯಲ್ಲಿ ಇರಬೇಕಾಗುತ್ತದೆ ಎಂದೂ ಡಬ್ಲ್ಯುಎಚ್‌ಒ ತಿಳಿಸಿದೆ. ಡೆಲ್ಟಾ ತಳಿಯು ಈವರೆಗೆ ಪತ್ತೆಯಾದ ತಳಿಗಳಲ್ಲಿ ಅತ್ಯಂತ ವೇಗವಾಗಿ ಹರಡುವಂತಹುದು ಎಂದು ಡಬ್ಲ್ಯುಎಚ್‌ಒ ಮಹಾ ನಿರ್ದೇಶಕ ಟೆಡ್ರೋಸ್ ಗೆಬ್ರೇಷಿಯಸ್ ಕಳೆದ ವಾರ ಹೇಳಿದ್ದರು.

ಕೆಲವು ದೇಶಗಳಲ್ಲಿ ಸಾಮಾಜಿಕ ನಿರ್ಬಂಧಗಳನ್ನು ಸಡಿಲಿಸಲಾಗಿದೆ ಮತ್ತು ಸೋಂಕು ಪ್ರಕರಣಗಳು ಹೆಚ್ಚಳವಾಗಿವೆ ಎಂದೂ ಅವರು ಎಚ್ಚರಿಕೆ ನೀಡಿದ್ದರು.

2 ಡೋಸ್ ರಕ್ಷಣೆ: ಕೋವಿಡ್ ಲಸಿಕೆಯ ಎರಡು ಡೋಸ್ ಪಡೆದುಕೊಂಡರೆ ಡೆಲ್ಟಾ ರೂಪಾಂತರಿ ತಳಿಯ ಸೋಂಕಿನಿಂದಲೂ ರಕ್ಷಣೆ ಪಡೆಯಬಹುದು ಎಂದು ಐರೋಪ್ಯ ಔಷಧ ಸಂಸ್ಥೆ (ಇಎಂಎ) ಹೇಳಿದೆ.

ಹೆಚ್ಚಿದ ಸಾವಿನ ಸಂಖ್ಯೆ: ರಷ್ಯಾ ತತ್ತರ

ಮಾಸ್ಕೊ (ಎಎಫ್‌ಪಿ): ಡೆಲ್ಟಾ ರೂಪಾಂತರ ತಳಿಯ ಹರಡುವಿಕೆಯ ವೇಗದ ಪರಿಣಾಮವು ರಷ್ಯಾದಲ್ಲಿ ಸ್ಪಷ್ಟವಾಗಿ ಕಾಣಿಸಿಕೊಂಡಿದೆ. ಗುರುವಾರ ರಷ್ಯಾದಲ್ಲಿ 672 ಜನರು ಕೋವಿಡ್‌ನಿಂದಾಗಿ ಮೃತಪಟ್ಟಿದ್ದಾರೆ. ಸತತ ಮೂರನೇ ದಿನವೂ ಸಾವಿನ ಸಂಖ್ಯೆ ದಾಖಲೆ ಮಟ್ಟದಲ್ಲಿ ಇದೆ.

ರಷ್ಯಾದಲ್ಲಿ ಮಂಗಳವಾರ ಮತ್ತು ಬುಧವಾರ ಕ್ರಮವಾಗಿ 669 ಮತ್ತು 652 ಮಂದಿ ಕೋವಿಡ್‌ನಿಂದಾಗಿ ಮೃತಪಟ್ಟಿದ್ದಾರೆ. ಡೆಲ್ಟಾ ತಳಿಯು ವೇಗವಾಗಿ ಹರಡುತ್ತಿರುವುದು ಮತ್ತು ಲಸಿಕೆ ಅಭಿಯಾನ ಕುಂಟುತ್ತಾ ಸಾಗುತ್ತಿರುವುದು ಪ್ರಕರಣಗಳು ಮತ್ತು ಸಾವಿನ ಸಂಖ್ಯೆ ಹೆಚ್ಚಳವಾಗಲು ಕಾರಣ ಎಂದು ಹೇಳಲಾಗಿದೆ.

ಯುರೋ ಕಪ್ 2020ರ ಸ್ಪೇನ್-ಸ್ವಿಟ್ಜರ್ಲೆಂಡ್ ನಡುವಣ ಕ್ವಾರ್ಟರ್ ಫೈನಲ್ ಪಂದ್ಯವು ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಶುಕ್ರವಾರ ನಡೆಯಲಿದೆ. ಸಾವಿರಾರು ಜನರು ಪಂದ್ಯವನ್ನು ವೀಕ್ಷಿಸಲಿದ್ದಾರೆ. ಪೀಟರ್ಸ್‌ಬರ್ಗ್‌ನಲ್ಲಿಯೇ ಅತಿ ಹೆಚ್ಚು ಅಂದರೆ 115 ಮಂದಿ ಕೋವಿಡ್‌ನಿಂದ ಗುರುವಾರ ಮೃತಪಟ್ಟಿದ್ದಾರೆ.

ಶೇ 90ರಷ್ಟು ಪ್ರಕರಣಗಳಿಗೆ ಡೆಲ್ಟಾ ವೈರಾಣು ಕಾರಣ ಎಂದು ಮಾಸ್ಕೊದ ಮೇಯರ್ ತಿಳಿಸಿದ್ದಾರೆ. ಅಲ್ಲಿ ಹೊಸ ನಿರ್ಬಂಧಗಳನ್ನು ಹೇರುವ ಬಗ್ಗೆ ಚಿಂತನೆ ನಡೆದಿದೆ.

ವಿವಿಧ ತಳಿಗಳು

172 ದೇಶಗಳು ಆಲ್ಫಾ ತಳಿ ಪತ್ತೆಯಾಗಿದೆ

120 ದೇಶಗಳು ಬೀಟಾ ತಳಿ ಕಂಡು ಬಂದಿದೆ

72 ದೇಶಗಳು ಗಾಮಾ ತಳಿ ಪತ್ತೆಯಾಗಿದೆ

ಕೋವಿಶೀಲ್ಡ್‌ಗೆ ಗ್ರೀನ್‌ಪಾಸ್

ಕೋವಿಶೀಲ್ಡ್ ಕೋವಿಡ್ ಲಸಿಕೆ ಹಾಕಿಸಿಕೊಂಡಿರುವವರಿಗೆ ಗ್ರೀನ್‌ಪಾಸ್ ನೀಡಲು ಐರೋಪ್ಯ ಒಕ್ಕೂಟದ ಒಂಬತ್ತು ರಾಷ್ಟ್ರಗಳು ಒಪ್ಪಿಗೆ ನೀಡಿವೆ.

ವಿವರ 9

ಲಸಿಕೆ ಕಾರ್ಯಕ್ರಮ ಕುಂಠಿತ

ಪ್ರತಿದಿನ ನೀಡಲಾದ ಸರಾಸರಿ ಡೋಸ್‌ಗಳ ಸಂಖ್ಯೆ ಇಳಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರದ ನೂತನ ಕೋವಿಡ್ ಲಸಿಕೆ ನೀತಿಯ ಅಡಿ ಜೂನ್ 21ರಂದು ಆರಂಭವಾದ ಲಸಿಕಾ ಕಾರ್ಯಕ್ರಮವು ಈಗ ಬಿರುಸು ಕಳೆದುಕೊಂಡಿದೆ. ಮೊದಲ ವಾರದಲ್ಲಿ ಪ್ರತಿದಿನ 60 ಲಕ್ಷಕ್ಕೂ ಹೆಚ್ಚು ಡೋಸ್‌ಗಳನ್ನು ಹಾಕಲಾಗಿತ್ತು. ಇದೇ ಮಂಗಳವಾರ, ಬುಧವಾರ ಮತ್ತು ಗುರುವಾರ ಕ್ರಮವಾಗಿ 27.54 ಲಕ್ಷ, 36.46 ಲಕ್ಷ ಮತ್ತು 41 ಲಕ್ಷ ಡೋಸ್ ಲಸಿಕೆಗಳನ್ನಷ್ಟೇ ನೀಡಲಾಗಿದೆ.

ನೂತನ ಲಸಿಕೆ ನೀತಿಯ ಅಡಿ ದೇಶದಲ್ಲಿ ತಯಾರಾಗುವ ಒಟ್ಟು ಲಸಿಕೆಯ ಡೋಸ್‌ಗಳಲ್ಲಿ ಶೇ 75ರಷ್ಟನ್ನು ಕೇಂದ್ರ ಸರ್ಕಾರವೇ ಖರೀದಿಸಿ ರಾಜ್ಯಗಳಿಗೆ ಪೂರೈಕೆ ಮಾಡುತ್ತದೆ. ಈ ಕಾರ್ಯಕ್ರಮದ ಅಡಿ ಜೂನ್ ಕೊನೆಯ ಎರಡು ವಾರಗಳಲ್ಲಿ ಪ್ರತಿದಿನ ಸರಾಸರಿ 64 ಲಕ್ಷ ಡೋಸ್‌ಗಳನ್ನು ನೀಡಲಾಗಿದೆ.

ಜೂನ್ 21ರಂದು ಜಾರಿಗೆ ಬಂದ ನೂತನ ನೀತಿಯ ಅಡಿ ಮೊದಲ ದಿನ 91 ಲಕ್ಷಕ್ಕೂ ಹೆಚ್ಚು ಡೋಸ್‌ಗಳನ್ನು ನೀಡಲಾಗಿತ್ತು. ನಂತರದ ನಾಲ್ಕು ದಿನ, ಪ್ರತಿದಿನ 60 ಲಕ್ಷಕ್ಕೂ ಹೆಚ್ಚು ಡೋಸ್ ನೀಡಲಾಗಿದೆ. ನಂತರದ ಎರಡು ದಿನ 50 ಲಕ್ಷಕ್ಕೂ ಹೆಚ್ಚು ಡೋಸ್‌ಗಳನ್ನು ನೀಡಲಾಗಿದೆ. ಜೂನ್ 27ರ ಭಾನುವಾರ 17.15 ಲಕ್ಷ ಡೋಸ್‌ಗಳನ್ನಷ್ಟೇ ನೀಡಲಾಗಿದೆ.

ಕೊನೆಯ ಎರಡು ವಾರದಲ್ಲಿ ಪ್ರತಿದಿನ ಹೆಚ್ಚು ಡೋಸ್‌ಗಳನ್ನು ನೀಡಿದ ಕಾರಣ ಜೂನ್‌ನಲ್ಲಿ ಪ್ರತಿದಿನ ನೀಡಲಾದ ಸರಾಸರಿ ಡೋಸ್‌ಗಳ ಸಂಖ್ಯೆ 40.35 ಲಕ್ಷದಷ್ಟಾಗಿದೆ. ಏಪ್ರಿಲ್ ಮತ್ತು ಮೇ ತಿಂಗಳಿಗೆ ಹೋಲಿಸಿದರೆ ಈ ಸಂಖ್ಯೆ ಸುಧಾರಿಸಿದೆ. ಏಪ್ರಿಲ್‌ನಲ್ಲಿ ಪ್ರತಿದಿನ ಸರಾಸರಿ 29.96 ಲಕ್ಷ ಡೋಸ್‌ಗಳನ್ನಷ್ಟೇ ನೀಡಲಾಗಿತ್ತು. ಮೇ ತಿಂಗಳಿನಲ್ಲಿ ಈ ಸಂಖ್ಯೆ 19.69 ಲಕ್ಷಕ್ಕೆ ಕುಸಿದಿತ್ತು.

'ಜುಲೈ ತಿಂಗಳಲ್ಲಿ ಎಲ್ಲಾ ರಾಜ್ಯಗಳಿಗೆ 12 ಕೋಟಿ ಡೋಸ್ ಲಸಿಕೆಗಳನ್ನು ಒದಗಿಸಲಾಗುತ್ತದೆ' ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ಹೇಳಿತ್ತು. ಅಷ್ಟೇ ಲಸಿಕೆ ದೊರೆತರೆ ಇಡೀ ತಿಂಗಳಲ್ಲಿ ಪ್ರತಿದಿನ ಸರಾಸರಿ 40 ಲಕ್ಷ ಡೋಸ್‌ಗಳನ್ನಷ್ಟೇ ನೀಡಲು ಸಾಧ್ಯ. ಇದು ಕೇಂದ್ರ ಸರ್ಕಾರದ ಗುರಿಗಿಂತ ಕಡಿಮೆ.

ಮುಖ್ಯಾಂಶಗಳು

- ಜುಲೈ 30ಗಳಲ್ಲೂ ಕಡಿಮೆ ಡೋಸ್‌ಗಳು ಲಭ್ಯ
- ಪ್ರತಿದಿನ ಸರಾಸರಿ 40 ಲಕ್ಷ ಡೋಸ್ ನೀಡಲಷ್ಟೇ ಸಾಧ್ಯ

ವರ್ಷಾಂತ್ಯಕ್ಕೆ ಎಲ್ಲರಿಗೂ ಲಸಿಕೆ ನೀಡುವುದಾದರೆ, ಪ್ರತಿದಿನ 90 ಲಕ್ಷ ಡೋಸ್ ನೀಡಬೇಕು. ಈ ಸಂಖ್ಯೆ ಇಳಿದಿದ್ದು ಒಳ್ಳೆಯದಲ್ಲ

ರಿಜೋ ಜಾನ್, ಕೋಯಿಕ್ಕೋಡ್ ಐಐಎಂ ಪ್ರಾಧ್ಯಾಪಕ

12 ಕೋಟಿ ಲಸಿಕೆ ಒದಗಿಸುತ್ತೇವೆ ಎಂದು 15 ದಿನ ಮೊದಲೇ ರಾಜ್ಯಗಳಿಗೆ ಮಾಹಿತಿ ನೀಡಿದ್ದೇವೆ. ಹೀಗಿದ್ದೂ ಪೂರೈಕೆ, ಸಾಗಾಟದಲ್ಲಿ ವ್ಯತ್ಯಯವಾದರೆ ಅದು ರಾಜ್ಯ ಸರ್ಕಾರಗಳದ್ದೇ ತಪ್ಪು

ಹರ್ಷವರ್ಧನ್, ಕೇಂದ್ರ ಆರೋಗ್ಯ ಸಚಿವ

'ರಾಜ್ಯಗಳಿಗೆ 94.6 ಲಕ್ಷ ಡೋಸ್ ಲಸಿಕೆ' 9

ರಾಜ್ಯ ಕೋವಿಡ್ ಅಂಕಿ–ಅಂಶ

28,47,013 ▲ ಒಟ್ಟು ಸೋಂಕಿತರು (28,43,810 ನಿನ್ನೆಯ ವಿವರ)

65,312 ▼ ಸಕ್ರಿಯ ಪ್ರಕರಣಗಳು

27,46,544 ▲ ಗುಣಮುಖರಾದವರು

35,134 ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	3,203	▼
ಗುಣಮುಖ	14,302	▲
ಸಾವು	94	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಗ್ರಾ.ಪಂ ಗುತ್ತಿಗೆ ನೌಕರರ ಕಾಯಮಾತಿ ಇಲ್ಲ: ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಾಮ ಪಂಚಾಯಿತಿ ಗುತ್ತಿಗೆ ನೌಕರರನ್ನು ಕಾಯಂಗೊಳಿಸುವುದಿಲ್ಲ. ಆದರೆ, ಇವರಲ್ಲಿ ಕೋವಿಡ್‌ನಿಂದ ಯಾರಾದರೂ ಮೃತಪಟ್ಟದ್ದರೆ ಅವರ ಕುಟುಂಬಕ್ಕೆ ₹ 30 ಲಕ್ಷ ಪರಿಹಾರ ನೀಡಲಾಗುವುದು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾಯಂ ನೌಕರರಿಗೂ ಈ ಪರಿಹಾರ ಸಿಗಲಿದೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕೋವಿಡ್‌ನಿಂದ 186 ಮಂದಿ ಮೃತಪಟ್ಟಿದ್ದು, ಅವರೆಲ್ಲರಿಗೂ ತಲಾ ₹ 30 ಲಕ್ಷ ಪರಿಹಾರ ನೀಡಲಾಗುವುದು' ಎಂದರು.

ಕೆ.ಎಸ್. ಈಶ್ವರಪ್ಪ

'ಕೋವಿಡ್ ನಿಯಂತ್ರಿಸಲು ಬಳ್ಳಾರಿ ಜಿಲ್ಲೆ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಗ್ರಾಮ ಪಂಚಾಯಿತಿ ಮತ್ತು ಗ್ರಾಮ ಮಟ್ಟದ ಕಾರ್ಯಪಡೆಯ ಜೊತೆ, 50 ಮನೆಗಳಿಗೆ ಒಂದು ಸಮಿತಿ ರಚನೆ ಮಾಡಲಾಗಿದೆ. ಈ ಕಾರ್ಯವನ್ನು ಕೇಂದ್ರ ಸರ್ಕಾರ ಅಭಿನಂದಿಸಿದೆ' ಎಂದರು.

ಇಲಾಖೆಯ ಸಾಧನೆಯ ಬಗ್ಗೆ ವಿವರಿಸಿದ ಈಶ್ವರಪ್ಪ, 'ಜಲಜೀವನ್ ಮಿಷನ್‌ನಡಿ ಶುದ್ಧ ಕುಡಿಯುವ ನೀರಿನ ಏಳು ಬೃಹತ್ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಉದ್ಯೋಗ ಖಾತ್ರಿ ಯೋಜನೆಯಡಿ (ನರೇಗಾ) ಪ್ರಸಕ್ತ ಸಾಲಿನಲ್ಲಿ 13 ಕೋಟಿ ಮಾನವ ದಿನಗಳನ್ನು ಸೃಜಿಸುವ ಗುರಿ ಹೊಂದಲಾಗಿದ್ದು, ಈಗಾಗಲೇ 4.40 ಕೋಟಿ ಮಾನವ ದಿನಗಳನ್ನು ಸೃಜಿಸಲಾಗಿದೆ' ಎಂದರು.

8ನೇ ಪುಟ ನೋಡಿ

ಶಾಸಕರ ಅನರ್ಹತೆ: ಸಂಸತ್ತೇ ಕಾನೂನು ರಚಿಸಲಿ

ನವದೆಹಲಿ: ಶಾಸಕರ ಅನರ್ಹತೆಗೆ ಸಂಬಂಧಿಸಿದ ಅರ್ಜಿಗಳನ್ನು ವಿಧಾನ ಸಭೆಯ ಸಭಾಧ್ಯಕ್ಷ ಅಥವಾ ವಿಧಾನ ಪರಿಷತ್‌ನ ಸಭಾಪತಿಯು ನಿಗದಿತ ಕಾಲಮಿತಿಯಲ್ಲಿ ವಿಲೇವಾರಿ ಮಾಡುವುದಕ್ಕೆ ಸಂಬಂಧಿಸಿದ ಕಾನೂನು ರೂಪಿಸುವ ಕೆಲಸವನ್ನು ಶಾಸನಸಭೆಯೇ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. 9

ಅಡುಗೆ ಅನಿಲದ ಬೆಲೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಬ್ಸಿಡಿ ಇಲ್ಲದ, 14.2 ಕೆ.ಜಿ. ತೂಕದ ಅಡುಗೆ ಅನಿಲದ ಸಿಲಿಂಡರ್‌ನ ಬೆಲೆಯಲ್ಲಿ ₹ 25ರಷ್ಟು ಹೆಚ್ಚಳ ಆಗಿದೆ. ಇದರಿಂದಾಗಿ ಬೆಂಗಳೂರಿನಲ್ಲಿ ಎಲ್‌ಪಿಜಿ ಸಿಲಿಂಡರ್ ಬೆಲೆಯು ₹ 837.5ಕ್ಕೆ ಏರಿಕೆ ಆಗಿದೆ.

ಮೇ ಮತ್ತು ಜೂನ್ ತಿಂಗಳಲ್ಲಿ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ಹೆಚ್ಚಳ ಆಗಿರಲಿಲ್ಲ. ಮಾರ್ಚ್‌ನಲ್ಲಿ ₹ 50ರಷ್ಟು ಹೆಚ್ಚಳ ಆಗಿತ್ತು, ಏಪ್ರಿಲ್‌ನಲ್ಲಿ ಪ್ರತಿ ಸಿಲಿಂಡರ್ ಬೆಲೆಯನ್ನು ₹ 10ರಷ್ಟು ಇಳಿಕೆ ಮಾಡಲಾಗಿತ್ತು.

ಹಿಂದಿನ ವರ್ಷದ ಸೆಪ್ಟೆಂಬರ್ ವೇಳೆಗೆ ಬೆಂಗಳೂರಿನಲ್ಲಿ ಎಲ್‌ಪಿಜಿ ದರವು ₹ 597 ಆಗಿತ್ತು. ಅಂದಿನ ದರಕ್ಕೆ ಹೋಲಿಸಿದರೆ ಈಗ ಬೆಲೆ ₹ 240ರಷ್ಟು ಹೆಚ್ಚಳವಾದಂತಾಗಿದೆ.

ಒಳ ಪುಟಗಳು

ಕೋಗಿಲಬನ: ಬೆಳಿಗ್ಗೆ ಮೊಸಳೆ ವಾಕಿಂಗ್! 8

'ಲಸಿಕೀಕರಣ ಮುಗಿಯುತ್ತಿದ್ದಂತೆ ಕಾಲೇಜು ಆರಂಭ' 8

ಶಿಕ್ಷಕರ ಅರ್ಹತಾ ಪರೀಕ್ಷೆ ಆ. 22ರಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದರಿಂದ ಎಂಟನೇ ತರಗತಿವರೆಗಿನ ಶಾಲಾ ಶಿಕ್ಷಕರ ನೇಮಕಾತಿಗೆ ಅರ್ಹತೆ ಪಡೆಯಲು ಅಗತ್ಯವಾದ 'ಶಿಕ್ಷಕರ ಅರ್ಹತಾ ಪರೀಕ್ಷೆ' (ಟಿಇಟಿ-2021) ಆಗಸ್ಟ್ 22ರಂದು ನಡೆಯಲಿದೆ.

ಒಂದರಿಂದ ಐದನೇ ತರಗತಿವರೆಗೆ ಶಿಕ್ಷಕರಾಗಲು ಟಿಇಟಿಗೆ ಅರ್ಜಿ ಸಲ್ಲಿಸುವವರು ಪಿಯುಸಿ ಹಾಗೂ ಡಿ.ಇಡಿ. ಉತ್ತೀರ್ಣರಾಗಿರಬೇಕು. ಆರರಿಂದ ಎಂಟನೇ ತರಗತಿವರೆಗೆ ಶಿಕ್ಷಕರಾಗಲು ಅರ್ಜಿ ಸಲ್ಲಿಸುವವರು ಪದವಿ ಮತ್ತು ಡಿ.ಇಡಿ ಅಥವಾ ಪದವಿಯೊಂದಿಗೆ ಬಿ.ಇಡಿ ಅಥವಾ ಬಿ.ಎ.ಇಡಿ, ಬಿ.ಎಸ್‌ಸಿ. ಇಡಿ ಯಲ್ಲಿ ಉತ್ತೀರ್ಣರಾಗಿರಬೇಕು. ಅಂತಿಮ ವರ್ಷ ಡಿ.ಇಡಿ, ಬಿ.ಇಡಿ, ಬಿ.ಎ.ಇಡಿ, ಬಿಎಸ್ಸಿ.ಇಡಿ ಪರೀಕ್ಷೆಗೆ ಹಾಜರಾಗಿ, ಫಲಿತಾಂಶ ನಿರೀಕ್ಷೆಯಲ್ಲಿರುವವರೂ ಅರ್ಜಿ ಸಲ್ಲಿಸಬಹುದು.

ಅರ್ಹ ಅಭ್ಯರ್ಥಿಗಳು ಇಲಾಖೆಯ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಇದೇ 20 ಕೊನೆ ದಿನ. ಆ. 22ರಂದು ಬೆಳಿಗ್ಗೆ 9.30ರಿಂದ 12 ಗಂಟೆವರೆಗೆ ಮತ್ತು ಮಧ್ಯಾಹ್ನ 2 ಗಂಟೆಯಿಂದ 4.30ರವರೆಗೆ ಪರೀಕ್ಷೆಗಳು ನಡೆಯಲಿವೆ. ಪತ್ರಿಕೆ 150 ಅಂಕಗಳನ್ನು ಹೊಂದಿರುತ್ತವೆ. ಪ್ರವೇಶಪತ್ರಗಳನ್ನು ಆ. 12ರಿಂದ ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

'ಶಿಕ್ಷಕರ ಅರ್ಹತಾ ಪರೀಕ್ಷೆಯ ಪ್ರಮಾಣ ಪತ್ರ ಜೀವಿತಾವಧಿಯವರೆಗೆ ಮಾನ್ಯತೆ ಹೊಂದಿರುತ್ತದೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಸುರೇಶ್ ಕುಮಾರ್ ತಿಳಿಸಿದ್ದಾರೆ.

'ಸಾವಿರ ಜನರಿಗೊಂದು ಶೌಚಾಲಯವೂ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಯಲು ಶೌಚಮುಕ್ತ ನಗರ ಎಂದು ಬೆಂಗಳೂರನ್ನು 2020ರಲ್ಲೇ ಘೋಷಿಸಿದ್ದರೂ ಚೆನ್ನೈ, ಹೈದರಾಬಾದ್ ಮತ್ತು ಅಹಮದಾಬಾದ್ ನಗರಗಳಿಗೆ ಹೋಲಿಸಿದರೆ ಇಲ್ಲಿ ಸಾರ್ವಜನಿಕ ಶೌಚಾಲಯಗಳ ಸಂಖ್ಯೆ ಕಡಿಮೆ ಇವೆ' ಎಂದು ಬೆಂಗಳೂರು ನೈರ್ಮಲ್ಯ ಯೋಜನಾ ವರದಿ ತಿಳಿಸಿದೆ.

ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಲೋಕಲ್ ಸೆಲ್ಫ್ ಗವರ್ನಮೆಂಟ್ ಸಂಸ್ಥೆ ಸಲ್ಲಿಸಿರುವ ಈ ವರದಿಯನ್ನು ಹೈಕೋರ್ಟ್‌ಗೆ ಬಿಬಿಎಂಪಿ ಸಲ್ಲಿಸಿತು. ನಗರದಲ್ಲಿ ಅಗತ್ಯ ಇರುವ ಸಾರ್ವಜನಿಕ ಶೌಚಾಲಯಗಳ ಬಗ್ಗೆ ವರದಿ ಸಿದ್ಧಪಡಿಸುವ ಜವಾಬ್ದಾರಿಯನ್ನು ಈ ಸಂಸ್ಥೆಗೆ ಬಿಬಿಎಂಪಿ ವಹಿಸಿತ್ತು.

'ಒಂದು ಸಾವಿರ ಜನಸಂಖ್ಯೆಗೆ ಒಂದರಂತೆಯೂ ಸಾರ್ವಜನಿಕ ಶೌಚಾಲಯ ಇಲ್ಲ. ಚೆನ್ನೈ, ಹೈದರಾಬಾದ್, ಅಹಮದಾಬಾದ್‌ನಲ್ಲಿ ಪ್ರತಿ ಚದರ ಕಿಲೋ ಮೀಟರ್, ಪ್ರತಿ ವಾರ್ಡ್‌ಗಳಲ್ಲಿ ಇರುವ ಸಾರ್ವಜನಿಕ ಶೌಚಾಲಯಗಳ ಸಂಖ್ಯೆ ಹೋಲಿಸಿದರೆ ಬೆಂಗಳೂರಿನಲ್ಲಿ ಕಡಿಮೆ ಸಂಖ್ಯೆಯ ಶೌಚಾಲಯಗಳಿವೆ' ಎಂದು ವರದಿ ಹೇಳಿದೆ.

'ಕೊಳೆಗೇರಿ ಪ್ರದೇಶಗಳಿಗೆ ಹೆಚ್ಚಿನ ಸಮುದಾಯ ಶೌಚಾಲಯಗಳು ಅಗತ್ಯ ಇವೆ. ಇರುವ ಶೌಚಾಲಯಗಳಲ್ಲಿ ನಿರ್ವಹಣೆ ಸಾಲದೆ ಬಳಕೆಗೆ ಯೋಗ್ಯವಿಲ್ಲದ ಸ್ಥಿತಿಯಲ್ಲಿವೆ. ನಿರ್ವಹಣೆ ಇಲ್ಲದ ಕಾರಣ ಶೌಚಾಲಯಗಳ ಬಳಕೆಯ ಮೇಲೂ ಪರಿಣಾಮ ಬೀರುತ್ತಿದೆ. ಬೆಂಗಳೂರಿಗೆ ಆಗಾಗ ಬಂದು ಹೋಗುವ ಜನಸಂಖ್ಯೆ ಶೇ 15ರ ದರದಲ್ಲಿ ಬೆಳೆಯುತ್ತಿದೆ. ಮಾರುಕಟ್ಟೆ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ವಾಣಿಜ್ಯ ಪ್ರದೇಶಗಳಲ್ಲಿ ಹೆಚ್ಚಿನ ಶೌಚಾಲಯಗಳ ಅಗತ್ಯವಿದೆ' ಎಂದು ವರದಿ ತಿಳಿಸಿದೆ.

ವರದಿ ಅವಲೋಕಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ವಾರ್ಡ್‌ವಾರು ಶೌಚಾಲಯಗಳ ಅಗತ್ಯದ ಬಗ್ಗೆ ವರದಿಯಲ್ಲಿ ಉಲ್ಲೇಖ ಇಲ್ಲದಿದ್ದರೂ, ಪ್ರಮುಖ ವಿಷಯಗಳನ್ನು ಎತ್ತಿ ಹಿಡಿದಿದೆ. ಅಗತ್ಯ ಇರುವ ಕಡೆಗಳಲ್ಲಿ ಶೌಚಾಲಯ ನಿರ್ಮಾಣ, ನಿರ್ವಹಣೆ ಗುಣಮಟ್ಟ ಸುಧಾರಣೆ ಬಗ್ಗೆ ತಕ್ಷಣ ಗಮನ ಹರಿಸಬೇಕು. ವರದಿಯಲ್ಲಿರುವ ಶಿಫಾರಸುಗಳ ಅನುಷ್ಠಾನ ಸಂಬಂಧ ಅನುಸರಣಾ ವರದಿಯನ್ನು ಆಗಸ್ಟ್ 13ರೊಳಗೆ ಸಲ್ಲಿಸಬೇಕು' ಎಂದು ಬಿಬಿಎಂಪಿಗೆ ನಿರ್ದೇಶನ ನೀಡಿತು. ನಗರದಲ್ಲಿ ಶೌಚಾಲಯ ಸಮಸ್ಯೆಗಳ ಕುರಿತು ಲೆಟ್ಜ್‌ಕಿಟ್ ಫೌಂಡೇಷನ್ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು.

ಇಂದಿನ ಪಾಡ್‌ಕಾಸ್ಟ್ ವಿಶೇಷ

ಪ್ರಜಾವಾಣಿ ಕನ್ನಡ ಧ್ವನಿ

ಕಥೆ ಕೇಳು ಮಗುವೆ ಸಿನಿಮಾ ಮ್ಯಾಟಿನಿ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ಹೇಮಾವತಿ ಜಲಾಶಯ ಯೋಜನೆ

'ವಿನಾಯಿತಿ': ಸಾವಿರಾರು ಎಕರೆ ಅಕ್ರಮ ಮಂಜೂರು?

• ಜಾನೇಕೆರೆ ಆರ್. ಪರಮೇಶ್

ಸಕಲೇಶಪುರ: 'ಹೇಮಾವತಿ ಮತ್ತು ವಾಟೇಹೊಳೆ ಜಲಾಶಯ ಯೋಜನೆ ಮುಳುಗಡೆ ಸಂತ್ರಸ್ತರಿಗೆ ನೀಡಿದ ಭೂಮಿಯನ್ನು 15 ವರ್ಷ ಪರಭಾರೆ ಮಾಡುವಂತಿಲ್ಲ ಎಂಬ ನಿಷೇಧ ಅವಧಿಯ ಷರತ್ತಿಗೆ ವಿನಾಯಿತಿ ನೀಡಲಾಗಿದೆ' ಎಂಬ ನಿರ್ದೇಶನವೇ ಸಾವಿರಾರು ಎಕರೆ ಭೂಮಿಯ ಅಕ್ರಮ ಮಂಜೂರಾತಿಗೆ ದಾರಿ ಮಾಡಿದೆ ಎಂಬ ಆರೋಪ ಕೇಳಿ ಬಂದಿದೆ.

'2015 ರಿಂದ ಈಚೆಗೆ ನಿರಾಶ್ರಿತರ ಹೆಸರಿನಲ್ಲಿ ಸುಮಾರು 9 ಸಾವಿರ ಎಕರೆ ಭೂಮಿ ಅಕ್ರಮ ಮಂಜೂರಾತಿ ಆಗಿದೆ' ಎಂದು ಜಿಲ್ಲಾಧಿಕಾರಿ ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಆದರೆ ವಿನಾಯಿತಿ ಆದೇಶ ಹೊರಡಿಸಿದ, 2012ರಿಂದ ಇಲ್ಲಿಯವರೆಗೆ ಇನ್ನಷ್ಟು ಅಕ್ರಮ ನಡೆದಿರುವ ಸಾಧ್ಯತೆಗಳಿವೆ. ಈ ಅವಧಿಯಲ್ಲಿ ಆಗಿರುವ ಭೂಮಂಜೂರಾತಿಗಳ ತನಿಖೆಯೂ ಆಗಬೇಕು' ಎಂಬ ಕೂಗು ಈಗ ಎದ್ದಿದೆ.

ಪ್ರಜಾವಾಣಿ ವಿಶೇಷ

ಜಲಾಶಯ ಯೋಜನೆಗಳಿಗಾಗಿ ಭೂಮಿ ಕಳೆದುಕೊಂಡವರಿಗೆ ಮಂಜೂರು ಮಾಡುವ ಬದಲಿ ಭೂಮಿಯನ್ನು 15 ವರ್ಷ ಪರಭಾರೆ ಮಾಡಬಾರದು ಎಂಬ ನಿಯಮ ಇಂದಿಗೂ ಜಾರಿಯಲ್ಲಿದೆ. ಆದರೆ 'ಹಾಸನ ಜಿಲ್ಲೆಯಲ್ಲಿ ನಿಷೇಧ ಅವಧಿ ಷರತ್ತಿಗೆ ವಿನಾಯಿತಿ ನೀಡಲಾಗಿದೆ' ಎಂದು 2012ರ ಜನವರಿ 30 ರಂದು ಕಂದಾಯ ಇಲಾಖೆ ಆದೇಶಿಸಿದೆ!.

ಮುಖ್ಯಾಂಶಗಳು

- ಎಚ್‌ಆರ್‌ಪಿ, ಯಗಚಿ ಜಲಾಶಯ ಭೂ ಹಗರಣ
- 15 ವರ್ಷ ಪರಭಾರೆ ನಿಷೇಧ ಷರತ್ತಿಗೆ ವಿನಾಯಿತಿ ಆದೇಶದ ಬಗ್ಗೆ ತನಿಖೆ ಅಗತ್ಯ
- ಪರಭಾರೆ ನಿಷೇಧ ಮುಂದುವರೆಸಲು ಆಗ್ರಹ

ತಪ್ಪಿತಸ್ಥರ ವಿರುದ್ಧ ಕೂಡಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಇಲಾಖಾ ತನಿಖೆ ನಡೆಸಬೇಕು. 1970ರ ಅವಧಿಯಿಂದಲೂ ಸಮಗ್ರ ತನಿಖೆ ಆಗಬೇಕು

ಎ.ಟಿ.ರಾಮಸ್ವಾಮಿ, ಶಾಸಕ

8ನೇ ಪುಟ ನೋಡಿ

ಸಿಂಗನಾಯಕನಹಳ್ಳಿ ಕೆರೆ ಅಭಿವೃದ್ಧಿಗೆ 6,316 ಮರಗಳ ಹನನ: ವಿರೋಧ

'ಜೀವಿ–ಪರಿಸರ ವ್ಯವಸ್ಥೆ ಸಂರಕ್ಷಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಂಗನಾಯಕನಹಳ್ಳಿ ಕೆರೆ ಪುನರುಜ್ಜೀವನಕ್ಕಾಗಿ 6,316 ಮರಗಳನ್ನು ಕಡಿಯುವ ಪ್ರಸ್ತಾವ ಕೈಬಿಡಬೇಕು. ಇಲ್ಲಿ ನೈಸರ್ಗಿಕವಾಗಿ ರೂಪುಗೊಂಡಿರುವ ಜೀವಿ-ಪರಿಸರ ವ್ಯವಸ್ಥೆಯನ್ನು ಹಾಗೂ ಸಮೃದ್ಧ ಜೀವವೈವಿಧ್ಯವನ್ನು ಸಂರಕ್ಷಿಸಬೇಕು ಎಂದು ಪರಿಸರ ಕಾರ್ಯಕರ್ತರು ಒತ್ತಾಯಿಸಿದ್ದಾರೆ.

ರಾಜ್ಯ ಜೀವವೈವಿಧ್ಯ ನಿರ್ವಹಣೆ ಮಂಡಳಿಯ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಅವರನ್ನು 'ನಮ್ಮ ಬೆಂಗಳೂರು ಪ್ರತಿಷ್ಠಾನ'ದ (ಎನ್‌ಬಿಎಫ್) ನೇತೃತ್ವದಲ್ಲಿ ಗುರುವಾರ ಭೇಟಿ ಮಾಡಿರುವ ಪರಿಸರ ಕಾರ್ಯಕರ್ತರು ಈ ಕುರಿತು ಮನವಿ ಸಲ್ಲಿಸಿದ್ದಾರೆ.

'ವನ್ಯಜೀವಿ ಕಾರ್ಯಕರ್ತರು, ವನ್ಯಜೀವಿ ಛಾಯಾಗ್ರಾಹಕರು, ಸಾಮಾಜಿಕ ಕಾರ್ಯಕರ್ತರು ಹಾಗೂ ಪರಿಸರ ಕಾರ್ಯಕರ್ತರನ್ನು ಒಳಗೊಂಡ ತಂಡವು ಸಿಂಗನಾಯಕನಹಳ್ಳಿ ಕೆರೆ ಪ್ರದೇಶಕ್ಕೆ ಭೇಟಿ ನೀಡಿ ಇಲ್ಲಿನ ಭೌಗೋಳಿಕ ಪರಿಸರದ ಅಧ್ಯಯನ ನಡೆಸಿದೆ. ಇಲ್ಲಿ ಕಿರು ಅರಣ್ಯದಂತಹ ಪ್ರದೇಶ ರೂಪುಗೊಂಡಿದ್ದು, ಹಲವಾರು ಹಕ್ಕಿಗಳಿಗೆ ನೆಲೆ ದೊರಕಿದೆ. ಇಲ್ಲಿ ಕಂಡುಬಂದ ಪತಂಗಗಳು ಹಾಗೂ ಚಿಟ್ಟೆಗಳು, ಹುತ್ತಗಳು, ಹಕ್ಕಿಗೂಡುಗಳು, ಬಿಲಗಳು, ಇಲ್ಲಿನ ಸಮೃದ್ಧ ಜೀವವೈವಿಧ್ಯ ವ್ಯವಸ್ಥೆಗೆ ಕನ್ನಡಿ ಹಿಡಿಯುತ್ತವೆ' ಎಂದು ಪರಿಸರ ಕಾರ್ಯಕರ್ತರು ಮಂಡಳಿಯ ಗಮನಕ್ಕೆ ತಂದಿದ್ದಾರೆ.

ವಿನೋದ್ ಜೇಕಬ್ (ಎಡ ತುದಿ) ಹಾಗೂ ಪರಿಸರ ಕಾರ್ಯಕರ್ತ ವಿಜಯ್ ನಿಶಾಂತ್ ಅವರು ಅನಂತ ಹೆಗಡೆ ಆಶೀಸರ ಅವರಿಗೆ ಗುರುವಾರ ಮನವಿ ಸಲ್ಲಿಸಿದರು

'ಈ ಪ್ರದೇಶಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ನರಿಯ ಕಳೇಬರ ಪತ್ತೆಯಾಗಿತ್ತು. ವನ್ಯಜೀವಿ ಕಾಯ್ದೆಯಡಿ ವಿಶೇಷ ಸಂರಕ್ಷಣೆ ಇರುವ ನವಿಲುಗಳು ಇಲ್ಲಿ ಸ್ವಚ್ಛಂದವಾಗಿ ಓಡಾಡುತ್ತಿವೆ. ಈ ಕಿರು ಕಾಡು ಕೇವಲ ವನ್ಯಜೀವಿಗಳಿಗೆ ಅಷ್ಟೇ ಅಲ್ಲ, ಅಕ್ಕ ಪಕ್ಕದ ಗ್ರಾಮಗಳ ಜಾನುವಾರುಗಳ ಮೇವಿನ ತಾಣವೂ ಹೌದು' ಎಂದೂ ಅವರು ಪ್ರತಿಪಾದಿಸಿದ್ದಾರೆ.

'ಈ ಪ್ರದೇಶದಲ್ಲಿ ಸಾವಿರಕ್ಕೂ ಅಧಿಕ ಜಾನುವಾರುಗಳನ್ನು ಮೇಯಿಸಲಾಗುತ್ತಿದೆ. ಆಸುಪಾಸಿನ ಗ್ರಾಮಸ್ಥರು ತಮ್ಮ ಗೋವುಗಳ ಮೇವಿಗಾಗಿ ಈ ಸ್ಥಳವನ್ನು ದಶಕಗಳಿಂದ ನೆಚ್ಚಿಕೊಂಡಿದ್ದಾರೆ. ಅವರ ಪ್ರಕಾರ 30–40 ವರ್ಷಗಳಿಂದಲೂ ಇಲ್ಲಿ ಮರಗಳು ಹೇರಳವಾಗಿವೆ. ಅರಣ್ಯ ಇಲಾಖೆಯೂ ಇತ್ತೀಚಿನ ವರ್ಷಗಳನ್ನು ಇಲ್ಲಿ ಕೆಲವು ಸಸಿಗಳನ್ನು ನೆಟ್ಟು ಬೆಳೆಸಿದೆ. ಈ ಮರಗಳು ಕೆರೆಯ ಜಲಾನಯನ ಪ್ರದೇಶಕ್ಕೆ ರಕ್ಷಣೆ ಒದಗಿಸಿದ್ದಲ್ಲದೇ ಅಂತರ್ಜಲ ಹೆಚ್ಚಳಕ್ಕೂ ಕಾರಣವಾಗಿದೆ. ಆಸುಪಾಸಿನ ಗ್ರಾಮಗಳ ಜೀವಿ–ಪರಿಸರ ವ್ಯವಸ್ಥೆ ಕಾಪಾಡುವುದಕ್ಕೂ ನೆರವಾಗುತ್ತಿದೆ' ಎಂದು ಅವರು ತಿಳಿಸಿದ್ದಾರೆ.

'ಇಲ್ಲಿನ ಪರಿಸರ ವ್ಯವಸ್ಥೆಯನ್ನು ಉಳಿಸಿಕೊಂಡೇ ಕೆರೆ ಪುನರುಜ್ಜೀವನ ಕಾರ್ಯ ಕೈಗೊಳ್ಳುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಸೂಚನೆ ನೀಡುವಂತೆ ಕೋರಿದ್ದೇವೆ. ಇದಕ್ಕೆ ಜೀವವೈವಿಧ್ಯ ನಿರ್ವಹಣೆ ಮಂಡಳಿ ಅಧ್ಯಕ್ಷರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದು ಎನ್‌ಬಿಎಫ್ ಪ್ರಧಾನ ವ್ಯವಸ್ಥಾಪಕ ವಿನೋದ್ ಜೇಕಬ್ ತಿಳಿಸಿದ್ದಾರೆ.

ಕೆರೆ ಪುನರುಜ್ಜೀವನಕ್ಕೆ ನಮ್ಮ ವಿರೋಧವಿಲ್ಲ. ಸ್ಥಳೀಯ ರೈತರ ಬೆಳೆಗೆ ನೀರಿನ ಅಗತ್ಯ ಇರುವುದೂ ನಿಜ. ಆದರೆ, ಇದಕ್ಕಾಗಿ ಇಲ್ಲಿನ ಜೀವಿ-ಪರಿಸರ ವ್ಯವಸ್ಥೆ ನಾಶಪಡಿಸುವುದು ತರವಲ್ಲ

ವಿನೋದ್ ಜೇಕಬ್, ಪ್ರಧಾನ ವ್ಯವಸ್ಥಾಪಕ, ಎನ್‌ಬಿಎಫ್

ದಿ ರಾಜಾಜಿನಗರ ಕೋ-ಆಪ. ಬ್ಯಾಂಕ್ ಲಿಮಿಟೆಡ್

ತಿದ್ದುಪಡಿ ಪ್ರಕಟಣೆ

ದಿನಾಂಕ: 30–6–2021ರಂದು 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಪ್ರಕಟಿಸಲಾಗಿದ್ದ ಪ್ರಕಟಣೆಯಲ್ಲಿ ಕ್ರ.ಸಂ. 3: ಕಿರಿಯ ಸಹಾಯಕರ ನೇಮಕಾತಿಗೆ ನಿಗಧಿಪಡಿಸಲಾಗಿದ್ದ ಅರ್ಹತೆಯಲ್ಲಿ ಬಿ.ಕಾಂ./ಬಿಬಿಎಂ/ಎಂಸಿಎ ಪದವಿಗೆ ಬದಲಾಗಿ 'ಪಿಯುಸಿ (ವಾಣಿಜ್ಯ)' ಎಂದು ಓದಿಕೊಳ್ಳತಕ್ಕದ್ದು. ಸಹಿ/– (ಪ್ರ) ಪ್ರಧಾನ ವ್ಯವಸ್ಥಾಪಕರು

Karnataka State Cricket Association (KSCA)

Vacancy Announcement

KSCA invites applications for the following posts, on contract basis, from eligible candidates:

1. **General Manager – Accounts and Finance** - minimum of 10 years of experience, Expert knowledge in Accounts & Finance & working knowledge on legal aspects.
2. **Assistant Manager – Personal Secretary** –minimum 8 years experience– should be a graduate and computer savvy with knowledge of shorthand and typing. Must be excellent in English & working knowledge of Kannada.
3. **Senior Officer – Legal/HR - co-ordination with Advocates & to assist HR & Membership sections** - minimum 8 years experience in assisting administration / 5 years experience working in law firm. Should be able to co-ordinate with Advocates and assist HR Department. Should also assist during cricket matches. Must be a graduate in Commerce/ Law / MBA
4. **Assistant Manager/Senior Officer – Civil Engineer** – minimum of 8 years field level experience in construction or related field in civil. Should have computer knowledge and be able to use AutoCAD. Must be Civil Engineering graduate. age - 30 to 40.
5. **Assistant Manager/Senior Officer – Electrical Engineer** – minimum of 8 years in construction industry in the Electrical field. Must be an Electrical engineering graduate and have computer knowledge. Age - 30 to 40.
6. **Assistant Manager – Food and Beverage section – 2 posts** - Hotel Management graduate with minimum of 8 years of overall experience and 5 years in hotels. Age – 30 to 40.
7. **Junior Officer – Civil Department – 2 posts** - minimum of 5 years field experience in construction industry. Minimum qualification Diploma in Civil Engineering. Age – 25 to 35.

For further details, please contact **Mr. Nitin Prabhakar** through email **hrd@ksca.co.in** The applications can be downloaded through website **www.ksca.cricket** Candidates should apply on or before 5:00 PM, Friday, 9th July, 2021.

Sd/-
Hon. Secretary-KSCA

ಸುಧೀಂದ್ರ ಹಾಲ್ದೊಡ್ಡೇರಿ ಸ್ಥಿತಿ ಗಂಭೀರ

ಸುಧೀಂದ್ರ ಹಾಲ್ದೊಡ್ಡೇರಿ

ಬೆಂಗಳೂರು: ವಿಜ್ಞಾನ ಬರಹಗಾರ, ಡಿಆರ್‌ಡಿಒ ಮಾಜಿ ವಿಜ್ಞಾನಿ ಸುಧೀಂದ್ರ ಹಾಲ್ದೊಡ್ಡೇರಿ ಅವರಿಗೆ ತೀವ್ರ ಹೃದಯಾಘಾತವಾಗಿದ್ದು, ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಸದ್ಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಧೀಂದ್ರ ಅವರು ಚಿಕಿತ್ಸೆಗೆ ಸ್ಪಂದಿಸುತ್ತಿದ್ದರಾದರೂ, ಮಿದುಳಿಗೆ ಆಮ್ಲಜನಕ ಸರಬರಾಜು ಆಗುವುದು ನಿಂತಿರುವುದರಿಂದ ಅವರ ಮಿದುಳು ನಿಷ್ಕ್ರಿಯವಾಗುವ ಹಂತಕ್ಕೆ ತಲುಪಿದೆ ಎಂದು ಮೂಲಗಳು ಹೇಳಿವೆ.

ತಜ್ಞ ವೈದ್ಯರ ತಂಡ ಚಿಕಿತ್ಸೆ ಮುಂದುವರಿಸಿದೆ. 'ಅವರಿಗೆ ಕೊರೊನಾ ಸೋಂಕು ತಗುಲಿಲ್ಲ. ಆದರೆ, ಚೇತರಿಸಿಕೊಳ್ಳುವುದು ಕಷ್ಟವಾಗಿದೆ. ಪ್ರಯತ್ನ ಮುಂದುವರಿಸಿದ್ದೇವೆ' ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ಜಲಮಂಡಳಿ ಫೋನ್ ಇನ್ ನಾಳೆ

ಬೆಂಗಳೂರು: ಜಲಮಂಡಳಿಯು ಇದೇ 3ರಂದು (ಶನಿವಾರ) ಬೆಳಿಗ್ಗೆ 9ರಿಂದ 10.30ರವರೆಗೆ ನೇರ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಂಡಿದೆ. ಜಲಮಂಡಳಿ ಅಧ್ಯಕ್ಷ ಎನ್. ಜಯರಾಂ ಅಹವಾಲು ಆಲಿಸಲಿದ್ದಾರೆ.

ಕುಡಿಯುವ ನೀರಿನ ಸಮಸ್ಯೆ ಮತ್ತು ಕೊಳವೆಗಳಿಂದ ತ್ಯಾಜ್ಯ ನೀರು ಬರುತ್ತಿರುವ ಬಗ್ಗೆ, ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ಹೇಳಬಹುದು. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆ ತಿಳಿಸಿ ದೂರು ನೀಡಬಹುದು. ದೂರವಾಣಿ ಸಂಖ್ಯೆ: 080-22945119.

ನಗರದಲ್ಲಿ ಇಂದು

'ಕನ್ನಡ ಕಾದಂಬರಿ: ಜೀವನಯಾನ' ಸರಣಿ: ಕಾದಂಬರಿ: ಚಿಕವೀರ ರಾಜೇಂದ್ರ, ಕಾದಂಬರಿ ಕುರಿತು ಉಪನ್ಯಾಸ: ಎಸ್.ಆರ್. ವಿಜಯಶಂಕರ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸಂಜೆ 5.30 (ಅಕಾಡೆಮಿ ಯೂಟ್ಯೂಬ್ ಮತ್ತು ಫೇಸ್‌ಬುಕ್‌ನಲ್ಲಿ ನೇರಪ್ರಸಾರ)

ವಾರದ ಉಪನ್ಯಾಸ: ಸಾರ್ವಜನಿಕ ವಲಯದ ಪುನಶ್ಚೇತನ, ಕೇರಳದ ಅನುಭವ, ಉಪನ್ಯಾಸಕ: ಥಾಮಸ್ ಐಸಾಕ್, ಆಯೋಜನೆ: ಸಾರ್ವಜನಿಕ ವಲಯದ ರಕ್ಷಣೆಗಾಗಿ ಬೆಂಗಳೂರು, ರಾತ್ರಿ 7 (ಆನ್‌ಲೈನ್ ಕಾರ್ಯಕ್ರಮ)

ಮೋಹನ ಆಳ್ವಗೆ ಕಸಾಪ ದತ್ತಿ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಎಂ.ಮೋಹನ ಆಳ್ವ ಅವರಿಗೆ 'ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ'ಯನ್ನು ಮನು ಬಳಿಗಾರ್ ಪ್ರದಾನ ಮಾಡಿದರು. ಪರಿಷತ್ತಿನ ಗೌರವ ಕೋಶಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ, ಗೌರವ ಕಾರ್ಯದರ್ಶಿ ಕೆ. ರಾಜಕುಮಾರ್ ಹಾಗೂ ಪದ್ಮರಾಜ ದಂಡಾವತಿ ಇದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: 'ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳು ಉತ್ತಮ ಸ್ಥಿತಿಯಲ್ಲಿರಬೇಕು. ಈ ನಿಟ್ಟಿನಲ್ಲಿ ಈ ಎರಡೂ ಕ್ಷೇತ್ರಗಳಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕ್ರಿಯಾಶೀಲವಾಗಬೇಕು' ಎಂದು ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಎಂ.ಮೋಹನ ಆಳ್ವ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಗುರುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ 'ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ' ಸ್ವೀಕರಿಸಿದರು. ಈ ಪ್ರಶಸ್ತಿಯು ₹ 51 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ.

'ನಮ್ಮಲ್ಲಿನ ಸರಾರಾತ್ಮಕ ಧೋರಣೆ ಗೆಲುವಿಗೆ ಕಾರಣವಾಗುತ್ತವೆ. ಸಾಮಾನ್ಯ ಸರ್ಕಾರಿ ಬಯಲು ಕನ್ನಡ ಶಾಲೆಯಲ್ಲಿ ಕಲಿತ ನನ್ನನ್ನು ಮುನ್ನಡೆಸಿರುವುದೇ ಸಕಾರಾತ್ಮಕ ಧೋರಣೆ. ತಮ್ಮ ಸಮರ್ಥ ಆಡಳಿತದಿಂದ ಈ ನಾಡಿನ ಅಭಿವೃದ್ಧಿಯ ಚಹರೆಯನ್ನೇ ನಾಲ್ವಡಿ ಕೃಷ್ಣರಾಜ ಒಡೆಯರ್ ಬದಲಿಸಿದರು. ಅವರನ್ನು ರಾಜರ್ಷಿ ಎಂದಷ್ಟೇ ಅಲ್ಲ, ಬ್ರಹ್ಮರ್ಷಿ ಎಂದು ಕರೆದರೂ ತಪ್ಪಿಲ್ಲ' ಎಂದರು.

ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಮಾತನಾಡಿ, 'ಶಿಕ್ಷಣ, ಸಂಸ್ಕೃತಿ, ಸಾಹಿತ್ಯ, ಕೃಷಿ, ಉದ್ದಿಮೆ ಸೇರಿದಂತೆ ಹತ್ತು ಹಲವು ಕ್ಷೇತ್ರಗಳಿಗೆ ಕೊಡುಗೆ ನೀಡುವ ಮೂಲಕ ಮೋಹನ ಆಳ್ವ ಈ ನಾಡನ್ನು ಶ್ರೀಮಂತಗೊಳಿಸಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಆಶಯಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿರುವ ಅವರಿಗೆ, ಕೇಂದ್ರ ಸರ್ಕಾರ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಬೇಕಿದೆ. ಈ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಶಿಫಾರಸು ಮಾಡಲಾಗುವುದು' ಎಂದು ತಿಳಿಸಿದರು.

'ಜಿಎಸ್‌ಟಿ ಪರಿಹಾರ– ಬಾಕಿ ಪಾವತಿಗೆ ಕ್ರಮ'

ಯಲಹಂಕದ ಕೋವಿಡ್‌ಕೇರ್ ಸ್ಪೆಷಾಲಿಟಿ ಆಸ್ಪತ್ರೆಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭೇಟಿ ನೀಡಿ ಪರಿಶೀಲಿಸಿದರು. ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ಶಾಸಕ ಎಸ್‌.ಆರ್‌.ವಿಶ್ವನಾಥ್, ತಹಶೀಲ್ದಾರ್ ಕೆ.ನರಸಿಂಹಮೂರ್ತಿ ಇತರರು ಇದ್ದರು.

ಯಲಹಂಕ: 'ರಾಜ್ಯಗಳಿಗೆ ಬಾಕಿಯಿರುವ ಜಿಎಸ್‌ಟಿ ಪರಿಹಾರ ನೀಡುವ ಕುರಿತು ಕ್ರಮ ಕೈಗೊಳ್ಳಲಾಗುವುದು. ಕಳೆದ ವರ್ಷದಷ್ಟೇ ಈ ವರ್ಷವೂ ಪರಿಹಾರ ಸಿಗಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಬೋಯಿಂಗ್ ಡಿಫೆನ್ಸ್, ಸೆಲ್ಕೋ ಫೌಂಡೇಷನ್ ಹಾಗೂ ಡಾಕ್ಟರ್ಸ್ ಫಾರ್ ಯು ಸಂಸ್ಥೆಗಳ ಸಹಯೋಗದೊಂದಿಗೆ ಕರ್ನಾಟಕ ವಿದ್ಯುತ್ ನಿಗಮದ ಆವರಣದಲ್ಲಿ ನಿರ್ಮಿಸಿರುವ 100 ಹಾಸಿಗೆಗಳ ಅತ್ಯಾಧುನಿಕ ಕೋವಿಡ್-ಕೇರ್ ಸ್ಪೆಷಾಲಿಟಿ ಆಸ್ಪತ್ರೆಗೆ ಗುರುವಾರ ಭೇಟಿ ನೀಡಿ, ವಿವಿಧ ವಿಭಾಗಗಳನ್ನು ವೀಕ್ಷಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

'ಜಿಎಸ್‌ಟಿ ಪರಿಹಾರಕ್ಕೆ ಸಂಬಂಧಿಸಿದಂತೆ ವಿಶೇಷ ಸಭೆ ನಡೆಸಿ, ಈ ವಿಚಾರದಲ್ಲಿ ಉಂಟಾಗಿರುವ ರಾಜ್ಯಗಳ ತರಕಾರುಗಳನ್ನು ಬಗೆಹರಿಸಿ, ಶೀಘ್ರದಲ್ಲೇ ಪರಿಹಾರ ಒದಗಿಸಲು ಕ್ರಮಕೈಗೊಳ್ಳಲಾಗುವುದು. ಮುಂಬರುವ ಸಂಸತ್ ಅಧಿವೇಶನದಲ್ಲಿಯೂ ಜಿಎಸ್ಟಿ ಪರಿಹಾರ ಕುರಿತು ವಿಶೇಷಕಲಾಪ ನಡೆಯಲಿದ್ದು, ಈ ಸಂದರ್ಭದಲ್ಲಿ ರಾಜ್ಯಗಳ ಜಿಎಸ್ಟಿ ಪರಿಹಾರದ ಬಗ್ಗೆಯೇ ಚರ್ಚೆ ನಡೆಸಲಾಗುತ್ತದೆ' ಎಂದು ತಿಳಿಸಿದರು.

ಕೋವಿಡ್ 3ನೇ ಅಲೆಯಲ್ಲಿ ಮಕ್ಕಳಿಗೆ ಸೋಂಕು ತಗಲುವ ಸಾಧ್ಯತೆ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆಯಿಂದ ಆಸ್ಪತ್ರೆಯಲ್ಲಿ ವಿಶೇಷವಾದ ಪ್ರತ್ಯೇಕ ವಾರ್ಡ್‌ಗಳನ್ನು ನಿರ್ಮಿಸಲಾಗಿದೆ. ಹೈಟೆಕ್ ಆಸ್ಪತ್ರೆಯಲ್ಲಿ ಇರಬೇಕಾದ ಎಲ್ಲರೀತಿಯ ಸೌಲಭ್ಯಗಳನ್ನು ಈ ಆಸ್ಪತ್ರೆ ಹೊಂದಿದ್ದು, ಇದೇ ಮಾದರಿಯ ಆಸ್ಪತ್ರೆಗಳನ್ನು ವಿವಿಧ ಭಾಗಗಳಲ್ಲಿ ಸ್ಥಾಪಿಸುವಂತೆ ಮನವಿ ಮಾಡಲಾಗುವುದು ಎಂದರು.

ಬೋಯಿಂಗ್ ಡಿಫೆನ್ಸ್ ಇಂಡಿಯಾದ ಅಧ್ಯಕ್ಷ ಸಲೀಲ್ ಗುಪ್ತೆ, ಸೆಲ್ಕೋ ಫೌಂಡೇಷನ್ ಸಂಸ್ಥಾಪಕ ಡಾ.ಹರೀಶ್ ಹಂದೆ ಇದ್ದರು.

ಮತದಾರರ ಪಟ್ಟಿ: ಪರಿಷ್ಕರಣೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಉತ್ತರ, ದಕ್ಷಿಣ, ಪೂರ್ವ, ಯಲಹಂಕ ಹಾಗೂ ಆನೇಕಲ್ ತಾಲ್ಲೂಕಿನ ಒಟ್ಟು 25 ಜಿಲ್ಲಾ ಪಂಚಾಯಿತಿ ಮತ್ತು 69 ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಹೆಸರು ಪರಿಷ್ಕರಣೆಗೆ ಅವಕಾಶ ನೀಡಲಾಗಿದೆ.

'ಅಂತಿಮ ಮತದಾರರ ಪಟ್ಟಿಗಳನ್ನು ಜೂ.28ರಂದು ಜಿಲ್ಲೆಯ ತಾಲ್ಲೂಕು ಮತಗಟ್ಟೆ ಕೇಂದ್ರಗಳಲ್ಲಿ ಸಾರ್ವಜನಿಕರ ಗಮನಕ್ಕೆ ಪ್ರಚುರ ಪಡಿಸಲಾಗಿದೆ. ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಬಿಟ್ಟು ಹೋಗಿದ್ದಲ್ಲಿ ಅಥವಾ ನ್ಯೂನತೆಗಳಿದ್ದಲ್ಲಿ ಸೇರ್ಪಡೆ ಮತ್ತು ಪರಿಷ್ಕರಣೆಗೆ ಮನವಿ ಸಲ್ಲಿಸಬಹುದು' ಎಂದು ಜಿಲ್ಲಾಧಿಕಾರಿ ಜೆ. ಮಂಜುನಾಥ್ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಉತ್ತರ ಉಪವಿಭಾಗಧಿಕಾರಿ ರಂಗನಾಥ್ (9886241563), ಬೆಂಗಳೂರು ದಕ್ಷಿಣ ತಾಲ್ಲೂಕಿನ ತಹಶೀಲ್ದಾರ್ ರಾಮ ಲಕ್ಷ್ಮಯ್ಯ (7019670769), ಬೆಂಗಳೂರು ಪೂರ್ವ ತಹಶೀಲ್ದಾರ್ ಅಜಿತ್‌ಕುಮಾರ್‌ರೈ (9000001368), ಯಲಹಂಕ ತಹಶೀಲ್ದಾರ್ ನರಸಿಂಹಮೂರ್ತಿ (9986660803), ಆನೇಕಲ್ ತಹಶೀಲ್ದಾರ್ ಪಿ. ದಿನೇಶ್ (9845411333), ಹೆಬ್ಬಗೋಡಿ ನಗರಸಭೆಯ ಆಯುಕ್ತ ಹೇಮಂತ್ ಶರಣ್ ಜೆ. (9845816773), ಚಂದಾಪುರ ನಗರಸಭೆಯ ಮುಖ್ಯಾಧಿಕಾರಿ ರಮೇಶ್ (8710980909), ಜಿಗಣಿ ಪುರಸಭೆಯ ಮುಖ್ಯಾಧಿಕಾರಿ ಅಮರನಾಥ (9902787898) ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

COFFEE DAY ENTERPRISES LTD.

Coffee Day — Brewing new possibilities.

Registered and Corporate Office: 23/2, Coffee Day Square, Vittal Mallya Road, Bengaluru - 560 001, Karnataka, India
Tel: + 91 80 4001 2345; **Fax:** + 91 80 4001 2650;
Website: www.coffeeday.com
Corporate Identification Number: L55101KA2008PLC046866

For the Quarter / Year ended 31st March, 2021

(₹ in Crores except per share data)

Particulars	Quarter ended 31st March, 2021 (Audited)	Year ended 31st March, 2021 (Audited)	Quarter ended 31st March, 2020 (Audited)	Year ended 31st March, 2020 (Audited)
Total income from operations (net)	178.48	981.23	581.42	2,653.01
Net Profit/(loss) from ordinary activities after tax	(272.09)	(652.10)	554.80	1,848.51
Net Profit for the period after tax (after Extraordinary items)	(272.09)	(652.10)	554.80	1,848.51
Equity Share Capital	211.25	211.25	211.25	211.25
Reserves (excluding Revaluation Reserve as shown in the Balance Sheet of previous year)				
Earnings Per Share (before extraordinary items) (of ₹ 10/- each)				
Basic :	(12.42)	(27.64)	27.17	89.16
Diluted :	(12.42)	(27.64)	27.17	89.16
Earnings Per Share (after extraordinary items) (of ₹ 10/- each)				
Basic :	(12.42)	(27.64)	27.17	89.16
Diluted :	(12.42)	(27.64)	27.17	89.16

Notes:

1. The above is an extract of the detailed format of Financial Results filed with the Stock Exchanges under Regulation 33 of the SEBI (Listing and other Disclosure Requirements) Regulations, 2015. The full format of the Financial Results are available on the website of BSE (www.bseindia.com) and NSE (www.nseindia.com) and on the Company's website www.coffeeday.com
2. The above results as on 31st March, 2021 were reviewed by the Audit Committee and thereafter approved by the Board of Directors in their meeting held on 30th June, 2021 and Audited by the Statutory Auditors of the Company.
3. **Audited financial results of Coffee Day Enterprises Limited (Standalone Information)** (₹ in Crores)

Particulars	Quarter ended 31st March, 2021 (Audited)	Year ended 31st March, 2021 (Audited)	Quarter ended 31st March, 2020 (Audited)	Year ended 31st March, 2020 (Audited)
Total income from operations (net)	4.20	10.18	3.08	22.71
Profit/(Loss) before tax and exceptional items	(14.99)	(117.50)	(20.26)	1,408.74
Profit/(loss) after tax and exceptional items	(0.28)	(102.78)	(27.76)	1,367.52

Place : Bengaluru
Date : June 30, 2021

For and behalf of Board of Directors
S.V Ranganath
Interim Chairman and Independent Director
Coffee Day Enterprises Limited

ಇಸ್ರೋ isro | 150 YEARS OF CELEBRATING THE MAHATMA

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ

ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ (ಹೆಚ್‌ಎಸ್‌ಎಫ್‌ಸಿ)

ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ), ಅಂತರಿಕ್ಷ ಭವನ, ಬೆಂಗಳೂರು – 94.

ದೂ: (080)22172614, ಮೊಬೈಲ್: 9495824129 ಇ–ಮೇಲ್ ಐಡಿ: alagarsamy-hsfc@isro.gov.in

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಕಂಡ ಕಾಮಗಾರಿಗಾಗಿ ಇ–ಟೆಂಡರಿಂಗ್ ಮೂಲಕ ಆನ್‌ಲೈನ್ ಐಟಂ ದರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿ ಹೆಸರು ಮತ್ತು ಎನ್‌ಐಟಿ ಸಂಖ್ಯೆ	ಟೆಂಡರ್‌ಗಿಟ್ಟ ಅಂದಾಜು ಮೊತ್ತ	ಪೂರ್ಣಗೊಳಿಸುವ ಅವಧಿ	ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ	ಇಎಂಡಿ ರೂ.ಗಳಲ್ಲಿ
01	ಚಿತ್ರದುರ್ಗ, ಚಳ್ಳಕೆರೆ, ಉಲ್ಲಾರ್ಥಿಕಾವಲ್, ಹೆಚ್‌ಎಸ್‌ಎಫ್‌ಸಿ ಕ್ಯಾಂಪಸ್‌ನಲ್ಲಿ ಒಂದು ವರ್ಷದ ಅವಧಿಗೆ ಮರದ ಸಸಿಗಳಿಗೆ ನೀರು ಹಾಕುವುದು ಮತ್ತು ಪೋಷಿಸುವುದು. ಹೆಚ್‌ಎಸ್‌ಎಫ್‌ಸಿ/ಸಿಎಂಜಿ/ಎಂಎಂ/ಸಿ/ಇ/09/ 2021–22 ಮತ್ತು ದಿನಾಂಕ: 01.07.2021.	ರೂ. 10.68 ಲಕ್ಷಗಳು	12 ತಿಂಗಳು	02.07.2021 (11.00 ಗಂಟೆ)ಯಿಂದ 08.07.2021 (23.00 ಗಂಟೆ)ವರೆಗೆ	09.07.2021 14.00 ಗಂಟೆವರೆಗೆ	12.07.2021 14.30 ಗಂಟೆಗೆ	ಎನ್‌ಐಟಿ ಯಲ್ಲಿ ಉಲ್ಲೇಖಿಸಿರುವಂತೆ
02	ಬೆಂಗಳೂರು, ಇಸ್ರೋ ಹೆಚ್‌ಕ್ಯೂ, ಹೆಚ್‌ಎಸ್‌ಎಫ್‌ಸಿ ಕಟ್ಟಡ, ಫೇಸ್–1ರಲ್ಲಿನ ಹೊಸ ಎಐಟಿ ಪ್ರಯೋಗಾಲಯಕ್ಕೆ ಹವಾ ನಿಯಂತ್ರಣ (ವಿಆರ್‌ಎಫ್ ವ್ಯವಸ್ಥೆ) ಒದಗಿಸುವುದು. ಹೆಚ್‌ಎಸ್‌ಎಫ್‌ಸಿ/ಸಿಎಂಜಿ/ಎಂಎಂ/ಎಸಿ/ಇ/10/ 2021–22 ಮತ್ತು ದಿನಾಂಕ: 01.07.2021.	ರೂ. 9.56 ಲಕ್ಷಗಳು	01 ತಿಂಗಳು				
03	ಬೆಂಗಳೂರು, ಇಸ್ರೋ ಹೆಚ್‌ಕ್ಯೂ, ಹೆಚ್‌ಎಸ್‌ಎಫ್‌ಸಿಯಲ್ಲಿನ ಎಐಟಿ ಪ್ರಯೋಗಾಲಯಕ್ಕೆ ಯುಪಿಎಸ್ ಮತ್ತು ಬ್ಯಾಟರಿ ಸಂಗ್ರಹ ಕೊಠಡಿ ನಿರ್ಮಿಸುವುದು. ಹೆಚ್‌ಎಸ್‌ಎಫ್‌ಸಿ/ಸಿಎಂಜಿ/ಎಂಎಂ/ಸಿ/ಇ/11/ 2021–22 ಮತ್ತು ದಿನಾಂಕ: 01.07.2021.	ರೂ. 5.20 ಲಕ್ಷಗಳು	01 ತಿಂಗಳು	02.07.2021 (11.00 ಗಂಟೆ)ಯಿಂದ 08.07.2021 (23.00 ಗಂಟೆ)ವರೆಗೆ	09.07.2021 14.00 ಗಂಟೆವರೆಗೆ	12.07.2021 14.30 ಗಂಟೆಗೆ	ಎನ್‌ಐಟಿ ಯಲ್ಲಿ ಉಲ್ಲೇಖಿಸಿರುವಂತೆ

ಟೆಂಡರ್ ವಿಜಾರ್ಡ್‌ನಲ್ಲಿ ನೋಂದಣಿ ಮಾಡಿಕೊಂಡು ಟೆಂಡರ್ ಸಂಸ್ಕರಣಾ ಶುಲ್ಕ ಪಾವತಿಸುವುದರ ಮೂಲಕ ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್ **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮಾರಾಟಗಾರರ ನೋಂದಣಿ ವಿಧಾನವನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು ಮೆ॥ ಐಟಿಐ ಲಿಮಿಟೆಡ್‌ಗೆ ಇ–ಗೇಟ್‌ವೇ ಮೂಲಕ ಪಾವತಿಸುವುದು.

ಆಸಕ್ತ ಟೆಂಡರ್‌ದಾರರು ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ) ವಿವರಗಳಿಗಾಗಿ ವೆಬ್‌ಸೈಟ್ **www.isro.gov.in** ನೋಡುವುದು ಮತ್ತು ಹೆಚ್ಚಿನ ಮಾಹಿತಿ ಹಾಗೂ ಟೆಂಡರ್ ದಸ್ತಾವೇಜುಗಳ ಖರೀದಿಗೆ **www.tenderwizard.com/ISRO**ಗೆ ಭೇಟಿ ನೀಡುವುದು. ತೊಂದರೆಯಾದಲ್ಲಿ ಟೆಂಡರ್‌ದಾರರು ಶ್ರೀ ಧನ್‌ರಾಜ್ ರವರನ್ನು (ಮೆ॥ ಐಟಿಐ ಲಿಮಿಟೆಡ್‌ನ ಪ್ರತಿನಿಧಿ) ಮೊಬೈಲ್ ಸಂಖ್ಯೆ: 9686115308 ಮೂಲಕ ಸಂಪರ್ಕಿಸುವುದು.

ಸಹಿ/– ಸಮೂಹ ನಿರ್ದೇಶಕರು, ಸಿಎಂಜಿ

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Industrial & Factory

J P Nagar

INDUSTRIAL CONVERTED Plot for sale 4000-6000sft, Pipeline road Jaraganahalli Near JP-Nagar Metro Station. Verna Developers, MG Road. 9620253180/ 9353128035

Kanakapura Road

INDUSTRIAL CONVERTIBLE 4-Acres or Part Land Sale, Kanakpura, adjacent Mega Dairy, Ring Road. Verna Developers: 9620253180/ 9353128035

Sites

Banashankari

BANASHANKARI 6TH Stage 4th 'B' Block 30x40 North Facing Near Metro Station, Good Location: 9845799985.

SITE-FOR SALE Banashankari 6th_Stage_1st Block 40x60 East_Facing 60_Feet_Road 3rd_Block 50x80 West Facing 60_Feet_Road Contact: 9845117825.

North

AVAILABLE 20X30, 30x40, 40x60 sites, Arkavathy Layout,Telecom Layout, Windfield Layout. Contact "MALNAD"- 9844092859/ 9632377775.

Rajarajeshwari Nagar

1921 SQFT CORNER SITE SALE at Ideal Homes, Rajarajeshwari Nagar. 2.45 Crores, Negotiable. Call: 9845462344.

RENTAL PROPERTIES

Accommodation Available

Flats

PRESTIGE WHITE MEADOWS, Luxury Apartments for Rent with all amenities in Whitefield. Call: 9900078809.

PRESTIGE LEELA RESIDENCES, Luxury Apartments for Rent with all amenities near Old Airport Road. Starting from Rs. 2 lakhs onwards. Call: 9900020184.

AUGUSTA GOLF VILLAGE, Luxury units for Rent, 3 & 4 BHK ready to occupy with all amenities, Off Hennur Road. Call: 9900085276.

PRESTIGE FALCON CITY, Kanakapura Road, 2/ 2.5/ 3/ 4 BHK apartments for Rent with all amenities. Call: 9108050577

3BHK SF Apartment for Rent/Sale at Brigade Residency Padmanabhanagar Whatsapp 9844125826.

PRESTIGE LAKESIDE HABITAT, Premium Apartments for Rent with all amenities in Whitefield. Call: 6366971311.

JOB OPPORTUNITIES

Part-Time Jobs

PANDEMIC SITUATION Lost Job. MNC Provide Work From Home 30 to 35K Call: 7019215243/ 9886641282

Wanted

WANTED VEGETARIAN COOK AT BASAVANAGUDI MORNINGS ONLY 2 PERSONS ONLY AT HOME CONTACT 9342819739.

Teachers/ Professors

***ELITE PUBLIC** SCHOOL*Kempegowda layout Laggere Bangalore *Requires teachers* Chemistry, Bsc/ Msc, B.Ed 9980200444, 8884420009

General

LEADERSHIP OPPORTUNITY With Salary, Opportunity to earn 19,000-52,000 + Incentives upto 1Lakh/month. Contact for Registration: 8317304234.

BUSINESS

Business to Business

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgriculturelandsCall: 7411265189

REQUIRED: PRIVATE Finance 2-CRORE for Construction Project. Collateral: 4-CRORE worth. BBMP Limit SITES-12000 SFT, Three sides road- 7892566286

Business Offers

General

WANTEDAPPARELS Jacket Factory upto 100Machines preferably Peenya Blore, Budget 50lakh to 100lakh, Whatsapp- 6362844475, Contact- knerajeev@gmail.com

EDUCATIONAL

Colleges

A_NEW_PU & DEGREE_COLLEGE affiliated_to Bangalore university, with_complete infrastructure, available_in Hessargatta,_on lease/_outright purchase. Intersted_parties_Call: +91_9972542889

OTHERS

For Sale

OWNER LEAVING Leather Sofa Leather Diwan Boxcot Dining Dressing Silk curtains...Call 9845414482, 7019263843

PUBLIC NOTICE

PUBLIC NOTICE
Site No.20, old Katha No 618 & Katha No.184 Property No 64/1, B. Narayanapura K.R. Puram, Hobli, Bengaluru East Taluk, EW-40 NS-30=1200 sqft House.This property belongs to **CHEMBAGAM.** If any Transaction is Illegal. **Pls contact: 9880347444**

PERSONAL

Change of Name

I, DEEPAK KUMAR.P. residing at #13, 8th Main, 8thCross, Hoysala_nagar, Ramamurthy_nagar Extension, Bangalore-16 have changed myname to K.P.THARUN Vide affidavit dated 14-06-2021 before Notary Uday Kumar.K,Bangalore

I, ASHITH SHETTY S/o. Vasanth Mundappa Shetty R/a#471/D, Flat #SF-6, Sangeetha Mansion, 15th Cross, Ideal Homes, Rajarajeshwari Nagar, Bangalore- 560098 Declare That ASHITH SHETTY and ASHITH VASANTH SHETTY Both Names are One and The Same Person are Pertains to Me Only. Henceforth, I Shall Be Known as ASHITH SHETTY Vide Affidavit Dated: 30.06.2021 Before Notary S.R. Thulasikrishna, Bangalore-98.

I,REENA SINGH, changed my-minor son's name-from RUDRA ASHISHKUMAR SINGH to RUDRA PRATAP SINGH dated:24-06-2021. Sworn-before notary H.S.Sakalesh Aradhya,Bengaluru.

JC674627M– NB/SUB– VINOD KUMAR PATHAK at ASC Records, (South) changed my Minor Daughter's name from KUMARI NISHA PATHAK to NISHA PATHAK notary KV Mani Bangalore.

I,MOHAMMED KALEEM S/o Abdul Kareem residing at 83/2, BHEL Officer Layout, Opp.to Family Mart, 1st Cross Road, Near SRK Garden, Jayanagar East, Bangalore-560041 have changed my name to MOHAMMED KALEEM AL ZAIF vide affidavit dated 01.07.2021 sworn before notary Aravind Patil.G.G, Bangalore.

WE, MR. NAVEEN .M.C aged about 49 years, S/o. H.Mariswamy and Mrs. KAVITHA .H aged about 39 years, W/o. Sri Naveen .M.C, Both R/at Flat No.4A, 4th Floor, No.5, Casba Mansion, Thayappa Layout, 1st Cross, J.C. Road, Bangalore- 560002, have changed our son's name from NINAAD KRISHNA .N to NINAADKRISHNA CASABA vide affidavit dated 29-06-2021 sworn before notary L. Shankaranarayana, Bengaluru

I, HELEN MARGARET S (Aadhar No.3764 3293 9681) D/o S. Shiva Kumar, Date of Birth 02.09.1999, Residing at No.892, 7th Cross, Kodanda Rama Temple Street, Subbanapalya, Banaswadi Main Road, M.S. Nagar Post, Bangalore- 560033 has changed my name from 'S UDAYA CHARANYA' to 'HELEN MARGARET S' and I have sworn the same vide affidavit dated 28.06.2021, before Notary Uday Kumar .K, Bangalore.

WE, MR. NAVEEN .M.C aged about 49 years, S/o. H.Mariswamy and Mrs. KAVITHA .H aged about 39 years, W/o. Sri Naveen .M.C, Both R/at Flat No.4A, 4th Floor, No.5, Casba Mansion, Thayappa Layout, 1st Cross, J.C. Road, Bangalore- 560002, have changed our son's name from NEIL KRISHNA .N to NEILKRISHNA CASABA vide affidavit dated 29-06-2021 sworn before notary L. Shankaranarayana, Bengaluru

Lost

I, VARUN S S/o Shankar N R/a 200, KHBCS, Sharada Colony, Basaveshwara Nagar, Bengaluru. Have Lost My CBSE Marks Card, Regn No. M119/06301/0110, Roll No. 4065806, Finder please Contact 9845307032.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE | NAME CHANGE | MATRI | ASTRO | JOB | EDUCATION | HEALTH | AUTO
condition apply*
WWW.DHCLASSIFIEDS.COM
FOR MORE INFORMATION
CONTACT 9880856233 | 9886213331
Email: santhoshkumar@deccanherald.co.in
DH | ಪ್ರಜಾವಾಣಿ ಕ್ಲಾಸಿಫೈಡ್ಸ್

ನಗರದ ಆಸ್ಪತ್ರೆಗಳಲ್ಲಿ ವೈದ್ಯರ ದಿನ ಆಚರಣೆ ● ಕೋವಿಡ್ ಸೇವೆಗೆ ವಿವಿಧೆಡೆ ಗೌರವ

ಕೋವಿಡ್: ವೈದ್ಯರ ಸೇವೆಗೆ ಶ್ಲಾಘನೆ

1. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಮ್ಮಿಕೊಂಡಿರುವ 'ವೈದ್ಯಕೀಯ ವಲಯದಲ್ಲಿ ಕನ್ನಡ ಬಳಕೆ ಅಭಿಯಾನ'ಕ್ಕೆ ಡಾ.ಕೆ. ಸುಧಾಕರ್ ಚಾಲನೆ ನೀಡಿದರು. ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್, ಸದಸ್ಯ ಡಾ.ಸಿ.ಎ. ಕಿಶೋರ್, ಅಧ್ಯಕ್ಷ ಟಿ.ಎಸ್. ನಾಗಾಭರಣ, ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಆಯುಕ್ತ ಡಾ.ಕೆ.ವಿ. ತ್ರಿಲೋಕ ಚಂದ್ರ ಇದ್ದರು. 2. ರಾಷ್ಟ್ರೀಯ ವೈದ್ಯರ ದಿನಾಚರಣೆ ಪ್ರಯುಕ್ತ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಕೆ.ಸಿ. ಜನರಲ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ವೆಂಕಟೇಶಯ್ಯ, ವೈದ್ಯರಾದ ಡಾ. ಮೋಹನ್ ಬಿ.ಆರ್. ಹಾಗೂ ಡಾ. ಸತೀಶ್ ಪಿ. ಅವರನ್ನು ಗೌರವಿಸಿದರು – ಪ್ರಜಾವಾಣಿ ಚಿತ್ರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ವಿರುದ್ಧ ಜೀವದ ಹಂಗು ತೊರೆದು ಯೋಧರಂತೆ ಕಾರ್ಯನಿರ್ವಹಿಸುತ್ತಿರುವ ವೈದ್ಯರಿಗೆ ಸಾರ್ಥಕ ಭಾವ ಮೂಡಿತ್ತು. ಸಂಕಷ್ಟದ ಸಂದರ್ಭದಲ್ಲಿಯೂ ಎದೆಗುಂದದೆಯೇ ಸೇವೆ ಸಲ್ಲಿದ ಅವರಿಗೆ, ಎಲ್ಲೆಡೆಯಿಂದ ಶುಭಾಶಯಗಳು, ಗೌರವಗಳ ಮಹಾಪೂರವೇ ಹರಿದುಬಂದಿತು.

ಡಾ.ಬಿ.ಸಿ. ರಾಯ್ ಅವರ ಜನ್ಮದಿನದ ಪ್ರಯುಕ್ತ ನಗರದ ವಿವಿಧೆಡೆ ರಾಷ್ಟ್ರೀಯ ವೈದ್ಯರ ದಿನವನ್ನು ಆಚರಿಸಲಾಯಿತು. ಆಸ್ಪತ್ರೆಗಳಲ್ಲಿ ರೋಗಿಗಳು ಹಾಗೂ ಆರೋಗ್ಯ ಸಿಬ್ಬಂದಿ ವೈದ್ಯರಿಗೆ ಶುಭ ಹಾರೈಸಿದರು. ವಿವಿಧ ಸಂಘ–ಸಂಸ್ಥೆಗಳು ಕೋವಿಡ್ ಸೇವೆ ನೀಡುತ್ತಿರುವ ಸರ್ಕಾರಿ ಆಸ್ಪತ್ರೆಗಳ ವೈದ್ಯರನ್ನು ಗೌರವಿಸಿದವು. ಜನಪ್ರತಿನಿಧಿಗಳು ಆಸ್ಪತ್ರೆಗಳಿಗೆ ತೆರಳಿ, ವೈದ್ಯರಿಗೆ ಶುಭ ಕೋರಿದರು.

ಭಾರತೀಯ ವೈದ್ಯಕೀಯ ಸಂಘ (ಐಎಂಎ), ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್‌ನ (ಫನಾ) ಸೇರಿದಂತೆ ವಿವಿಧ ವೈದ್ಯಕೀಯ ಸಂಘಟನೆಗಳು ವೈದ್ಯರ ದಿನ ಆಚರಿಸಿ, ಡಾ.ಬಿ.ಸಿ. ರಾಯ್ ಅವರಿಗೆ ಗೌರವ ಸಲ್ಲಿಸಿದವು. ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಿರಿಯ ವೈದ್ಯರನ್ನು ಐಎಂಎ ಸನ್ಮಾನಿಸಿತು. ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯರು ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ವೈದ್ಯರ ದಿನ ಆಚರಿಸಿದರು.

ಹಲ್ಲೆ ನಡೆಸಿದರೆ ಕ್ರಮ: ಆರೋಗ್ಯ ಇಲಾಖೆ ಹಮ್ಮಿಕೊಂಡಿದ್ದ ವೈದ್ಯರ ದಿನಾಚರಣೆ ಕಾರ್ಯಕ್ರಮವನ್ನು ಸಚಿವ ಡಾ.ಕೆ. ಸುಧಾಕರ್ ಉದ್ಘಾಟಿಸಿದರು. 'ರೋಗಿಗಳ ಕಡೆಯವರು ವೈದ್ಯರು, ಆರೋಗ್ಯ ಸಿಬ್ಬಂದಿ ಮೇಲೆ ಹಲ್ಲೆ ಮಾಡುವುದನ್ನು ಸರ್ಕಾರ ಉಗ್ರವಾಗಿ ಖಂಡಿಸುತ್ತದೆ. ಯಾವುದೇ ವೈದ್ಯರು ರೋಗಿ ಮೃತಪಡಲಿ ಎಂದು ಬಯಸುವುದಿಲ್ಲ. ಈ ರೀತಿ ಹಲ್ಲೆ ನಡೆದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುತ್ತದೆ. ವೈದ್ಯರ ಮೇಲೆ ಹಲ್ಲೆ ನಡೆಸಿದರೆ 5 ರಿಂದ 7 ವರ್ಷಗಳು ಜೈಲುವಾಸದ ಶಿಕ್ಷೆ ಇದೆ' ಎಂದು ಎಚ್ಚರಿಕೆ ನೀಡಿದರು.

ಇಲಾಖೆಯ ಆಯುಕ್ತ ಡಾ.ಕೆ.ವಿ. ತ್ರಿಲೋಕ್ ಚಂದ್ರ, 'ಕಳೆದ 15 ತಿಂಗಳಿಂದ ವೈದ್ಯರ ಸ್ಥಾನ ಮಾನ ಬದಲಾಗಿದೆ. ಅವರ ಸ್ವಾರ್ಥ ರಹಿತ ಸೇವೆಯು ಜಗತ್ತಿನಾದ್ಯಂತ ಗುರುತಿಸಲ್ಪಡುತ್ತಿದೆ. ಔಷಧವು ಕಾಯಿಲೆಯನ್ನು ಮಾತ್ರ ಗುಣಪಡಿಸುತ್ತವೆ. ರೋಗಿಯನ್ನು ಗುಣಪಡಿಸಲು ವೈದ್ಯರಿಂದ ಮಾತ್ರ ಸಾಧ್ಯ. ಹಾಗಾಗಿ, ವೈದ್ಯರು ರೋಗಿಯೊಂದಿಗೆ ಆತ್ಮೀಯವಾಗಿ ಸಂವಹನ ನಡೆಸಿ, ಚಿಕಿತ್ಸೆ ಒದಗಿಸಬೇಕು' ಎಂದು ತಿಳಿಸಿದರು.

ಕನ್ನಡ ಬಳಕೆ ಅಭಿಯಾನಕ್ಕೆ ಚಾಲನೆ

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಹಮ್ಮಿಕೊಂಡಿರುವ 'ವೈದ್ಯಕೀಯ ವಲಯದಲ್ಲಿ ಕನ್ನಡ ಬಳಕೆ ಅಭಿಯಾನ'ಕ್ಕೆ ಗುರುವಾರ ಚಾಲನೆ ದೊರೆತಿದೆ. ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಹಾಗೂ ಇಲಾಖೆಯ ಆಯುಕ್ತ ಡಾ.ಕೆ.ವಿ. ತ್ರಿಲೋಕ ಚಂದ್ರ ಅವರಿಗೆ ಇಲಾಖೆಯ ಮಟ್ಟದಲ್ಲಿ ನಡೆಯಬೇಕಾದ ಕನ್ನಡದ ಕೆಲಸಗಳು ಮತ್ತು ಕನ್ನಡ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸಿ, ಅಭಿಯಾನದ ಮನವಿ ಪತ್ರ ಸಲ್ಲಿಸಿದರು. ಆಯುಷ್ ಇಲಾಖೆ, ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿ ಸೇರಿದಂತೆ ವಿವಿಧೆಡೆ ಅಭಿಯಾನ ನಡೆಯಿತು.

'ಹುತಾತ್ಮ ವೈದ್ಯರಿಗೆ ಸ್ಮಾರಕ ನಿರ್ಮಾಣ'

'ದೇಶದಲ್ಲಿ 700ರಿಂದ 800 ವೈದ್ಯರು ಕೋವಿಡ್ ಕಾಣಿಸಿಕೊಂಡ ಬಳಿಕ ಮೃತಪಟ್ಟಿದ್ದಾರೆ. ಅವರನ್ನು ಹುತಾತ್ಮರು ಎಂದು ಪರಿಗಣಿಸಲಾಗಿದೆ. ಕೋವಿಡ್ ವಿರುದ್ಧದ ಹೋರಾಟದಲ್ಲಿ ಮಡಿದ ವೈದ್ಯರನ್ನು ಪ್ರತಿ ವರ್ಷ ಸ್ಮರಿಸಲು ಆರೋಗ್ಯ ಸೌಧದ ಆವರಣದಲ್ಲಿ ವೈದ್ಯರ ಸ್ಮಾರಕ ನಿರ್ಮಿಸಲಾಗುವುದು' ಎಂದು ಡಾ.ಕೆ. ಸುಧಾಕರ್ ತಿಳಿಸಿದರು.

'ಕೆಲವೇ ದಿನದಲ್ಲಿ ಸ್ಮಾರಕವನ್ನು ವಿನ್ಯಾಸ ಮಾಡಿ, ಸ್ಥಾಪಿಸಲಾಗುತ್ತದೆ. ಹುತಾತ್ಮರ ಕುಟುಂಬದ ಸದಸ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಲು ಅವಕಾಶ ನೀಡಲಾಗುತ್ತದೆ' ಎಂದರು.

ವೈದ್ಯರಿಗೆ ಸನ್ಮಾನ

ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ನಗರದ ಕೆ.ಸಿ. ಜನರಲ್ ಆಸ್ಪತ್ರೆಗೆ ಭೇಟಿ ನೀಡಿ, ವೈದ್ಯರಿಗೆ ಶುಭ ಹಾರೈಸಿದರು. ಈ ವೇಳೆ ವೈದ್ಯರನ್ನು ಸನ್ಮಾನಿಸಿದರು.

'ರಾಜ್ಯದ ಆರೋಗ್ಯ ಮೂಲಸೌಕರ್ಯಗಳನ್ನು ಆಮೂಲಾಗ್ರವಾಗಿ ಮೇಲ್ದರ್ಜೆಗೇರಿಸಲಾಗುತ್ತಿದೆ. ₹ 1,500 ಕೋಟಿ ವೆಚ್ಚದಲ್ಲಿ ಪ್ರಾಥಮಿಕ, ಸಮುದಾಯ ಆರೋಗ್ಯ ಕೇಂದ್ರಗಳು, ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಸೌಲಭ್ಯಗಳನ್ನು ಹೆಚ್ಚಿಸಲಾಗುತ್ತಿದೆ' ಎಂದು ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ವೈದ್ಯರ ದಿನದ ಪ್ರಯುಕ್ತ ಇನ್ನರ್‌ವ್ಹೀಲ್ ಕ್ಲಬ್ ಆಫ್ ಬೆಂಗಳೂರು ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಾಂತಿನಗರ ಶಾಸಕ ಎನ್.ಎ.ಹ್ಯಾರಿಸ್ ವೈದ್ಯರಿಗೆ ಸ್ಮರಣಿಕೆ ನೀಡಿ ಗೌರವಿಸಿದರು. ಕ್ಲಬ್‌ನ ಅಧ್ಯಕ್ಷೆ ವಿರಿನಾ ಸುಬ್ಬಯ್ಯ, ಕಾರ್ಯದರ್ಶಿ ಉದಯ ಶೆಟ್ಟಿ ಇದ್ದರು– ಪ್ರಜಾವಾಣಿ ಚಿತ್ರ

189 ವೈದ್ಯರಿಗೆ ಸನ್ಮಾನ

ಬೆಂಗಳೂರು: ಕೋವಿಡ್ ಸಮಯದಲ್ಲಿ ಸರ್ಕಾರಿ ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಜೀವದ ಹಂಗು ತೊರೆದು ಕಾರ್ಯನಿರ್ವಹಿಸುತ್ತಿರುವ 189 ವೈದ್ಯರನ್ನು ಇನ್ನರ್‌ವ್ಹೀಲ್ ಕ್ಲಬ್ ಬೆಂಗಳೂರು ಡಿಸ್ಟ್ರಿಕ್ಟ್ 319 ವತಿಯಿಂದ ಗುರುವಾರ ಸನ್ಮಾನಿಸಲಾಯಿತು.

ಕೇಂದ್ರ ವಾಣಿಜ್ಯ ಪ್ರದೇಶ (ಸಿಬಿಡಿ) ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ಲ್ಯಾವೆಲ್ಲೆ ರಸ್ತೆಯಲ್ಲಿರುವ ರೋಟರಿ ಹೌಸ್ ಆಫ್ ಫ್ರೆಂಡ್‌ಶಿಪ್‌ನಲ್ಲಿ ನಡೆದ ಸಮಾರಂಭದಲ್ಲಿ ಶಾಂತಿನಗರ ಶಾಸಕ ಎನ್.ಎ.ಹ್ಯಾರಿಸ್ ಪಾಲ್ಗೊಂಡಿದ್ದರು.

ಬೌರಿಂಗ್ ಆಸ್ಪತ್ರೆ, ಶಾಂತಿನಗರದ 111 ಮತ್ತು 117ನೇ ವಾರ್ಡ್‌ಗಳ ಆರೋಗ್ಯ ಕೇಂದ್ರ ಹಾಗೂ ಪ್ರಿಮ್‌ರೋಸ್ ರಸ್ತೆಯಲ್ಲಿರುವ ಬಿಬಿಎಂಪಿ ತುರ್ತು ನಿಗಾ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರಿಗೆ ಹ್ಯಾರಿಸ್ ಅವರು ಸ್ಮರಣಿಕೆ ನೀಡಿ ಗೌರವಿಸಿದರು. ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿಯ ಸೇವೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕೋವಿಡ್ ಎರಡನೇ ಅಲೆಯ ಸಮಯದಲ್ಲಿ ಮುಂಚೂಣಿ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿದ್ದ ವೈದ್ಯರ ಪೈಕಿ 756 ಮಂದಿ ಮೃತಪಟ್ಟಿದ್ದು, ಅವರಿಗೆ ಮೌನ ನಮನ ಸಲ್ಲಿಸಲಾಯಿತು. ರೋಟರಿ ಕ್ಲಬ್ ಆಫ್ ಬೆಂಗಳೂರು ಅಧ್ಯಕ್ಷ ಗಿರೀಶ್ ರಾಮನಾಥನ್ ಇದ್ದರು.

ಬೆಲ್ಲದ ಹೇಳಿಕೆ ಸಂಗ್ರಹ; ಅರ್ಚಕರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೂರವಾಣಿ ಕರೆ ಕದ್ದಾಲಿಕೆ ಪ್ರಕರಣದ ವಿಚಾರಣೆ ನಡೆಸುತ್ತಿರುವ ಶೇಷಾದ್ರಿಪುರ ಉಪವಿಭಾಗದ ಎಸಿಪಿ ನೇತೃತ್ವದ ತಂಡ, ಬಿಜೆಪಿ ಶಾಸಕ ಅರವಿಂದ ಬೆಲ್ಲದ ಅವರಿಂದ ಎರಡನೇ ಬಾರಿ ಹೇಳಿಕೆ ಪಡೆದಿದೆ. ಜೊತೆಗೆ, ಹೈದರಾಬಾದ್‌ನಲ್ಲಿರುವ ಅರ್ಚಕರೊಬ್ಬರಿಗೆ ವಿಚಾರಣೆಗೆ ಬರುವಂತೆ ನೋಟಿಸ್ ನೀಡಿದೆ.

'ನನ್ನ ಕರೆಯನ್ನು ಯಾರೋ ಕದ್ದಾಲಿಕೆ ಮಾಡುತ್ತಿದ್ದಾರೆ. ಜೈಲಿನಿಂದ ಯುವರಾಜ್ ಎಂಬಾತ ಸಹ ಕರೆ ಮಾಡಿದ್ದ' ಎಂದು ಆರೋಪಿಸಿ ಶಾಸಕ ಬೆಲ್ಲದ ಇತ್ತೀಚೆಗಷ್ಟೇ ಗೃಹ ಸಚಿವರ ಮೂಲಕ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ದೂರು ನೀಡಿದ್ದರು.

ದೂರಿನ ವಿಚಾರಣೆ ಜವಾಬ್ದಾರಿಯನ್ನು ಕಬ್ಬನ್ ಪಾರ್ಕ್ ಉಪವಿಭಾಗದ ಎಸಿಪಿ ಯತಿರಾಜ್ ಅವರಿಗೆ ವಹಿಸಲಾಗಿತ್ತು. ವಿಚಾರಣೆ ನಡೆಯುತ್ತಿರುವಾಗಲೇ ಯತಿರಾಜ್ ಅವರನ್ನು ಏಕಾಏಕಿ ಬದಲಾವಣೆ ಮಾಡಿ, ತನಿಖೆ ಹೊಣೆಯನ್ನು ಶೇಷಾದ್ರಿಪುರ ಉಪವಿಭಾಗದ ಎಸಿಪಿ ಪೃಥ್ವಿ ಅವರಿಗೆ ವಹಿಸಲಾಗಿದೆ.

ವಿಚಾರಣೆ ಚುರುಕುಗೊಳಿಸಿರುವ ಎಸಿಪಿ ಪೃಥ್ವಿ, 'ಪ್ರಕರಣದ ಬಗ್ಗೆ ಮತ್ತಷ್ಟು ಮಾಹಿತಿಯ ಅಗತ್ಯವಿದೆ. ಹೀಗಾಗಿ, ಹೇಳಿಕೆ ನೀಡಲು ಕಚೇರಿಗೆ ಬನ್ನಿ' ಎಂದು ಬೆಲ್ಲದ ಅವರಿಗೆ ಪತ್ರ ಕಳುಹಿಸಿದ್ದರು. ಅದರನ್ವಯ ಶಾಸಕ ಬೆಲ್ಲದ, ಬುಧವಾರ ಎಸಿಪಿ ಎದುರು ಹಾಜರಾದರು.

'ಜೈಲಿನಿಂದ ಯಾವೆಲ್ಲ ಸಂಖ್ಯೆಯಿಂದ ಕರೆಗಳು ಬಂದಿದ್ದವು. ಕರೆ ಕದ್ದಾಲಿಕೆ ಬಗ್ಗೆ ಯಾವೆಲ್ಲ ಪುರಾವೆಗಳು ಇವೆ ಎಂಬುದರ ಬಗ್ಗೆ ಬೆಲ್ಲದ ಅವರಿಂದ ಮಾಹಿತಿ ಪಡೆಯಲಾಗಿದೆ. ಅದನ್ನು ಪರಿಶೀಲಿಸಿ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಹೈದರಾಬಾದ್ ಅರ್ಚಕರಿಗೆ ಬುಲಾವು: 'ಬೆಲ್ಲದ ಅವರು ನೀಡಿರುವ ಮೊಬೈಲ್ ಸಂಖ್ಯೆ, ಹೈದರಾಬಾದ್‌ನಲ್ಲಿರುವ ಅರ್ಚಕರೊಬ್ಬರ ಹೆಸರಿನಲ್ಲಿದೆ. ವಿಚಾರಣೆಗೆ ಹಾಜರಾಗುವಂತೆ ಅವರಿಗೆ ನೋಟಿಸ್ ನೀಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಅರ್ಚಕರೇ ಕರೆ ಮಾಡಿದ್ದರಾ? ಅಥವಾ ಅವರ ಸಂಖ್ಯೆಯಿಂದ ಬೇರೆ ಯಾರಾದರೂ ಕರೆ ಮಾಡಿದ್ದರಾ? ಎಂಬುದು ವಿಚಾರಣೆ ಬಳಿಕವೇ ತಿಳಿಯಬೇಕಿದೆ' ಎಂದೂ ಹೇಳಿವೆ.

ಎಲ್‌ಇಟಿ ಉಗ್ರರ ಬಂಧನ: ಮಹತ್ವದ ದಾಖಲೆ ವಶ

ನವದೆಹಲಿ (ಪಿಟಿಐ): ಹೈದರಾಬಾದ್‌ನಲ್ಲಿ ಬುಧವಾರ ಬಂಧಿಸಲಾದ ಇಬ್ಬರು ಲಷ್ಕರ್-ಎ-ತೈಬಾ (ಎಲ್‌ಇಟಿ) ಭಯೋತ್ಪಾದಕರ ನಿವಾಸದಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಗುರುವಾರ ಶೋಧ ನಡೆಸಿದ್ದು, ಸುಧಾರಿತ ಸ್ಫೋಟಕ ಸಾಧನಗಳು ಮತ್ತು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದೆ.

ನೈಸ್ ರಸ್ತೆಯಲ್ಲಿದ್ದ ಇರ್ತಲೆ ಹಾವಿನ ರಕ್ಷಣೆ

ಬೆಂಗಳೂರು: ನೈಸ್ ರಸ್ತೆಯಲ್ಲಿ ಪತ್ತೆಯಾದ ಇರ್ತಲೆ ಹಾವನ್ನು (ರೆಡ್ ಸ್ಯಾಂಡ್ ಬೋವ) ವನ್ಯಜೀವಿ ಕಾರ್ಯಕರ್ತರು ಸಂರಕ್ಷಿಸಿ, ಅರಣ್ಯ ಇಲಾಖೆ ಅಧಿಕಾರಿಗಳ ನೆರವಿನಿಂದ ಸುರಕ್ಷಿತ ಪ್ರದೇಶದಲ್ಲಿ ಬಿಟ್ಟಿದ್ದಾರೆ.

ಮಾಗಡಿ ರಸ್ತೆ ಬಳಿ ನೈಸ್ ರಸ್ತೆ ದಾಟಲು ಇರ್ತಲೆ ಹಾವು ಯತ್ನಿಸುತ್ತಿತ್ತು. ಇದನ್ನು ನೋಡಿದ ಕೆಲವು ಸಾರ್ವಜನಿಕರು ಈ ಬಗ್ಗೆ ಸಮೀಪದಲ್ಲೇ ಇದ್ದ ನೈಸ್ ರಸ್ತೆಯ ಸುಂಕ ವಸೂಲಾತಿ ಕೇಂದ್ರದ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಈ ಕೇಂದ್ರದ ಸಿಬ್ಬಂದಿ ವನ್ಯಜೀವಿ ಕಾರ್ಯಕರ್ತರಿಗೆ ಮಾಹಿತಿ ತಲುಪಿಸಿದ್ದರು.

'ಕರೆ ಬಂದ ತಕ್ಷಣ ನಾನು ಮತ್ತು ವನ್ಯಜೀವಿ ಕಾರ್ಯಕರ್ತ ಎಚ್.ಎನ್.ಸೋಮು ಮಂಗಳವಾರ ರಾತ್ರಿ ಸ್ಥಳಕ್ಕೆ ಧಾವಿಸಿದೆವು. ಅಪರೂಪದ ಇರ್ತಲೆ ಹಾವು ಅಲ್ಲಿತ್ತು. ಈ ಬಗ್ಗೆ ಸ್ಥಳೀಯ ವಲಯ ಅರಣ್ಯಾಧಿಕಾರಿ ಗಣೇಶ್ ಅವರಿಗೆ ಮಾಹಿತಿ ನೀಡಿ, ಹಾವನ್ನು ರಕ್ಷಣೆ ಮಾಡಿದೆವು. ನಂತರ ಅರಣ್ಯಾಧಿಕಾರಿ ನೆರವಿನಿಂದ ಹಾವನ್ನು ಸುರಕ್ಷಿತ ಪ್ರದೇಶದಲ್ಲಿ ಬಿಟ್ಟುಬಂದೆವು' ಎಂದು ವನ್ಯಜೀವಿ ಸಂರಕ್ಷರಾದ ವಲ್ಲೀಶ್ ವಿ.ಕೌಶಿಕ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಸಂರಕ್ಷಿಸಿದ ಇರ್ತಲೆ ಹಾವು

'ಈ ಹಾವು ಸುಮಾರು 3 ಕೆ.ಜಿ. ತೂಕವಿತ್ತು. 167 ಸೆಂಟಿ ಮೀಟರ್ ಉದ್ದವಿತ್ತು. ಇದೊಂದು ಬಲಿತ ಹಾವು. ಸಾಮಾನ್ಯವಾಗಿ ಈ ಜಾತಿಯ ಹಾವು ರಸ್ತೆ ಬದಿಯಲ್ಲೆಲ್ಲ ಈ ರೀತಿ ಪತ್ತೆಯಾಗುವುದು ಅಪರೂಪ. ಕೆಲವು ಮೂಢನಂಬಿಕೆಗಳ ಕಾರಣಕ್ಕೆ ಈ ಹಾವಿನ ಕಳ್ಳಸಾಗಣೆ ನಡೆಯುತ್ತದೆ. ಯಾರೋ ಹಾವನ್ನು ತಂದು ಇಲ್ಲಿ ಬಿಟ್ಟುಹೋಗಿರಬಹುದು. ಅಥವಾ ಕಳ್ಳ ಸಾಗಣೆ ವೇಳೆ ತಪ್ಪಿಸಿಕೊಂಡಿರಬಹುದು' ಎಂದು ಅವರು ಸಂದೇಹ ವ್ಯಕ್ತಪಡಿಸಿದರು.

ಪಕ್ಕನೇ ನೋಡಿದಾಗ, ಈ ಜಾತಿಯ ಹಾವುಗಳ ತಲೆ ಹಾಗೂ ಬಾಲ ಒಂದೇ ರೀತಿ ಕಾಣಿಸುತ್ತವೆ. ಹಾಗಾಗಿ ಇವುಗಳನ್ನು ಇರ್ತಲೆ ಹಾವು, ಇಮ್ಮಂಡೆ ಹಾವು ಅಥವಾ ಎರಡು ತಲೆ ಹಾವುಗಳೆಂದು ಕರೆಯುತ್ತಾರೆ. ಆದರೆ, ವಾಸ್ತವದಲ್ಲಿ ಇವುಗಳಿಗೆ ಇರುವುದು ಒಂದೇ ತಲೆ ಎಂದರು.

ಆಂಧ್ರಪ್ರದೇಶದ ಇಬ್ಬರನ್ನು ಬಂಧಿಸಿದ ಪೊಲೀಸರು

ಹಂದಿ ಸಾಕಾಣಿಕೆ ಜೊತೆಯಲ್ಲೇ ಗಾಂಜಾ ದಂಧೆ

ಬೆಂಗಳೂರು: ಆಂಧ್ರಪ್ರದೇಶದಿಂದ ನಗರಕ್ಕೆ ಗಾಂಜಾ ತಂದು ಮಾರುತ್ತಿದ್ದ ಆರೋಪದಡಿ ಇಬ್ಬರನ್ನು ಸಂಜಯ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಎ.ವಿಜಯ್ (23) ಹಾಗೂ ಶಿವಕುಮಾರ್ (37) ಬಂಧಿತರು. ಅವರಿಂದ 75 ಕೆ.ಜಿ 760 ಗ್ರಾಂ ಗಾಂಜಾ, ಮೊಬೈಲ್ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಠಾಣೆ ವ್ಯಾಪ್ತಿಯ ಲೊಟ್ಟೆಗೊಲ್ಲಹಳ್ಳಿ ರೈಲ್ವೆ ನಿಲ್ದಾಣ ಬಳಿ ಮಾದಕ ವಸ್ತು ವ್ಯಸನಿಯೊಬ್ಬ ಗಸ್ತು ಸಿಬ್ಬಂದಿಗೆ ಸಿಕ್ಕಿಬಿದ್ದಿದ್ದ. ಆತನನ್ನು ವಿಚಾರಣೆ ನಡೆಸಿದಾಗ, ಮಾಹಿತಿ ಲಭ್ಯವಾಗಿತ್ತು.'

ಹಂದಿ ಸಾಕಾಣಿಕೆ: 'ಆರೋಪಿ ವಿಜಯ್, ತನ್ನ ಊರಿನಲ್ಲಿ ಹಂದಿ ಸಾಕಾಣಿಕೆ ಮಾಡುತ್ತಿದ್ದ. ಆಂಧ್ರ ಪ್ರದೇಶದ ಗಡಿಭಾಗದ ಹಳ್ಳಿಗಳಲ್ಲಿ ಬೆಳೆಯುತ್ತಿದ್ದ ಗಾಂಜಾವನ್ನು ಖರೀದಿಸಿ ತಂದು, ಸರಕು ಸಾಗಾಣಿಕೆ ವಾಹನದ ಚಾಲಕರಿಗೆ ಹೆಚ್ಚಿನ ಹಣ ಕೊಟ್ಟು, ರಾಷ್ಟ್ರೀಯ ಹೆದ್ದಾರಿ ಮೂಲಕ ಗಾಂಜಾವನ್ನು ಬೆಂಗಳೂರಿಗೆ ತರುತ್ತಿದ್ದ.' ಎಂದೂ ಹೇಳಿದರು.

ದೇವಸ್ಥಾನದಲ್ಲಿ ಅವ್ಯವಹಾರ

ಬೆಂಗಳೂರು: 'ತಿಗಳರ ಪೇಟೆಯ ಧರ್ಮರಾಯಸ್ವಾಮಿ ದೇವಸ್ಥಾನದ ಮಾಜಿ ಆಡಳಿತಾಧಿಕಾರಿ ರಾಜಗೋಪಾಲ್ ಅವರು ₹ 21.50 ಲಕ್ಷ ಅವ್ಯವಹಾರ ಮಾಡಿದ್ದಾರೆ' ಎಂದು ಆರೋಪಿಸಿ ಸಹಾಯಕ ಆಡಳಿತಾಧಿಕಾರಿ ವೆಂಕಟರಮಣ ಗುರುಪ್ರಸಾದ್ ಅವರು ಹಲಸೂರು ಗೇಟ್ ಠಾಣೆಗೆ ದೂರು ನೀಡಿದ್ದಾರೆ.

ದೂರಿನನ್ವಯ ರಾಜಗೋಪಾಲ್ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ತನಿಖೆ ಮುಂದುವರಿಸಿದ್ದಾರೆ.

ದರೋಡೆ; ಅಣ್ಣ–ತಮ್ಮ ಬಂಧನ

ಬೆಂಗಳೂರು: ಮನೆಯೊಂದಕ್ಕೆ ನುಗ್ಗಿ ಮಹಿಳೆಯ ಕೈ–ಕಾಲು ಕಟ್ಟಿಹಾಕಿ ದರೋಡೆ ಮಾಡಿದ್ದ ಆರೋಪದಡಿ ಅಣ್ಣ–ತಮ್ಮನನ್ನು ವಿದ್ಯಾರಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತಿಂಡ್ಲು ಮುಖ್ಯರಸ್ತೆಯ ಬಸವಸಮಿತಿ ಲೇಔಟ್ ನಿವಾಸಿ ಅರವಿಂದ್ (30) ಹಾಗೂ ಬಸವನಗುಡಿ ಬಿ.ಪಿ. ವಾಡಿಯಾ ರಸ್ತೆಯ ನಿವಾಸಿ ಅವಿನಾಶ್ (34) ಬಂಧಿತರು. ಅವರಿಂದ 123.77 ಗ್ರಾಂ ತೂಕದ ಚಿನ್ನಾಭರಣ, 3 ಕೆ.ಜಿ ಬೆಳ್ಳಿ ಸಾಮಗ್ರಿ ಹಾಗೂ ₹40 ಸಾವಿರ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಸುಭಾಷ್ ಎಂಬುವರು ಪತ್ನಿ ಜಯಶ್ರೀ ಜೊತೆ ಬಸವ ಸಮಿತಿ ಲೇಔಟ್‌ನ ಮನೆಯಲ್ಲಿ ವಾಸವಿದ್ದರು. ಅವರಿಗೆ ಸೇರಿದ್ದ ಮನೆಯಲ್ಲೇ ಬಾಡಿಗೆಗೆ ಇದ್ದ ಆರೋಪಿ ಅರವಿಂದ್ ಕೃತ್ಯ ಎಸಗಿದ್ದ' ಎಂದೂ ತಿಳಿಸಿದರು.

ಬಟ್ಟೆ ವ್ಯಾಪಾರದಲ್ಲಿ ನಷ್ಟ: 'ಆರೋಪಿ, ಸಾಲ ಮಾಡಿ ಬಟ್ಟೆ ವ್ಯಾಪಾರ ಆರಂಭಿಸಿದ್ದ. ಅದರಲ್ಲಿ ನಷ್ಟ ಅನುಭವಿಸಿದ್ದ ಕಾರಣಕ್ಕೆ ಕೃತ್ಯಕ್ಕೆ ಸಂಚು ರೂಪಿಸಿದ್ದ' ಎಂದಿದ್ದಾರೆ.

ಕೃತ್ಯ ನಡೆದ ದಿನ ಪೊಲೀಸರ ತಂಡ ಮನೆಗೆ ಹೋದಾಗಲೂ ಆರೋಪಿ ಸ್ಥಳದಲ್ಲಿದ್ದ. ತನಗೇನು ಗೊತ್ತಿಲ್ಲದಂತೆ ನಟಿಸಿದ್ದ. ಆರೋಪಿಗಳು ಜಯಶ್ರೀ ಅವರನ್ನು ಹಿಂದಿನಿಂದ ಹಿಡಿದುಕೊಂಡು ಕಟ್ಟಿ ಹಾಕಿದ್ದರು. ಅವರೂ ಆರೋಪಿಗಳನ್ನು ನೋಡಿರಲಿಲ್ಲ.

ವಿದ್ಯಾರ್ಥಿ ಸಾವು; ಆತ್ಮಹತ್ಯೆ ಶಂಕೆ

ಬೆಂಗಳೂರು: ಬಸವೇಶ್ವರನಗರ ಠಾಣೆ ವ್ಯಾಪ್ತಿಯಲ್ಲಿ ಆರನೇ ತರಗತಿ ವಿದ್ಯಾರ್ಥಿಯೊಬ್ಬ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

'ರಾಜಾಜಿನಗರದ ನಿವಾಸಿಯಾದ ವಿದ್ಯಾರ್ಥಿ, ಮನೆಯಲ್ಲೇ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾನೆ. ಪೋಷಕರು ನೀಡಿರುವ ದೂರು ಆಧರಿಸಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬುಧವಾರ ಸಂಜೆ ಮನೆ ಬಳಿ ಸ್ನೇಹಿತರ ಜೊತೆ ಆಟವಾಡುತ್ತಿದ್ದ ವಿದ್ಯಾರ್ಥಿ, ಏಕಾಏಕಿ ಅಳುತ್ತ ಮನೆಯೊಳಗೆ ಹೋಗಿದ್ದ. ಹಲವು ಗಂಟೆಯಾದರೂ ಹೊರಗೆ ಬಂದಿರಲಿಲ್ಲ. ನಂತರ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾನೆ. 'ವಿದ್ಯಾರ್ಥಿ ಬರೆದಿದ್ದು ಎನ್ನಲಾದ ಮರಣಪತ್ರ 'ನನ್ನ ಸಾವಿಗೆ ಸ್ನೇಹಿತನೊಬ್ಬ ಕಾರಣ' ಎಂದು ಅದರಲ್ಲಿ ಉಲ್ಲೇಖಿಸಿರುವುದಾಗಿ ಗೊತ್ತಾಗಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ದ್ವಿಚಕ್ರ ವಾಹನ ವಿಚಾರ: ಮಾರಾಮಾರಿ

ಬೆಂಗಳೂರು: ದ್ವಿಚಕ್ರ ವಾಹನ ಮಾರಾಟ ವಿಚಾರವಾಗಿ ಎರಡು ಗುಂಪುಗಳ ನಡುವೆ ಮಾರಾಮಾರಿ ನಡೆದಿದ್ದು, ಮಳಿಗೆ ಮಾಲೀಕ ಚಂದನ್ ಸಿಂಗ್ ಎಂಬುವವರು ತೀವ್ರ ಗಾಯಗೊಂಡಿದ್ದಾರೆ. ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯ ಗಣಪತಿನಗರದಲ್ಲಿ ಗುರುವಾರ ಗಲಾಟೆ ನಡೆದಿದೆ. ಈ ಬಗ್ಗೆ ಪ್ರಕರಣ ದಾಖಲಾಗಿದ್ದು, ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

'ಸ್ಥಳೀಯ ನಿವಾಸಿ ಚಂದನ್ ಸಿಂಗ್, ಬಳಸಿದ ದ್ವಿಚಕ್ರ ವಾಹನಗಳ ಮಾರಾಟ ಮಳಿಗೆ ಇಟ್ಟುಕೊಂಡಿದ್ದಾರೆ. ಅವರ ಬಳಿ ವಿನೋದ್ ಎಂಬುವರು ಎರಡು ತಿಂಗಳ ಹಿಂದೆ ವಾಹನ ಕಾಯ್ದಿರಿಸಿದ್ದರು. ಲಾಕ್‌ಡೌನ್‌ನಿಂದಾಗಿ ನಿಗದಿತ ದಿನದಂದು ವಾಹನ ನೀಡಲು ಆಗಿರಲಿಲ್ಲ. ಗುರುವಾರ ಮಳಿಗೆಗೆ ಬಂದಿದ್ದ ವಿನೋದ್ ಹಾಗೂ ಸ್ನೇಹಿತರು, ವಾಹನ ನೀಡುವಂತೆ ಪಟ್ಟು ಹಿಡಿದಿದ್ದರು. ಅದೇ ವಿಚಾರವಾಗಿ ಮಾತಿಗೆ ಮಾತು ಬೆಳೆದು ಗಲಾಟೆ ಶುರುವಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಜಿ.ಪಂ., ತಾ.ಪಂ. ಮೀಸಲಾತಿ ಪ್ರಕಟ

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಮೀಸಲಾತಿ ಪಟ್ಟಿಯ ಕರಡು ಅಧಿಸೂಚನೆಗಳನ್ನು ರಾಜ್ಯ ಚುನಾವಣಾ ಆಯೋಗ ಗುರುವಾರ ರಾತ್ರಿ ಪ್ರಕಟಿಸಿದೆ.

ಸದ್ಯ ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾಯಿತ ಸದಸ್ಯರ ಅಧಿಕಾರದ ಅವಧಿ ಏಪ್ರಿಲ್ ಅಂತ್ಯದಲ್ಲೇ ಕೊನೆಗೊಂಡಿದೆ. ಕೋವಿಡ್ ಕಾರಣದಿಂದ ಚುನಾವಣೆ ವಿಳಂಬವಾಗಿದ್ದು, ಆಡಳಿತಾಧಿಕಾರಿಗಳನ್ನು ನೇಮಿಸಲಾಗಿದೆ. ಜಿ.ಪಂ ಮತ್ತು ತಾ.ಪಂ ಚುನಾವಣೆಗೆ ಸಿದ್ಧತೆ ಮುಂದುವರಿಸಿರುವ ಆಯೋಗವು, ಕರಡು ಮೀಸಲಾತಿ ಪಟ್ಟಿಯನ್ನು ಅಂತಿಮಗೊಳಿಸಿದೆ.

ಇ- ರಾಜ್ಯಪತ್ರದ ಮೂಲಕ ಎಲ್ಲ ಕ್ಷೇತ್ರಗಳ ಮೀಸಲಾತಿ ಪಟ್ಟಿಗಳನ್ನು ಪ್ರಕಟಿಸಲಾಗಿದೆ. ಆಕ್ಷೇಪಣೆ ಸಲ್ಲಿಸಲು ಏಳು ದಿನಗಳ ಕಾಲಾವಕಾಶ ನೀಡಲಾಗಿದೆ. ಆಕ್ಷೇಪಣೆಗಳು ಇದ್ದರೆ ಜುಲೈ 8ರೊಳಗೆ 'ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಒಂದನೇ ಮಹಡಿ, ಕೆಎಸ್‌ಸಿಎಂಎಫ್ ಕಟ್ಟಡ (ಹಿಂಭಾಗ), ನಂ. 8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು- 560052' ಈ ವಿಳಾಸಕ್ಕೆ ಸಲ್ಲಿಸುವಂತೆ ಆಯೋಗ ಸೂಚಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	92.62	1,306	4,753
ಹಾರಂಗಿ	2,859	2,841.32	399	80
ಕಬಿನಿ	2,284.00	2,275.79	948	700
ಹೇಮಾವತಿ	2,922	2,895.82	1,094	200
ಲಿಂಗನಮಕ್ಕಿ	1,819	1,785.50	1,177	-
ಸೂಪಾ (ಮೀ)	564	538.82	2,089	163
ಮಾಣಿ	594	573.74	-	-
ತುಂಗಭದ್ರಾ	1,633	1,608.90	6,018	266
ಮಲಪ್ರಭಾ	2079.5	2,062.75	703	194
ಘಟಪ್ರಭಾ	2175	2,134.60	444	126
ಭದ್ರಾ	186	154.9	1,726	82
ಆಲಮಟ್ಟಿ (ಮೀ)	519.60	517.47	15,786	451
ನಾರಾಯಣಪುರ (ಮೀ)	492.25	489.64	10,000	-

* ನೆಲಮಟ್ಟದಿಂದ

'ಮಾಧ್ಯಮ–ಸರ್ಕಾರ–ಉದ್ಯಮ ಒಗ್ಗೂಡಿದರೆ ಅಪಾಯ'

ಪ್ರಜಾವಾಣಿ ಸಂವಾದ

ಬೆಂಗಳೂರು: 'ಮಾಧ್ಯಮ, ಸರ್ಕಾರ ಮತ್ತು ಉದ್ಯಮಗಳು ಮೂರು ಕಬ್ಬಿಣದ ಸಲಾಕೆಯಂತೆ ತ್ರಿಕೋನದ ಮಾದರಿಯಲ್ಲಿ ದೇಶದ ಕುತ್ತಿಗೆಯನ್ನು ಹಿಸುಕುತ್ತಿವೆ. ಈ ಮೂರು ಒಗ್ಗೂಡಿದರೆ ಪ್ರಜಾಪ್ರಭುತ್ವದ ಮೌಲ್ಯಗಳು ಕುಸಿಯಲಿವೆ. ಸಾಮಾಜಿಕ ಮಾಧ್ಯಮಗಳು ವಿರೋಧಿಗಳ ಮೇಲೆ ದಾಳಿ ನಡೆಸುವ ಸೇನೆಯಂತೆ ಕಾರ್ಯನಿರ್ವಹಿಸುತ್ತಿರುವ ಈ ಸಂದರ್ಭದಲ್ಲಿ, ಸಂಘಟಿತ ಮಾಧ್ಯಮಗಳು ಅಧಿಕೃತ ಮಾಹಿತಿ ನೀಡುವ ಮೂಲಕ ತಮ್ಮ ಶ್ರೇಷ್ಠತೆಯನ್ನು, ಪ್ರಾಬಲ್ಯವನ್ನು ಮುನ್ನೆಲೆಗೆ ತರಬೇಕಿದೆ...'

'ಮಾಧ್ಯಮ ಸ್ವಾತಂತ್ರ್ಯ: ಇಕ್ಕಟ್ಟು–ಬಿಕ್ಕಟ್ಟು' ಎಂಬ ವಿಷಯ ಕುರಿತು 'ಪ್ರಜಾವಾಣಿ' ಗುರುವಾರ ಏರ್ಪಡಿಸಿದ್ದ ಸಂವಾದದಲ್ಲಿ ಗಣ್ಯರು ವ್ಯಕ್ತಪಡಿಸಿದ ಅಭಿಪ್ರಾಯವಿದು.

ರಾಜನರ್ತಕಿಯಂತಾದ ಮಾಧ್ಯಮ !



ಇಂದಿನ ಮಾಧ್ಯಮಗಳು ರಾಜನರ್ತಕಿಯರಂತಾಗಿವೆ. ಅಂದರೆ, ಸರ್ಕಾರದ ಪರ ಒಲವು ಹೆಚ್ಚಾಗಿರುವಂತಹ ಮಾಧ್ಯಮ ಸಂಸ್ಥೆಗಳೇ ಅಧಿಕ ಸಂಖ್ಯೆಯಲ್ಲಿವೆ. ಅದೇ ರೀತಿ, ಸಾಮಾಜಿಕ ಮಾಧ್ಯಮಗಳಲ್ಲಿ ಬಹುತೇಕರು ವಕೀಲರು ಮಾತ್ರವಲ್ಲ, ನ್ಯಾಯಾಧೀಶರಂತೆಯೂ ತೀರ್ಪು ನೀಡುವ ಸನ್ನಿವೇಶಗಳನ್ನು ಕಾಣುತ್ತಿದ್ದೇವೆ. ವಿರೋಧಿಗಳ ಮೇಲೆ ಸೇನೆಯಂತೆ ದಾಳಿ ಮಾಡಲಾಗುತ್ತಿದೆ. ಸಂಘಟಿತ ಮಾಧ್ಯಮ ಅಥವಾ ಪ್ರಭಾವಶಾಲಿ ಮಾಧ್ಯಮ ಸಂಸ್ಥೆಗಳೂ ಅವುಗಳ ಮಾಲೀಕರ ಒಲವು–ನಿಲುವಿಗೆ ತಕ್ಕಂತೆ ಕೆಲಸ ಮಾಡುತ್ತಿವೆ. ಆ ಮಾಲೀಕರ ನಿಲುವಿಗೆ ವಿರುದ್ಧವಾದ ಪತ್ರಕರ್ತ ಅಲ್ಲಿ ಇರಲು ಸಾಧ್ಯವಿಲ್ಲ.

ಪತ್ರಿಕೆ ಅಥವಾ ಸುದ್ದಿ ಸಂಸ್ಥೆ ಕನ್ನಡಿಯಂತೆ ಇರಬೇಕು ಹೌದು. ಆದರೆ, ಆ ಕನ್ನಡಿಯನ್ನು ನಾವು ಯಾವ ಕಡೆಗೆ ಇಡುತ್ತೇವೆ ಎಂಬುದು ಮುಖ್ಯವಾಗುತ್ತದೆ. ಒಂದು ಗಾಳಿ ಸುದ್ದಿಯು ಒಬ್ಬನನ್ನು ವಿದ್ವಾಂಸನನ್ನಾಗಿಸಬಹುದು. ಮಾಧ್ಯಮ ಸ್ವಾತಂತ್ರ್ಯಮತ್ತು ಮಾಧ್ಯಮ ನಿರ್ಬಂಧದ ನಡುವೆ ದೊಡ್ಡ ಕಂದಕವೇ ಇದೆ. ವಿವಾದಾತ್ಮಕ ವಿಷಯ ಪ್ರಸಾರವೇ ಮಾಧ್ಯಮ ಸ್ವಾತಂತ್ರ್ಯ ಅಲ್ಲ. ಅದೇ ರೀತಿ, ಜನರಿಗೆ ಆಗುವ ಸಮಸ್ಯೆಯನ್ನು ತೋರಿಸದಿದ್ದರೆ ಅದು ಮಾಧ್ಯಮವೇ ಅಲ್ಲ. ಸತ್ಯವನ್ನು ಹೇಳುವುದಕ್ಕೆ ಸ್ವಾತಂತ್ರ್ಯವಿದೆ. ಆದರೆ, ಸುಳ್ಳು ಹೇಳಲು ಅಲ್ಲ. ಮಾಧ್ಯಮ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಸಂವಿಧಾನದಲ್ಲಿನ ಅಂಶಗಳನ್ನು ಪದೇ ಪದೇ ಉಲ್ಲೇಖಿಸುವುದಕ್ಕಿಂತ, ಸಂವಿಧಾನದಲ್ಲಿನ ಆಶಯಗಳನ್ನು ಅನುಷ್ಠಾನಕ್ಕೆ ತಂದು ಪಾಲಿಸುವುದು ಹೆಚ್ಚು ಮುಖ್ಯವಾಗುತ್ತದೆ.

ಎನ್.ಎಸ್. ಶಂಕರ್, ಚಲನಚಿತ್ರ ನಿರ್ದೇಶಕ, ಮಾಧ್ಯಮ ತಜ್ಞ

ಮಾಧ್ಯಮಗಳಿಗೂ ಬೇಕು ವೈದ್ಯರು!



ಇಂದು ಮಾಧ್ಯಮಗಳಿಗೂ ವೈದ್ಯರು ಬೇಕಾಗಿದ್ದಾರೆ. ಈ ಕ್ಷೇತ್ರಕ್ಕೂ ಶುಶ್ರೂಷೆ, ಚಿಕಿತ್ಸೆ ಅಗತ್ಯವಿದೆ. ಇದು ಮಾಧ್ಯಮ ಮಹಾಪೂರದ ಯುಗ. ಮಾಧ್ಯಮ ಸ್ವಾತಂತ್ರ್ಯ ಎನ್ನುವುದು ಅಗತ್ಯಕ್ಕಿಂತ ಹೆಚ್ಚೇ ಆಗಿದೆ. ಒಂದೆಡೆ, ಅನಗತ್ಯ ಮತ್ತು ಅನಧಿಕೃತ ಮಾಹಿತಿಯ ಮಹಾಪೂರವೇ ಹರಿಯುತ್ತಿದ್ದರೆ, ಇನ್ನೊಂದೆಡೆ ಅಧಿಕೃತ ಮಾಹಿತಿಯ ಬರವಿದೆ. ಮಾಧ್ಯಮಗಳು ಕನ್ನಡಿಯಂತೆ ಇರಬೇಕು ಎಂಬುದಕ್ಕಿಂತ ಹೆಚ್ಚಾಗಿ, ಕನ್ನಡಿಯ ಹಿಂದಿನ ಅಂದರೆ, ಸರ್ಕಾರ ಅಥವಾ ಸಂಸ್ಥೆಗಳು ಮುಚ್ಚಿಟ್ಟಿರುವ ವಿಷಯವನ್ನು ಹೊರ ತೆಗೆಯಬೇಕಾದುದೇ ಸುದ್ದಿ ಆಗಬೇಕು. ಜಾಹೀರಾತು ಕೊಡುವ ಮೂಲಕ ಅಥವಾ ಮಾಧ್ಯಮ ಸಂಸ್ಥೆಗಳ ಮಾಲೀಕರನ್ನು ಯಾವುದೇ ಕಾರಣ ನೀಡಿ ಬಂಧಿಸುವ ಮೂಲಕ ಮಾಧ್ಯಮ ಸ್ವಾತಂತ್ರ್ಯವನ್ನು ಇಕ್ಕಟ್ಟಿಗೆ ಸಿಲುಕಿಸುವ ಯತ್ನಗಳೂ ನಡೆಯುತ್ತಿವೆ. ಅಲ್ಲದೆ, ಈಗ ಪರ್ಯಾಯ ಮಾಧ್ಯಮಗಳನ್ನು ಹುಟ್ಟು ಹಾಕುವ ಮೂಲಕವೂ ಮಾಧ್ಯಮ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕಲಾಗುತ್ತಿದೆ.

ನ್ಯೂಸ್ ಪ್ರಿಂಟ್‌ಗಳ ಪೂರೈಕೆಯನ್ನು ಸ್ಥಗಿತಗೊಳಿಸುವ ಮೂಲಕ ಪತ್ರಿಕೆಗಳಿಗೆ ಕಡಿವಾಣ ಹಾಕುವ ಕೆಲಸವನ್ನು ಆಗಿನ ಪ್ರಧಾನಿ ಇಂದಿರಾ ಗಾಂಧಿ ಮಾಡಿದ್ದರು. ಪತ್ರಿಕೆಗಳ ಮೇಲೆ ನಿರ್ಬಂಧ ವಿಧಿಸುವ ಕೆಲಸ ಶುರುವಾಗಿದ್ದೇ ಆಗ. ಈಗ ಸರ್ಕಾರ ಮತ್ತು ಉದ್ಯಮದೊಂದಿಗೆ ಮಾಧ್ಯಮವು ಹೊಂದಿಕೊಂಡು ಹೋಗಬೇಕೆನೋ ಎಂಬ ಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಸಂಘಟಿತ ಮಾಧ್ಯಮಗಳು ತಮ್ಮ ಪ್ರಾಬಲ್ಯವನ್ನು, ಶ್ರೇಷ್ಠತೆಯನ್ನು ಮೆರೆಯಬೇಕು. ತನಿಖಾ ಪತ್ರಿಕೋದ್ಯಮ ಹೆಚ್ಚಾಗಬೇಕು.

ನಾಗೇಶ ಹೆಗಡೆ, ಹಿರಿಯ ಪತ್ರಕರ್ತ, ಅಂಕಣಕಾರ

'ಪಕ್ಷ–ಸಿದ್ಧಾಂತವೇ ಮುಖ್ಯವಾಗಬಾರದು'

ಮಾಧ್ಯಮ ಸ್ವಾತಂತ್ರ್ಯ ಎನ್ನುವುದು ಕೆಲವೊಮ್ಮೆ ಸ್ವೇಚ್ಛಾಚಾರವೂ ಎನಿಸುತ್ತಿದೆ. ಆಯಾ ಮಾಲೀಕತ್ವದ ಅಡಿ ಗುಲಾಮತನಕ್ಕೆ ಒಳಗಾಗಿದೆಯೇನೋ ಎಂಬ ಅನುಮಾನವೂ ಬರುತ್ತದೆ. ಮಾಧ್ಯಮ ಎನ್ನುವುದು ಕನ್ನಡಿಯಂತಿರಬೇಕು. ಸತ್ಯವನ್ನು ಸತ್ಯ, ಸುಳ್ಳನ್ನು ಸುಳ್ಳು ಎಂದು ತೋರಿಸಬೇಕು. ಅದು ವಿರೋಧ ಪಕ್ಷದಂತೆಯೂ ಇರಬಾರದು, ಆಡಳಿತ ಪಕ್ಷದಂತೆಯೂ ಇರಬಾರದು.

ಮಾಧ್ಯಮಗಳು ಒಂದು ಪಕ್ಷ, ಸಿದ್ಧಾಂತಕ್ಕೆ ಪೂರಕವಾಗಿ ಕೆಲಸ ಮಾಡಬಾರದು. ಒಂದು ಸಿದ್ಧಾಂತಕ್ಕೆ ವಿರುದ್ಧವಾದ ಸುದ್ದಿ ಆ ಪತ್ರಿಕೆಯಲ್ಲಿ ಬಂದರೆ ಓದುಗರು ಪತ್ರಿಕೆ ತರಿಸುವುದನ್ನೇ ನಿಲ್ಲಿಸಿಬಿಡಬಹುದು ಎಂದು ಯೋಚಿಸುವ ಮಾಲೀಕರೂ ಇದ್ದಾರೆ. ಸರಿಯಾದದ್ದನ್ನು ಸರಿ ಎಂದು ಹೇಳುವ ನೈತಿಕತೆ ಇರಬೇಕು. ಮಾಧ್ಯಮ ಸ್ವಾತಂತ್ರ್ಯಕ್ಕೆ ಕೆಲವೊಂದು ನಿರ್ಬಂಧಗಳು ಇವೆ ಎಂದು ಸಂವಿಧಾನವೇ ಹೇಳಿದೆ. ಅದರ ಪಾಲನೆಯೂ ಆಗಬೇಕು.

ಮೊದಲ ಡೋಸ್ ಕೋವಿಡ್ ಲಸಿಕೆ ನೀಡಲು ಪ್ರಾರಂಭಿಸಿದಾಗ ಅದರ ವಿರುದ್ಧ 200ಕ್ಕೂ ಹೆಚ್ಚು ಲೇಖನಗಳು ಪ್ರಕಟವಾದವು. ಪ್ರಧಾನಿಯನ್ನು ವಿರೋಧಿಸುವ ಉದ್ದೇಶವೇ ಇಲ್ಲಿ ಮುಖ್ಯವಾಗಿತ್ತು. ಆದರೆ, ಈಗ ಲಸಿಕೆ ಎಷ್ಟು ಅಗತ್ಯ ಎಂಬುದು ಗೊತ್ತಾಗುತ್ತಿದೆ. ರಾಜಕೀಯ ಸಿದ್ಧಾಂತ ಅಥವಾ 'ಇಸಂ'ಗಳು ಮುಖ್ಯವಾದಾಗ ಇಂತಹ ಸಾಮಾಜಿಕ ಕಳಕಳಿಯ ಅಂಶವನ್ನೂ ವಿರೋಧಿಸುವ ಕೆಲಸ ನಡೆಯುತ್ತದೆ. ಅದು ಸರಿಯಲ್ಲ. ಕೆಲವು ವಿಷಯಗಳಲ್ಲಿ ಮಾಧ್ಯಮಗಳೂ ಸ್ವಯಂ ನಿಯಂತ್ರಣ ಹಾಕಿಕೊಳ್ಳಬೇಕಾಗುತ್ತದೆ.

ಬಿ.ವಿ. ವಸಂತಕುಮಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ

ಪೂರ್ಣ ಸಂವಾದ ವೀಕ್ಷಿಸಲು: https://www.facebook.com/prajavani.net/videos/912904512592200/

ಜೀವ ಉಳಿಸಲು ದೇವರೇ ಅಧಿಕಾರದಿಂದ ಕೆಳಗಿಳಿಸಿದ: ಎಚ್‌.ಡಿ. ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ



ಕುಮಾರಸ್ವಾಮಿ

ಬೆಂಗಳೂರು: 'ನನ್ನನ್ನು ಅಧಿಕಾರದಿಂದ ಕೆಳಕ್ಕೆ ಇಳಿಸಿದ್ದು 17 ಜನರಲ್ಲ. ಇಂತಹ ಸಂದರ್ಭದಲ್ಲಿ ನನ್ನ ಜೀವ ಉಳಿಸುವುದಕ್ಕಾಗಿ ದೇವರೇ ನನ್ನನ್ನು ಅಧಿಕಾರದಿಂದ ಕೆಳಕ್ಕೆ ಇಳಿಸಿದ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ವಿವಿಧ ಪಕ್ಷಗಳನ್ನು ತೊರೆದು ಜೆಡಿಎಸ್ ಸೇರಿದ ಹಾವೇರಿ ಜಿಲ್ಲೆಯ ಹಲವರನ್ನು ಗುರುವಾರ ಜೆಡಿಎಸ್ ಪ್ರಧಾನ ಕಚೇರಿಯಲ್ಲಿ ಪಕ್ಷಕ್ಕೆ ಸ್ವಾಗತಿಸಿದ ಬಳಿಕ ಮಾತನಾಡಿದ ಅವರು, 'ನಾನು ಸಂತೋಷದಿಂದ ಅಧಿಕಾರ ಬಿಟ್ಟು ಹೊರಗೆ ಬಂದೆ. ಈ ಸಂದರ್ಭದಲ್ಲಿ ನನ್ನ ಜೀವ ಉಳಿಯಬೇಕು ಎಂದು ದೇವರೇ ತೆಗೆದುಕೊಂಡ ನಿರ್ಧಾರ ಅದು. ಆ 17 ಜನರು ನನ್ನ ಜೀವ ಉಳಿಸಿದ ಪುಣ್ಯಾತ್ಮರು ಅಂದುಕೊಳ್ಳುತ್ತೇನೆ. ಅವರಿಗೆ ಧನ್ಯವಾದ ಹೇಳುತ್ತೇನೆ' ಎಂದರು.

ಅಧಿಕಾರಕ್ಕಾಗಿ ಕಚ್ಚಾಟ: ಚುನಾವಣೆಗೆ ಇನ್ನೂ ಎರಡು ವರ್ಷ ಇದೆ. ಈಗಲೇ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಹುದ್ದೆಗಾಗಿ ಕಚ್ಚಾಟ ಆರಂಭವಾಗಿದೆ. ಎಂಟು ಮಂದಿ ನಾಯಕರು ಮುಖ್ಯಮಂತ್ರಿ ಹುದ್ದೆಗಾಗಿ ಗರಿ ಗರಿ ಬಟ್ಟೆ ಹೊಲಿಸಿಕೊಂಡು ಸಿದ್ಧವಾಗಿದ್ದಾರೆ. ಮತ್ತೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ವಿಧಾನಸಭೆಯಲ್ಲೇ ಘೋಷಿಸಿದ್ದ ಸಿದ್ದರಾಮಯ್ಯ ಈಗ ಮುಖ್ಯಮಂತ್ರಿಯಾಗಲು ಹೊರಟಿದ್ದಾರೆ ಎಂದು ಟೀಕಿಸಿದರು.

ಇನ್ನು ಆಟ ಶುರು: 'ಎರಡೂ ರಾಷ್ಟ್ರೀಯ ಪಕ್ಷಗಳಿಗೆ ತಕ್ಕ ಪಾಠ ಕಲಿಸಲು ಸಜ್ಜಾಗುತ್ತಿದ್ದೇವೆ. ಇನ್ನು ನಮ್ಮ ಆಟ ತೋರಿಸುತ್ತೇವೆ. ವಿಧಾನಮಂಡಲದ ಮುಂದಿನ ಅಧಿವೇಶನದ ವೇಳೆಗೆ ಈ ಸರ್ಕಾರದ ಹಲವು ಹಗರಣಗಳನ್ನು ಬಯಲಿಗೆ ಎಳೆಯುವೆ' ಎಂದು ಕುಮಾರಸ್ವಾಮಿ ಹೇಳಿದರು.

ದಕ್ಷಿಣ ಕನ್ನಡದಲ್ಲಿ ಲಾಕ್‌ಡೌನ್ ಸಡಿಲಿಕೆ

ಬೆಂಗಳೂರು: ಕೋವಿಡ್ ಪ್ರಕರಣಗಳ ದೃಢಪ್ರಮಾಣ ದರ ಇಳಿಕೆಯಾಗಿರುವ ಕಾರಣ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಗಲಿನ ವೇಳೆ ಲಾಕ್‌ಡೌನ್ ಪೂರ್ಣ ಸಡಿಲಿಸಿ ಕಂದಾಯ ಇಲಾಖೆ ಗುರುವಾರ ಆದೇಶ ಹೊರಡಿಸಿದೆ.

'ದಕ್ಷಿಣ ಕನ್ನಡ ಜಿಲ್ಲೆಯನ್ನು ವರ್ಗ–1ರ ಜಿಲ್ಲೆಗಳ ಪಟ್ಟಿಗೆ ಸೇರಿಸಲಾಗಿದೆ. ಈ ಆದೇಶವು ಜುಲೈ 5ರ ಬೆಳಿಗ್ಗೆ 5 ಗಂಟೆಯವರೆಗೆ ಜಾರಿಯಲ್ಲಿರುತ್ತದೆ' ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಆದೇಶದಲ್ಲಿ ತಿಳಿಸಿದ್ದಾರೆ.

ಶುಕ್ರವಾರದಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳಿಗ್ಗೆ 6 ರಿಂದ ಸಂಜೆ 5ರವರೆಗೆ ಎಲ್ಲ ಬಗೆಯ ಅಂಗಡಿಗಳನ್ನೂ ತೆರೆಯಲು ಅವಕಾಶ ದೊರೆಯಲಿದೆ. ಹೋಟೆಲ್‌ಗಳಲ್ಲಿ ಕುಳಿತು ಆಹಾರ ಸೇವಿಸಲು, ಲಾಡ್ಜ್ ಮತ್ತು ರೆಸಾರ್ಟ್‌ಗಳಲ್ಲಿ ಗ್ರಾಹಕರು ತಂಗಲು ಅನುಮತಿ ದೊರಕಲಿದೆ.

ಕೇರಳದಿಂದ ಬರುವವರ ಮೇಲೆ ನಿಗಾ: ಕೇರಳದಲ್ಲಿ ರೂಪಾಂತರಿ ಕೊರೊನಾ ವೈರಾಣು ಸೋಂಕು ಪ್ರಕರಣಗಳು ಹೆಚ್ಚುತ್ತಿರುವ ಕಾರಣದಿಂದ ಅಲ್ಲಿಂದ ಕರ್ನಾಟಕಕ್ಕೆ ಬರುವವರ ಮೇಲೆ ವಿಶೇಷ ನಿಗಾ ಇರಿಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಗುರುವಾರ ಆದೇಶ ಹೊರಡಿಸಿದ್ದಾರೆ.

ಕೇರಳದಿಂದ ಬರುವವರು ಆರ್‌ಟಿ–ಪಿಸಿಆರ್ ವಿಧಾನದ ಪರೀಕ್ಷೆಯಲ್ಲಿ 72 ಗಂಟೆಗಳಿಗೂ ಮೊದಲು ಪಡೆದಿರುವ 'ನೆಗೆಟಿವ್' ವರದಿ ಹೊಂದಿರುವುದು ಕಡ್ಡಾಯ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

'ಗೊಂದಲಗಳಿಗೆ ಒಂದೆರಡು ದಿನಗಳಲ್ಲಿ ತೆರೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಗೋಕಾಕದ ಬಿಜೆಪಿ ಶಾಸಕ, ಹಿರಿಯ ಸಹೋದರ ರಮೇಶ ಜಾರಕಿಹೊಳಿ ವಿಷಯದಲ್ಲಿ ಉಂಟಾಗಿರುವ ಗೊಂದಲಗಳಿಗೆ ಶೀಘ್ರವೇ ತೆರೆ ಎಳೆಯಲಿದ್ದೇವೆ' ಎಂದು ಕೆಎಂಎಫ್ ಅಧ್ಯಕ್ಷರೂ ಆಗಿರುವ ಶಾಸಕ ಬಾಲಚಂದ್ರ ಜಾರಕಿಹೊಳಿ ತಿಳಿಸಿದರು.

ಗೋಕಾಕದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಗುರುವಾರ ಮಾತನಾಡಿದ ಅವರು, 'ನಾನು ಸಚಿವ ಸ್ಥಾನ ಬೇಡಿಕೆ ಇಟ್ಟಿಲ್ಲ. ಮಾಧ್ಯಮದಲ್ಲಿ ಆ ರೀತಿಯ ಸುದ್ದಿ ಏಕೆ ಬರುತ್ತಿದೆಯೋ ಗೊತ್ತಿಲ್ಲ. ಪಕ್ಷದಿಂದಲೂ ಅಂತಹ ಆಹ್ವಾನ ಬಂದಿಲ್ಲ. ಕೆಎಂಎಫ್ ಅಧ್ಯಕ್ಷನಾಗಿ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿದ್ದೇನೆ' ಎಂದು ಸ್ಪಷ್ಟಪಡಿಸಿದರು.

'ರಮೇಶ ಜಾರಕಿಹೊಳಿ ದೆಹಲಿಯಿಂದ ಬೆಂಗಳೂರಿಗೆ ಬಂದಿದ್ದಾರೆ. ಅವರು ಜುಲೈ 2ರಂದು ಗೋಕಾಕಕ್ಕೆ ಬರಲಿದ್ದಾರೆ. ನಾವೆಲ್ಲರೂ ಸಭೆ ನಡೆಸಿ ಚರ್ಚಿಸಿದ ಬಳಿಕ ಜಂಟಿ ಪತ್ರಿಕಾಗೋಷ್ಠಿ ನಡೆಸುತ್ತೇವೆ. ಕೆಲವು ವಿಷಯಗಳನ್ನು ಸ್ಪಷ್ಟಪಡಿಸಬೇಕಾಗಿದೆ' ಎಂದರು.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪೌಷ್ಟಿಕ ಆಹಾರ ಸೇವಿಸಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ.
ಪೋ.ನಂ 08472-278634/256944, Email:eerwssglb14@gmail.com
ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾಶಾ /2020-21/599 ದಿನಾಂಕ : 30-06-2021
ಅಲ್ಪಾವಧಿ ಟೆಂಡರ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ) (ದ್ವಿಲಕೋಟೆಯಲ್ಲಿ)
ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ : ಕಲಬುರಗಿ ತಾಲೂಕಿನ – 02 (Indent No 34025 & 34027). 2) ಟೆಂಡರಿಗಿಟ್ಟ ಮೊತ್ತ : ಕನಿಷ್ಠ 76,16,064/–, ಗರಿಷ್ಠ 86,84,406/–. 3) ಲೆಕ್ಕ ಶೀರ್ಷಿಕೆ : Jal Jeevan Mission 2020-21 4) ಗುತ್ತಿಗೆದಾರರ ಅರ್ಹತೆ : 3ನೇ ದರ್ಜೆ ಗುತ್ತಿಗೆದಾರರು & ಮೇಲ್ಪಟ್ಟು. 5) ಟೆಂಡರ ಫಾರಂ ಪಡೆಯುವ ದಿನಾಂಕ : 30-06-2021 ರಿಂದ 08-07-2021. 6) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ : ಇ-ಪ್ರೋಕ್ಯೂರ್‌ಮೆಂಟ್ ಪ್ರಕಾರ. 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ : 08-7-2021 ಸಾಯಂಕಾಲ 4:00 ಗಂಟೆವರೆಗೆ. 8) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : 09-07-2021 ಸಾಯಂಕಾಲ 4.00 ಗಂಟೆಗೆವರೆಗೆ. 9) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ : 12-07-2021 ಬೆ. 11.00 ಗಂಟೆಯ ನಂತರ. 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ ಕುಸನೂರ ರೋಡ, ಕಲಬುರಗಿ 11) ಅಂತರಜಾಲ ತಾಣದ ವಿಳಾಸ : www.eproc.karnataka.gov.in
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ವಾ.ಸಾ.ಸಂ.ಇ/ಕಲಬುರಗಿ/383/ಎಂ.ಸಿ.&ಎ/2021-22 ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ, ಬಳ್ಳಾರಿ.
ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್-4/1201/2021-22 ದಿನಾಂಕ: 30-06-2021
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತೇದಾರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಕ್ರಮ ಸಂಖ್ಯೆ (1) ರಿಂದ (2)ರಲ್ಲಿನ ಕಾಮಗಾರಿಗಳಿಗೆ ದ್ವಿ ಲಕೋಟೆ ಟೆಂಡರಿಂಗ್ ಪದ್ಧತಿ ಹಾಗೂ ಉಳಿದ ಕಾಮಗಾರಿಗೆ ಏಕ ಲಕೋಟೆ ಟೆಂಡರಿಂಗ್ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತೇದಾರರು ಈ ಕೆಳಕಾಣಿಸಿದ ಕಾಮಗಾರಿಗಳಲ್ಲಿ ಯಾವುದಾದರೂ ಎಲ್ಲಾ ಕಾಮಗಾರಿಗಳಿಗೆ ಟೆಂಡರುಗಳನ್ನು ಸಲ್ಲಿಸಬಹುದಾಗಿರುತ್ತದೆ. ಇದಕ್ಕಾಗಿ, ಗುತ್ತೇದಾರರು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ http://eproc. karnataka.gov.inವನ್ನು ಸಂದರ್ಶಿಸಬಹುದಾಗಿರುತ್ತದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತೇದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಗುತ್ತೇದಾರರು –ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಕ್ರ ಸಂ	ಕಾಮಗಾರಿಯ ವಿವರ	ವರ್ಗ	ಟೆಂಡರ್‌ಗೆ ಸೂಚಿಸಿದ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
	5054–ಪರಿಶಿಷ್ಟ ಜಾತಿ ಉಪಯೋಜನೆ (ಜಿಲ್ಲಾ ಮತ್ತು ಇತರೆ ರಸ್ತೆಗಳು)		
1)	KPWD/2021-22/RD/WORK_INDENT137339	ಅನ್ವಯಿಸುವುದಿಲ್ಲ	89.24
	5054–ಗಿರಿಜನ ಉಪಯೋಜನೆ (ಜಿಲ್ಲಾ ಮತ್ತು ಇತರೆ ರಸ್ತೆಗಳು)		
2)	KPWD/2021-22/RD/WORK_INDENT137341	ಅನ್ವಯಿಸುವುದಿಲ್ಲ	89.24
	8843–ಠೇವಣಿ ಕಾಮಗಾರಿಗಳು (ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ)		
3)	KPWD/2021-22/BD/WORK_INDENT137310	ಸಾಮಾನ್ಯ	26.21

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ:
ಅ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: 05-07-2021 ರಂದು 12.00 ಗಂಟೆಯ ವರೆಗೆ. ಆ) ಇ-ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 09-07-2021 ರಂದು 16.00 ಗಂಟೆಯ ವರೆಗೆ. ಇ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 12-07-2021ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್,
ಡಿಐಪಿಆರ್/ಬಳ್ಳಾರಿ/159/ಎಂಸಿಎ/2021-22 ಲೋಕೋಪಯೋಗಿ ಇಲಾಖೆ, ಬಳ್ಳಾರಿ ವಿಭಾಗ, ಬಳ್ಳಾರಿ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001.
website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–11/3034/2021–22 ದಿನಾಂಕ: 30.06.2021
ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆ.ಪಿ.ಡಬ್ಲ್ಯೂ.ಡಿ ದರ್ಜೆ–1 (ಸಿವಿಲ್) ಗುತ್ತಿಗೆದಾರರಿಂದ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್ ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು: ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ದಾಬಸ್‌ಪೇಟೆ 4ನೇ ಹಂತ (ಅವ್ವೇರಹಳ್ಳಿ) ಕೈಗಾರಿಕಾ ಪ್ರದೇಶದಲ್ಲಿ ಆರ್.ಸಿ.ಸಿ ರಸ್ತೆ ಬದಿ ಚರಂಡಿ, ಆರ್.ಸಿ.ಸಿ ಮಳೆ ನೀರು ಚರಂಡಿ, ಸ್ಲಬ್ ಕಲ್ವರ್ಟ್ಸ್, ಬಾಕ್ಸ್ ಕಲ್ವರ್ಟ್ಸ್ ಹಾಗೂ 24 ಮೀ ಅಗಲ (ರಸ್ತೆ ಸಂಖ್ಯೆ: 34), 18ಮೀ ಅಗಲ (ರಸ್ತೆ ಸಂಖ್ಯೆ 2ಎ, 2ಬಿ,3,4ಸಿ,4ಡಿ, 13, 14ಎ,27,31, 33, 37, 38), 15ಮೀ ಅಗಲ (ರಸ್ತೆ ಸಂಖ್ಯೆ37), 12ಮೀ ಅಗಲ (ರಸ್ತೆ ಸಂಖ್ಯೆ: 36) ಹಾಗೂ 7ಮೀ ಅಗಲ (ರಸ್ತೆ ಸಂಖ್ಯೆ: 35 & 39) ಡಾಂಬರಿಕರಣದ ರಸ್ತೆಗಳನ್ನು ನಿರ್ಮಾಣ ಮಾಡುವ ಕಾಮಗಾರಿ.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 30.07.2021, ಸಂಜೆ 4.00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
DIPR/DDU/Zen/R.O:706/2021-22 ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

नवोदय विद्यालय समिति (हैदराबाद संभाग)
आंध्र प्रदेश, तेलंगाना, कर्नाटक, केरल, केंद्रशासित प्रदेश पुडुचेरी, लक्षद्वीप और अंडमान और निकोबार द्वीप समूह राज्यों के जवाहर नवोदय विद्यालयों में पोस्ट ग्रेजुएट शिक्षकों (पीजीटी), ट्रेंड ग्रेजुएट शिक्षकों (टीजीटी), रचनात्मक शिक्षकों और संकाय सह प्रणाली प्रशासक के लिए अनुबंध के आधार पर पूरी तरह से अस्थायी और अस्थायी रिक्तियों के लिए ऑनलाइन आवेदन आमंत्रित किये जाते है
अधिक जानकारी के लिए नवोदय विद्यालय समिति क्षेत्रीय कार्यालय हैदराबाद की वेबसाइट
https://navodaya.gov.in/nvs/ro/Hyderabad/en/home/
उपायुक्त
NAVODAYA VIDYALAYA SAMITI (HYDERABAD REGION)
Online applications are invited for engagement of Post Graduate Teachers (PGTs), Trained Graduate Teachers (TGTs), Creative Teachers & Faculty-cum-System Administrators on contract basis, against purely temporary & tentative vacancies, at the Jawahar Navodaya Vidyalayas of the States of Andhra Pradesh, Telangana, Karnataka, Kerala, Union Territories of Puducherry, Lakshadweep and Andaman & Nicobar Islands.
For further details visit Navodaya Vidyalaya Samiti, Regional Office, Hyderabad Website
https://navodaya.gov.in/nvs/ro/Hyderabad/en/home/
Deputy Commissioner

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಕುಲಸಚಿವರ ಕಾರ್ಯಾಲಯ, ಕೃಷಿನಗರ, ಧಾರವಾಡ–580 005
ಸಂಖ್ಯೆ:ಕುಸ:ನೇವಿ:ಜಾಹಿ–59:2021 ದಿನಾಂಕ: 30.06.2021
ಸಂಕ್ಷಿಪ್ತ ಅಧಿಸೂಚನೆ
ವಿಷಯ: ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಅಧಿಕಾರಿ ವೃಂದದ ವಿವಿಧ ಹುದ್ದೆಗಳಿಗೆ ಅರ್ಜಿಗಳನ್ನು ಸಲ್ಲಿಸಲು ಅಂತಿಮ ದಿನಾಂಕವನ್ನು ವಿಸ್ತರಿಸಿದ ಕುರಿತು.
ಉಲ್ಲೇಖ:1) ಅಧಿಸೂಚನೆ ಸಂಖ್ಯೆ: No.R/Rectt/Advt.59/2021 ದಿನಾಂಕ 25.05.2021
2) ತಿದ್ದುಪಡಿ ಅಧಿಸೂಚನೆ ಸಂಖ್ಯೆ:No.R/Rectt/Advt.59/2021 ದಿನಾಂಕ 03.06.2021
3) ಅಧಿಸೂಚನೆ ಸಂಖ್ಯೆ: No.R/Rectt/Advt.59/2021 ದಿನಾಂಕ 30.06.2021
ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ನೇರ ನೇಮಕಾತಿಗಾಗಿ ಉಲ್ಲೇಖ(1)&(2)ರ ಅಧಿಸೂಚನೆಗಳ ಮೂಲಕ ಜಾಹೀರುಪಡಿಸಲಾಗಿರುವ ಅಧಿಕಾರಿ ವೃಂದದ ವಿವಿಧ (ನಿಶ್ಚಿತಾವಧಿಯ) ಹುದ್ದೆಗಳಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಅಂತಿಮ ದಿನಾಂಕವನ್ನು 12.07.2021 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ವಿವಿಯ ಅಧಿಕೃತ ಜಾಲತಾಣವನ್ನು (www.uasd.edu) ವೀಕ್ಷಿಸಬಹುದು.
ಆದೇಶದ ಮೇರೆಗೆ, ಸಹಿ/– ಕುಲಸಚಿವರು

ಮುಖ್ಯ ಇಂಜನೀಯರು, ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ಬಾಗಲಕೋಟ.
ನಂ:ಮು.ಇಂ/ಬಾ.ಪ.ಅ.ಪ್ರಾ/ಟೆಂಡರ್–04/2021–22/792 ದಿನಾಂಕ:29/06/2021
ಅಲ್ಪಾವಧಿ ಟೆಂಡರ್ ಪ್ರಕಟಣೆ.
(ಇ–ಪ್ರೋಕ್ಯೂರಮೆಂಟ್ ಮುಖಾಂತರ)
ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿನ ಕಾಮಗಾರಿಗೆ ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರನ್ನು ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತವು ರೂ. 11.93 ಲಕ್ಷಗಳು ದಿಂದ 44.61 ಲಕ್ಷಗಳು ಇರುತ್ತದೆ.
ಸದರಿ ಕಾಮಗಾರಿಯ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ವಿವರ ಹಾಗೂ ಕಾಮಗಾರಿಯ ವಿವರಗಳಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ: 14.07.2021 ಸಂಜೆ 5.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ಆರ್ಥಿಕ ಬಿಡ್‌ನ್ನು ದಿನಾಂಕ: 16.07.2021 ರಂದು ಬೆಳಿಗ್ಗೆ 11.00 ಘಂಟೆ (ಸಾಧ್ಯವಾದಲ್ಲಿ) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ: 08354–233353 ಸಂಪರ್ಕಿಸಬಹುದಾಗಿದೆ.
ಸಹಿ/–ಮುಖ್ಯ ಇಂಜನೀಯರು,
ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ಬಾಗಲಕೋಟ.
DIPR/BGK/RO-NO-137/MCA/2021-22

ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ
ಶ್ರೀ ಡಿ.ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ಪಿ.ಬಿ.ರಸ್ತೆ, ದಾವಣಗೆರೆ–06
ನಂ:ದಾಹನಪ್ರಾ:ತಾಶಾ:ಸಇಂ–2:ಇಪ್ರ:ಟೆಂಪ್ರ:02:2021–22/451 ದಿನಾಂಕ:30.06.2021
ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮೂಲಕ)
ಕರ್ನಾಟಕ ರಾಜ್ಯಪಾಲರ ಪರವಾಗಿ ಆಯುಕ್ತರು, ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ವ್ಯಾಪ್ತಿಯಲ್ಲಿ ಬರುವ ಕೆಳಕಂಡ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಿಂದ ನೋಂದಾಯಿತ ಅರ್ಹ ಹಾಗೂ ಇ–ಟೆಂಡರ್ ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಿಲ್ಪಟ್ಟ ಗುತ್ತಿಗೆದಾರರಿಂದ ಪ್ರಾಧಿಕಾರದ ನಿಯಮಾವಳಿ ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
(1) ಕಾಮಗಾರಿಯ ಹೆಸರು:– ದಾವಣಗೆರೆ ನಗರದ ಶ್ರೀ ಜೆ.ಹೆಚ್. ಪಟೇಲ್ ಬಡಾವಣೆಯ ಡಬಲ್ ರಸ್ತೆಯ ಮಧ್ಯದ ನಾಲ್ಕು ರಸ್ತೆ ಕೂಡುವಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ (2ನೇ ಕರೆ). (2) ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ:–78.00 (3) ಟೆಂಡರ್‌ಗೆ ಇಟ್ಟಿರುವ ಮೊತ್ತ (ರೂ.ಲಕ್ಷಗಳಲ್ಲಿ):– 68.19 (4) ಮುಂಗಡ ಹಣ ಠೇವಣಿ (ಇಎಂಡಿ) ರೂ.ಗಳಲ್ಲಿ:– 0.00
ಟೆಂಡರ್ ದಿನಾಂಕಗಳು :(1) ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟರ್ https://eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : 12.07.2021ರ ಸಂಜೆ 4.00 ಗಂಟೆವರೆಗೆ. (3) ಟೆಂಡರ್ ದಾಖಲೆ ತೆರೆಯುವ ದಿನಾಂಕ: 14.07.2021 ರ ಬೆಳಿಗ್ಗೆ 11.00 ಗಂಟೆಗೆ
ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ವಾಸಾಇ/ದಾವಣಗೆರೆ/196/ಎಂಸಿಎ/2021–22 ಸಹಿ/– ಆಯುಕ್ತರು,
ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ,
6ನೇ ಮಹಡಿ, ಪೂರ್ವ ವಿಭಾಗ, ಆರೋಗ್ಯ ಸೌಧ, 1ನೇ ಕ್ರಾಸ್, ಮಾಗಡಿ ರಸ್ತೆ, ಬೆಂಗಳೂರು–560023.
Ph-080-23295634, e-mail: fwoffice2018@gmail.com
ನಂ. ಉ.ನಿ/ಎಫ್.ಡಬ್ಲ್ಯೂ/18/2021–22 ದಿನಾಂಕ: 01.07.2021
ಅಲ್ಪಾವಧಿ ಟೆಂಡರ್
Supply of jute sling hand bags with printing and an IEC leaflet folder inside the bag.
[illegible]
ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್) / ಉಪನಿರ್ದೇಶಕರು (ಕುಟುಂಬ ಕಲ್ಯಾಣ) ವಿಭಾಗರವರ ಕಛೇರಿ ಸಮಯ 10.00 ರಿಂದ 17.30 ಗಂಟೆಯೊಳಗೆ ಪಡೆಯ ಬಹುದಾಗಿರುತ್ತದೆ.
ಸಹಿ/–
DIPR/DDU/Zen/RO-716/2021-22 ಯೋಜನಾ ನಿರ್ದೇಶಕರು ಆರ್.ಸಿ.ಹೆಚ್
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)
ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.5, ಚಿತ್ರದುರ್ಗ.
ಫೋ. ನಂ.:08194–230102, ಫ್ಯಾಕ್ಸ್:08194–230102, ಇ–ಮೇಲ್ :eeubp.d5cta@gmail.com
ಕ್ರ.ಸಂ:EE/VJNL/UBP-Dv-5/CTA/JBC/Drip/P-2/Corrigendum-2/2021-22/281 Date:25.06.2021
ಸಂಕ್ಷಿಪ್ತ ಟೆಂಡರ್ 2ನೇ ತಿದ್ದುಪಡಿ ಪ್ರಕಟಣೆ
(Corrigendum No-2)
ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂ:EE/VJNL/UBP-Dv-5/CTA/JBC/Drip/P-2/2021-22/181 Date:08.06.2021ರಲ್ಲಿ ಜಗಳೂರು ಶಾಖಾ ಕಾಲುವೆ (ಚಿತ್ರದುರ್ಗ ಬ್ಲಾಕ್) ಪ್ಯಾಕೇಜ್–2, ಇಂಡೆಂಟ್ ಸಂಖ್ಯೆ: VJNL/2021-22/IW/WORK_INDENT1694 ಟೆಂಡರ್‌ಗಿಟ್ಟ ಮೊತ್ತ ರೂ.322.31 ಕೋಟಿಗಳಿಗೆ ಕಾಮಗಾರಿ ಟೆಂಡರ್‌ನ್ನು ಅಹ್ವಾನಿಸಲಾಗಿರುತ್ತದೆ. ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರ್ ಪ್ರಕಟಣೆಯಲ್ಲಿನ ಟೆಂಡರ್ ಪ್ರಕ್ರಿಯೆಯ ದಿನಾಂಕಗಳನ್ನು ಮಾರ್ಪಾಡಿಸಲಾಗಿದೆ. ಟೆಂಡರ್ ಪ್ರಕ್ರಿಯೆಯ ಮಾರ್ಪಾಡಿಸಿದ ನಿಗದಿತ ದಿನಾಂಕಗಳು ಈ ಕೆಳಗಿನಂತಿವೆ. 1) ಟೆಂಡರ್‌ನ್ನು ದಿನಾಂಕ: 02.07.2021 ರಂದು ಸಂಜೆ 4.00 ಗಂಟೆ ವರೆಗೆ ಸಲ್ಲಿಸಬಹುದಾಗಿದೆ 2) ತಾಂತ್ರಿಕ ಬಿಡ್ದುಗಳನ್ನು ದಿನಾಂಕ:03.07.2021 ರಂದು ಸಂಜೆ 04.30 ಗಂಟೆ ನಂತರ ತೆರೆಯಲಾಗುವುದು. 3) ಆರ್ಥಿಕ ಬಿಡ್ಡನ್ನು "ತಾಂತ್ರಿಕ ಬಿಡ್ ಅನುಮೊದನೆಯಾದ ನಂತರ" ತೆರೆಯಲಾಗುವುದು. ಈಗಾಗಲೇ ಹೊರಡಿಸಿರುವ ಮತ್ತು ಮುಂದಿನ ತಿದ್ದುಪಡಿಗಳನ್ನು ಸಹಾ ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ನೋಡಿಕೊಳ್ಳಲು ಸೂಚಿಸಲಾಗಿದೆ. ಉಳಿದ ಉಪ ವಿಧಿಗಳಲ್ಲಿ / ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು www.eproc.karnataka.gov.in ವೆಬ್‌ಸೈನಿಂದ ಪಡೆಯಲು ತಿಳಿಸಲಾಗಿದೆ.
DIPR/CTA/MCA/226/2021-22 ಸಹಿ/– ಕಾರ್ಯಪಾಲಕ ಇಂಜಿನಿಯರ್,
ವಿಜನಿನಿ, ಭಮೇಯೋ, ವಿಭಾಗ ನಂ.5, ಚಿತ್ರದುರ್ಗ.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ
ನಂ 10, 3ನೇ ಮಹಡಿ, ಖಾಧಿ ಭವನ, ಜಸ್ಮಾದೇವಿ ಭವನ ರಸ್ತೆ, ವಸಂತನಗರ, ಬೆಂಗಳೂರು–560052, ದೂ : 080–22250017 / 22250018, e-mail:mdkmvstdc@gmail.com
ಸಂಖ್ಯೆ: ಕಮವಾಪಪಂಅನಿ/ಟೆಂಡರ್/ಪಂಪು/2020–21/160 ದಿನಾಂಕ:01.07.2021
ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಗಂಗಾ ಕಲ್ಯಾಣ ಯೋಜನೆಯಡಿ 22 ಪ್ಯಾಕೇಜ್‌ಗಳಲ್ಲಿ ಪಂಪ್‌ಸೆಟ್ ಸರಬರಾಜು, ಅಳವಡಿಕೆ ಮತ್ತು ವಿದ್ಯುದೀಕರಣಗೊಳಿಸಲು ಆಸಕ್ತ ಗುತ್ತಿಗೆದಾರರಿಂದ ಇ–ಟೆಂಡರ್ ಪೋರ್ಟಲ್ ಮುಖಾಂತರ ದ್ವಿ–ಲಕೋಟೆ ಪದ್ಧತಿಯಲ್ಲಿ, ದಿನಾಂಕ: 21.06.2021 ರಂದು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿತ್ತು. ಸದರಿ ಟೆಂಡರ್‌ನಲ್ಲಿ ಕೆಲವೊಂದು ತಾಂತ್ರಿಕ ಕಾರಣಗಳಿಂದಾಗಿ ರೀ–ಕಾಲ್ ಮಾಡಲಾಗಿದ್ದು, ದಿನಾಂಕ: 30.06.2021ರಂದು ಮರು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್‌ನಲ್ಲಿ ಭಾಗವಹಿಸಲು ಬೇಕಾದ ಅರ್ಹತೆ, ಸಲ್ಲಿಸುವ ವಿಧಾನ, ನಿಬಂಧನೆಗಳು, ಆಯಾ ಪ್ಯಾಕೇಜ್‌ವಾರು ಜಿಲ್ಲೆಯಲ್ಲಿ ಸರಬರಾಜು ಮಾಡಬೇಕಾದ ಪಂಪ್‌ಸೆಟ್‌ಗಳ ಸಂಖ್ಯೆ ಹೆಚ್ಚಿನ ಮಾಹಿತಿಗಾಗಿ ಇ–ಪೋರ್ಟಲ್ ಅಂತರ್ಜಾಲ ತಾಣ https://eproc.karnataka.gov.in ದಲ್ಲಿ ಪಡೆಯಬಹುದಾಗಿದೆ ಅಥವಾ ಇ–ಸಂಗ್ರಹಣೆ ಸಹಾಯವಾಣಿ 080–23010900 / 01 ಮತ್ತು 080–38013000 ಗೆ ಸಂಪರ್ಕಿಸಬಹುದಾಗಿದೆ. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 12.07.2021ರಂದು ಸಂಜೆ 5:00 ಗಂಟೆಯಾಗಿರುತ್ತದೆ.
ಸಹಿ/–
ಸಹಾಯಕ ಪ್ರಧಾನ ವ್ಯವಸ್ಥಾಪಕರು ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ವಾಸಾಸಂಇ/ಬೆಂನ/710/2021–22 ಕ.ಮ.ವಾ.ಪ.ಪಂ.ಅನಿ, ಬೆಂಗಳೂರು

ನೋಡಿ ಇವರೇ ಹಳ್ಳಿಮೇಷ್ಟ್ರ 'ಸೂಜಿ'!

ಗುರು ಶಿಷ್ಯರು
ನಿಶ್ವಿಕಾ ನಾಯ್ಡು

ಸಂದರ್ಶನ

ಅಭಿಲಾಷ್ ಪಿ.ಎಸ್.

ನಟ ಶರಣ್ ನಾಯಕರಾಗಿ ನಟಿಸುತ್ತಿರುವ 'ಗುರು ಶಿಷ್ಯರು' ಚಿತ್ರದಲ್ಲಿ ಅಪ್ಪಟ ಹಳ್ಳಿ ಹುಡುಗಿಯಾಗಿ, ರವಿಚಂದ್ರನ್ ಅಭಿಮಾನಿಯಾಗಿ 'ಸೂಜಿ' ಹೆಸರಿನ ಪಾತ್ರಕ್ಕೆ ಬಣ್ಣ ಹಚ್ಚಿರುವ ನಟ ನಿಶ್ವಿಕಾ ನಾಯ್ಡು, ಚಿತ್ರಕ್ಕಾಗಿ ಸೈಕಲ್ ಸವಾರಿಯನ್ನು ಕಷ್ಟಪಟ್ಟು ಕಲಿತಿದ್ದಾರೆ. ಇನ್ನು ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯದ 'ಸಖತ್' ಚಿತ್ರದ ಚಿತ್ರೀಕರಣದಲ್ಲೂ ತಲ್ಲೀನರಾಗಿರುವ ನಿಶ್ವಿಕಾ, ತಮ್ಮ ಸಿನಿ ಪಯಣವನ್ನು 'ಸಿನಿಮಾ ಪುರವಣಿ' ಜೊತೆ ಹಂಚಿಕೊಂಡಿದ್ದಾರೆ.

• ಲಾಕ್‌ಡೌನ್‌ಗೂ ನಿಶ್ವಿಕಾ ಅವರಿಗೂ ಭಾರಿ ನಂಟಿದೆ ಅಲ್ಲವೇ?

2020ರಲ್ಲಿ ಮೊದಲ ಲಾಕ್‌ಡೌನ್‌ಗಿಂತ ಸ್ವಲ್ಪ ಮುಂಚೆ ನಾನು ನಟಿಸಿದ್ದ 'ಜಂಟಲ್‌ಮನ್' ಬಿಡುಗಡೆಯಾಗಿತ್ತು. ಲಾಕ್‌ಡೌನ್ ಸಡಿಲಗೊಂಡು ಚಿತ್ರಮಂದಿರಗಳು ತೆರೆದಾಗ 'ರಾಮಾರ್ಜುನ' ತೆರೆಕಂಡಿತು. ಮೊದಲಿಗೆ ಕೋವಿಡ್ ಏನು ಎಂಬುವುದನ್ನೇ ತಿಳಿದುಕೊಳ್ಳಲು ಸಮಯ ಹಿಡಿಯಿತು. ಎಲ್ಲರಿಗೂ ಸಂಕಷ್ಟದ ಸಮಯ ಅದಾಗಿತ್ತು. ಚಿತ್ರರಂಗಕ್ಕೆ ಕೋವಿಡ್‌ನಿಂದ ಬಹಳಷ್ಟು ಹೊಡೆತಬಿದ್ದಿದೆ. ಮೊದಲಿಗೆ ಚಿತ್ರಮಂದಿರಗಳನ್ನು ಮುಚ್ಚಲು ಆದೇಶಿಸಿದಾಗ, ಮತ್ತೆ ಇವುಗಳು ತೆರೆಯುತ್ತವೋ ಇಲ್ಲವೋ, ನಮ್ಮ ಸಿನಿಮಾಗಳು ಚಿತ್ರಮಂದಿರಕ್ಕೆ ಬರುತ್ತವೆಯೇ ಎನ್ನುವ ಪ್ರಶ್ನೆ ಉದ್ಭವಿಸಿತ್ತು. ಮೊದಲ ಲಾಕ್‌ಡೌನ್ ನಿರ್ಬಂಧ ಸಡಿಲಿಸಿದಾಗ ಪ್ರೇಕ್ಷಕರ ಸಂಖ್ಯೆ ಎಷ್ಟೇ ನಿರ್ಬಂಧವಾಗಲಿ ನಾವು ಚಿತ್ರಮಂದಿರದಲ್ಲೇ 'ರಾಮಾರ್ಜುನ' ಚಿತ್ರ ಬಿಡುಗಡೆ ಮಾಡೋಣ ಎಂದು ಚಿತ್ರತಂಡ ನಿರ್ಧರಿಸಿತ್ತು. ಶೇ 50ರಷ್ಟು ಪ್ರೇಕ್ಷಕರಿಗೆ ಮಾತ್ರ ಅವಕಾಶವಿದ್ದರೂ ಚಿತ್ರದ ಮೊದಲ ಕೆಲವು ದಿನ ಪ್ರೇಕ್ಷಕರ ಸಂಖ್ಯೆಯನ್ನು ನೋಡಿದ ಮೇಲೆ ನನಗೆ ಸಮಾಧಾನವಾಯಿತು. ಒಳ್ಳೆಯ ಸಿನಿಮಾಗಳನ್ನು ಜನ ಕೈಬಿಡುವುದಿಲ್ಲ ಎಂದೆನಿಸಿತು.

'ರಾಮಾರ್ಜುನ' ಚಿತ್ರಮಂದಿರದಲ್ಲೇ ತೆರೆಕಾಣಬೇಕಿದ್ದ ಸಿನಿಮಾ ಆಗಿದ್ದ ಕಾರಣ, ಒಟಿಟಿ ಬದಲು ಚಿತ್ರಮಂದಿರದಲ್ಲೇ ಬಿಡುಗಡೆ ಮಾಡಿದ್ದೆವು. ಪಕ್ಕಾ ಕಮರ್ಷಿಯಲ್ ಚಿತ್ರಗಳನ್ನು ಚಿತ್ರಮಂದಿರಕ್ಕೆಂದೇ ಮಾಡುತ್ತಾರೆ. ಜನ ಚಿತ್ರಮಂದಿರಕ್ಕೇ ಬಂದು ಚಿತ್ರವನ್ನು ಅನುಭವಿಸಬೇಕು. ಅದರ ಸೌಂಡ್, ಎಫೆಕ್ಟ್‌ಗಳನ್ನು ಆನಂದಿಸಬೇಕು ಎನ್ನುವುದು ಚಿತ್ರ ನಿರ್ಮಿಸಿದವರ ಮನಸ್ಸಲ್ಲಿ ಇರುತ್ತದೆ. ರಾಮಾರ್ಜುನ ಕೂಡಾ ಇಂತಹ ಸಿನಿಮಾ ಆಗಿತ್ತು. ಅನಿವಾರ್ಯವಾದರಷ್ಟೇ ಒಟಿಟಿಗೆ ಹೋಗುವ ನಿರ್ಧಾರವಾಗಿತ್ತು. ಇದು ಒಳ್ಳೆಯ ನಿರ್ಧಾರವಾಗಿತ್ತು.

• ಅವಕಾಶಗಳು ಕೈಚಾಚಿ ಕರೆಯುವಾಗ ಲಾಕ್‌ಡೌನ್ ತಡೆಯೊಡ್ಡಿತೇ?

ಖಂಡಿತವಾಗಿಯೂ. ಮೊದಲ ಲಾಕ್‌ಡೌನ್ ನನಗೆ ಬಹಳ ಸಂಕಷ್ಟ ತಂದಿತ್ತು. ನಾನು ಯಾವಾಗಲೂ ಒಂದರ ಮೇಲೊಂದು ಸಿನಿಮಾ ಸಹಿ ಮಾಡಿ ಮಾಡಿದವಳಲ್ಲ. ಒಂದು ಚಿತ್ರ ಪೂರ್ಣವಾದ ಬಳಿಕವಷ್ಟೇ ಮತ್ತೊಂದು ಪ್ರಾಜೆಕ್ಟ್ ಒಪ್ಪಿಕೊಳ್ಳುತ್ತಿದ್ದೆ. ಒಂದು ವೇಳೆ ಎರಡು ಸಿನಿಮಾ ಒಪ್ಪಿಕೊಂಡರೂ ಒಂದರ ಚಿತ್ರೀಕರಣ ಪೂರ್ಣವಾದ ಮೇಲಷ್ಟೇ ಇನ್ನೊಂದು ಸಿನಿಮಾ ಚಿತ್ರೀಕರಣದಲ್ಲಿ ಭಾಗವಹಿಸುತ್ತಿದ್ದೆ. ಇಂತಹ ಸಂದರ್ಭದಲ್ಲಿ ಜಂಟಲ್‌ಮನ್, ರಾಮಾರ್ಜುನ ಮುಗಿಸಿ ಮುಂದೆ ನೋಡೋಣ ಎನ್ನುವಾಗ ಮೊದಲ ಲಾಕ್‌ಡೌನ್ ಆಯಿತು. ಈ ಸಂದರ್ಭದಲ್ಲಿ ನಾನು ಗೊಂದಲಕ್ಕೆ ಒಳಗಾಗಿದ್ದೆ. ಆದರೆ, ಇಡೀ ಚಿತ್ರರಂಗವೇ ಮನೆಯಲ್ಲೇ ಇದ್ದ ಕಾರಣ ಸ್ವಲ್ಪ ಸಮಾಧಾನದಲ್ಲಿದೆ.

ಆದರೆ ಇತ್ತೀಚೆಗೆ ಮತ್ತೆ ಲಾಕ್‌ಡೌನ್ ಘೋಷಿಸಿದಾಗ ನಾನು ಎರಡು ದೊಡ್ಡ ಸಿನಿಮಾಗಳನ್ನು ಒಪ್ಪಿಕೊಂಡಿದ್ದೆ. 'ಗುರು ಶಿಷ್ಯರು' ಚಿತ್ರದ ಚಿತ್ರೀಕರಣ ಆರಂಭವಾಗಿತ್ತು. ಹೀಗಾಗಿ ಈ ಬಾರಿ ಯಾವುದೇ ಒತ್ತಡ ನನ್ನ ಮೇಲೆ ಇರಲಿಲ್ಲ. ಕೆಲವು ಸಿನಿಮಾಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಲಾಕ್‌ಡೌನ್ ನನಗೆ ತಾಳ್ಮೆಯನ್ನು ಕಲಿಸಿದೆ.

• ನಿಶ್ವಿಕಾ ಅವರು ಯೋಗಕ್ಕೆ ಹೆಚ್ಚಿನ ಆದ್ಯತೆ ನೀಡಿದ ಹಾಗಿದೆ ಅಲ್ಲವೇ?

ಹೌದು, ಜಿಮ್‌ಗಳೆಲ್ಲವೂ ಬಂದ್ ಆಗಿದ್ದ ಕಾರಣ ಯೋಗ ಕಲಿತೆ. ಶರಣ್ ಅವರು ನಾಯಕರಾಗಿ ನಟಿಸುತ್ತಿರುವ 'ಗುರು ಶಿಷ್ಯರು' ಚಿತ್ರದಲ್ಲಿ 'ಸೂಜಿ' ಎನ್ನುವ ಪಾತ್ರ ಮಾಡುತ್ತಿದ್ದೇನೆ. 20 ವರ್ಷದ ಹಳ್ಳಿ ಹುಡುಗಿಯ ಪಾತ್ರ ಮಾಡುತ್ತಿದ್ದೇನೆ. ಇದಕ್ಕಾಗಿ ತೂಕ ಇಳಿಸಿಕೊಳ್ಳಬೇಕಾಗಿತ್ತು. ಈ ಸಂದರ್ಭದಲ್ಲಿ ಯೋಗ ಮಾಡಲು ಪ್ರಾರಂಭಿಸಿದೆ. ಲಾಕ್‌ಡೌನ್ ಅವಧಿಯಲ್ಲಿ ಆನ್‌ಲೈನ್ ಯೋಗ ತರಗತಿಗಳನ್ನು ಆರಂಭಿಸಿದೆ. ಪ್ರಾಯೋಗಿಕವಾಗಿ ಪ್ರಾರಂಭಿಸಿದ ಈ ಯೋಗ ಹವ್ಯಾಸ ಇದೀಗ ಜೀವನದ ಭಾಗವಾಗಿದೆ.

• ಸದ್ಯಕ್ಕೆ ನಿಶ್ವಿಕಾ ಅವರು ಯಾವ ಚಿತ್ರದ ಚಿತ್ರೀಕರಣದಲ್ಲಿ ಬ್ಯುಸಿಯಾಗಿದ್ದಾರೆ?

ಹೊರಾಂಗಣ ಚಿತ್ರೀಕರಣಕ್ಕೆ ಅನುಮತಿ ನೀಡಿರುವುದರಿಂದ, ಗಣೇಶ್ ಅವರ ಅಭಿನಯದ 'ಸಖತ್' ಚಿತ್ರದ ಚಿತ್ರೀಕರಣ ಬುಧವಾರದಿಂದ ಆರಂಭವಾಗಿದೆ. 'ಗುರು ಶಿಷ್ಯರು' ಚಿತ್ರದ ಚಿತ್ರೀಕರಣವೂ ಆರಂಭವಾಗಿದೆ. ಲಾಕ್‌ಡೌನ್‌ನಲ್ಲಿ ಹಲವು ದಿನಗಳನ್ನು ಕಳೆದುಕೊಂಡ ಕಾರಣ, ಇದೇ ಮೊದಲ ಬಾರಿಗೆ ಎರಡೂ ಚಿತ್ರದ ಚಿತ್ರೀಕರಣದಲ್ಲಿ ಭಾಗಿಯಾಗುತ್ತಿದ್ದೇನೆ.

• 'ಗುರು ಶಿಷ್ಯರು' ಹಾಗೂ 'ಸಖತ್'ನಲ್ಲಿ ನಿಮ್ಮ ಪಾತ್ರದ ಬಗ್ಗೆ?

ನನ್ನ ಜನ್ಮದಿನಕ್ಕೆ ಶರಣ್, ಜಡೇಶ್ ಹಾಗೂ ತರುಣ್ ಸುಧೀರ್ ಅವರು ಸ್ಕಿಟ್ ಮೂಲಕ ನನ್ನನ್ನು 'ಗುರು ಶಿಷ್ಯರು' ಚಿತ್ರದ ನಾಯಕಿ ಎಂದು ಪರಿಚಯಿಸಿದ ಅನುಭವ ವಿಭಿನ್ನವಾಗಿತ್ತು. ನಾಯಕಿಯ ಜನ್ಮದಿನಕ್ಕೆ ಈ ರೀತಿಯ ಮೋಷನ್ ಪೋಸ್ಟರ್ ಬಿಡುಗಡೆ ಅಪರೂಪ. 'ಜಂಟಲ್‌ಮನ್' ಸಿನಿಮಾದಲ್ಲಿ ನಾನು ಜಡೇಶ್ ಅವರ ಜೊತೆ ಕಾರ್ಯನಿರ್ವಹಿಸಿದ್ದೆ. ಅಲ್ಲಿನ ನನ್ನ ಕೆಲಸವನ್ನು ಗುರುತಿಸಿ ಇಲ್ಲಿ ಅವಕಾಶ ನೀಡಿದ್ದಾರೆ. ಶರಣ್ ಹಾಗೂ ಗಣೇಶ್ ಅವರ ಜೊತೆ ನಟಿಸಬೇಕು ಎನ್ನುವ ಆಸೆ ಇತ್ತು. ಅದು ಈಗ ಈಡೇರಿದೆ.

'ಗುರು ಶಿಷ್ಯರು' ಚಿತ್ರದಲ್ಲಿ ಹಾಲು ಮಾರುವ ಹಳ್ಳಿ ಹುಡುಗಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ನನ್ನ ಪಾತ್ರ ರವಿಚಂದ್ರನ್ ಅಭಿಮಾನಿ. ಒಂದು ರೀತಿ ಫಿಲ್ಮಿ ಕ್ಯಾರೆಕ್ಟರ್. ಹಳ್ಳಿಮೇಷ್ಟ್ರಾಗಿ ಶರಣ್ ಅವರ ಪಾತ್ರವಿದೆ. ಈ ಎರಡು ಪಾತ್ರಗಳ ನಡುವಿನ ಪ್ರೇಮಕಥೆ ಇದು. ಪಾತ್ರಕ್ಕಾಗಿ ನಾನು ಸೈಕಲ್ ಸವಾರಿ ಅಭ್ಯಾಸ ಮಾಡಿದ್ದೆ. ಗಂಡು ಮಕ್ಕಳು ಬಿಡುವ ಸೈಕಲ್ ಅದು. ಸಿಟಿಯಲ್ಲಿ ಹುಟ್ಟಿಬೆಳೆದ ನನಗೆ ಲಂಗದಾವಣಿ ಉಟ್ಟುಕೊಂಡು ಸೈಕಲ್ ಸವಾರಿ ಮಾಡುವುದು ಸವಾಲಾಗಿತ್ತು. ಇದಕ್ಕಾಗಿ ಇಲ್ಲಿಗೆ ಸೈಕಲ್ ತರಿಸಿಕೊಂಡು ಮನೆ ಮುಂದೆಯೇ ಅಭ್ಯಾಸ ಮಾಡಿದ್ದೆ.

'ಸಖತ್' ಸಿನಿಮಾದಲ್ಲಿ ನಾನೂ ಕಣ್ಣು ಕಾಣಿಸದೇ ಇರುವ 'ನಕ್ಷತ್ರ' ಎನ್ನುವ ಹೆಸರಿನ ಭಾಷಣಗಾರ್ತಿಯ ಪಾತ್ರಕ್ಕೆ ಬಣ್ಣಹಚ್ಚಿದ್ದೇನೆ. ಮಕ್ಕಳಿಗೆ ಸ್ಫೂರ್ತಿಯ ಮಾತುಗಳನ್ನಾಡುವ ಭಾಷಣಗಾರ್ತಿ ನಾನು. ನನಗೂ ಈ ಪಾತ್ರ ಬಹಳ ಹೊಸದು. ಗಣೇಶ್ ಅವರ ಜೊತೆ ನಟಿಸಲು ಕಾತುರದಿಂದ ಕಾಯುತ್ತಿದ್ದೇನೆ. ❖



ಕಬ್ಜ
ಉಪೇಂದ್ರ, ಸುದೀಪ್

ವಿಶ್ವವನ್ನೇ 'ಕಬ್ಜ' ಮಾಡಲು ಸಜ್ಜಾಗಿದ್ದಾರೆ ಚಂದ್ರು

ಕನ್ನಡ ಸೇರಿದಂತೆ ಭಾರತದ ಒಟ್ಟು ಏಳು ಭಾಷೆಗಳಲ್ಲಿ ತೆರೆಯ ಮೇಲೆ ಬರಲು ಸಜ್ಜಾಗುತ್ತಿದೆ ರಿಯಲ್ ಸ್ಟಾರ್ ಉಪೇಂದ್ರ ನಟನೆಯ 'ಕಬ್ಜ' ಚಿತ್ರ. ಬಿಡುಗಡೆಗೂ ಪೂರ್ವದಲ್ಲೇ ಸಾಕಷ್ಟು ನಿರೀಕ್ಷೆ ಹುಟ್ಟಿಸಿರುವ ಈ ಪ್ಯಾನ್ ಇಂಡಿಯಾ ಚಿತ್ರದ ಪೋಸ್ಟರ್ ಇತ್ತೀಚೆಗೆ ಬಿಡುಗಡೆಯಾಗಿದ್ದು, ವಿಶೇಷಪಾತ್ರದಲ್ಲಿ ಕಿಚ್ಚ ಸುದೀಪ್ ಕಾಣಿಸಿಕೊಂಡಿದ್ದಾರೆ.

ಸುದೀಪ್ ಅವರನ್ನೇ ಮನಸ್ಸಿನಲ್ಲಿ ಇಟ್ಟುಕೊಂಡು 'ಭಾರ್ಗವ್ ಭಕ್ಷಿ' ಎಂಬ ಪಾತ್ರವನ್ನು ಕೆತ್ತಿರುವ ನಿರ್ದೇಶಕ ಆರ್.ಚಂದ್ರು ಇಡೀ ಭಾರತಕ್ಕೆ ಕನ್ನಡ ಸಿನಿಮಾದ ತಾಕತ್ತು ತೋರಿಸಲು ಸಿದ್ಧತೆ ನಡೆಸಿದ್ದಾರೆ.

'ಸುದೀಪ್ ಹಾಗೂ ಉಪೇಂದ್ರ ಇಬ್ಬರೂ ಪ್ಯಾನ್ ಇಂಡಿಯಾ ಹೀರೊಗಳು. ಸುದೀಪ್ ಅವರಿಗೆ ಪಾತ್ರವನ್ನು ವಿವರಿಸಿದಾಗ ಇಷ್ಟಪಟ್ಟರು. ಕನ್ನಡ ಸಿನಿಮಾವೊಂದನ್ನು ಈ ಮಟ್ಟಕ್ಕೆ ಮಾಡುತ್ತಿರುವಾಗ ಖಂಡಿತವಾಗಿಯೂ ಬೆಂಬಲವಿದೆ ಎಂದರು. ಚಿತ್ರದ ಮೇಕಿಂಗ್ ಬಗ್ಗೆಯೂ ಅವರು ಮೆಚ್ಚುಗೆ ವ್ಯಕ್ತಪಡಿಸಿದರು' ಎನ್ನುತ್ತಾರೆ ಚಂದ್ರು.

ಕೆಜಿಎಫ್ ಸ್ಫೂರ್ತಿ: 'ಕನ್ನಡ ಚಿತ್ರಗಳು ಮಾರುಕಟ್ಟೆ ಸಣ್ಣದು ಎಂದು ನಾವೇ ಒಂದು ಗಡಿ ಹಾಕಿಕೊಂಡಿದ್ದೆವು. ಚಂದ್ರಲೋಕಕ್ಕೆ ಹೋಗುವ ಕನಸಿದ್ದರೂ ನನ್ನ ಕೈಯಲ್ಲಿ ಟೆಂಪೊವಷ್ಟೇ ಇತ್ತು. ಇದನ್ನು ತೆಗೆದುಕೊಂಡು ನಾನು ಮೈಸೂರುವರೆಗೆ ಹೋಗಬಹುದಿತ್ತು. ಪ್ರಶಾಂತ್ ನೀಲ್ ಅವರು ರಾಕೆಟ್ ಲಾಂಚ್ ಮಾಡಿ ಇಲ್ಲಿಂದಲೂ ಚಂದ್ರಲೋಕಕ್ಕೆ ಹೋಗಬಹುದು ಎಂದು ತೋರಿಸಿದರು. ಕೆಜಿಎಫ್ ಅನ್ನು ಯಶಸ್ವಿಯಾಗಿ ಉಡಾವಣೆ ಮಾಡಿದರು. ಇದನ್ನು ಸ್ಫೂರ್ತಿಯಾಗಿ ತೆಗೆದುಕೊಂಡು ನಾವು ಕೆಲಸ ಮಾಡುತ್ತಿದ್ದೇವೆ. ಇದಕ್ಕೆ ಎಲ್ಲರ ಬೆಂಬಲ ಬೇಕು. ಹೀಗಾದಲ್ಲಿ ಮಾತ್ರ ಚಿತ್ರರಂಗ ಬೆಳೆಯಲಿದೆ' ಎನ್ನುತ್ತಾರೆ.

'ನನ್ನ ಈ ಹಿಂದಿನ ಎಲ್ಲ ಸಿನಿಮಾಗಳನ್ನು ಸನ್ ಟಿ.ವಿಗೆ ಕೊಟ್ಟಿದ್ದೇನೆ. ಸನ್ ಟಿ.ವಿ ಒಡಿಶಾದಲ್ಲಿ ಹೆಚ್ಚಿನ ಟಿಆರ್‌ಪಿ ಹೊಂದಿದೆ. ಜೊತೆಗೆ ಮಹಾರಾಷ್ಟ್ರ ಹಾಗೂ ಒಡಿಶಾದ ಚಿತ್ರಮಂದಿರಗಳಲ್ಲೂ 'ಕಬ್ಜ' ಸ್ಥಳೀಯ ಭಾಷೆಯಲ್ಲೇ ತೆರೆಕಾಣಲಿದೆ. ಕಂಟೆಂಟ್ ಸಿನಿಮಾಗಳು ಮರಾಠಿ ಭಾಷೆಯಲ್ಲಿ ಚೆನ್ನಾಗಿ ಓಡುತ್ತವೆ. ಅಲ್ಲಿಯೂ ನಮಗೆ ಪ್ರೇಕ್ಷಕರಿದ್ದಾರೆ ಎನ್ನುವ ಕಾರಣದಿಂದಲೇ ಒರಿಯಾ ಹಾಗೂ ಮರಾಠಿಯಲ್ಲಿ ಡಬ್ ಮಾಡುತ್ತಿದ್ದೇವೆ' ಎಂದು ಹೇಳುತ್ತಾರೆ ಚಂದ್ರು.

ಲಾಕ್‌ಡೌನನಲ್ಲಿ ಸಿದ್ಧವಾಗಿದೆ 'ಕಬ್ಜ' 2 ಕಥೆ: ಲಾಕ್‌ಡೌನ್‌ನಲ್ಲಿ ಚಿತ್ರರಂಗದ ಚಟುವಟಿಕೆಗಳೆಲ್ಲವೂ ಸ್ತಬ್ಧವಾಗಿದ್ದಾಗ, ಕಬ್ಜ–2 ಚಿತ್ರದ ಕಥೆಯನ್ನೂ ಆರ್.ಚಂದ್ರು ಅವರು ಸಿದ್ಧಮಾಡಿಕೊಂಡಿದ್ದು, ಮೊದಲ ಭಾಗ ತೆರೆಗೆ ಬಂದ ಬಳಿಕವಷ್ಟೇ ಎರಡನೇ ಭಾಗದ ಚಿತ್ರೀಕರಣ ಆರಂಭಿಸಲು ನಿರ್ಧರಿಸಿದ್ದಾರೆ.

ಬೆಂಗಳೂರು, ಹೈದರಾಬಾದ್ ಮುಂತಾದ ಕಡೆ ನಿರ್ಮಿಸಲಾಗಿರುವ ಅದ್ದೂರಿ ಸೆಟ್‌ಗಳಲ್ಲಿ ಈ ಚಿತ್ರದ ಚಿತ್ರೀಕರಣ ನಡೆದಿದೆ. ಶೇ 70ರಷ್ಟು ಚಿತ್ರೀಕರಣ ಪೂರ್ಣಗೊಂಡಿದ್ದು, ಜುಲೈ ಮೊದಲ ವಾರದಿಂದಲೇ ಚಿತ್ರೀಕರಣ ಪುನರಾರಂಭವಾಗಲಿದೆ. ❖

ಬಿಡುಗಡೆಯ ಹಾದಿಯಲ್ಲಿ 'ಅನಿರೀಕ್ಷಿತ'



ಮಿಮಿಕ್ರಿ ದಯಾನಂದ್

'ಅನಿರೀಕ್ಷಿತ' ಎಂಬ ಶೀರ್ಷಿಕೆಯ ಎರಡೇ ಪಾತ್ರಗಳಿರುವ ವಿಭಿನ್ನ ಸಿನಿಮಾವೊಂದು ತೆರೆಯ ಮೇಲೆ ಬರಲು ಸಿದ್ಧವಾಗಿದೆ. ಕನ್ನಡ ಮತ್ತು ಮಲಯಾಳಂ ಭಾಷೆಯಲ್ಲಿ ಬಿಡುಗಡೆಗೆ ಸಜ್ಜಾಗಿರುವ ಈ ಚಿತ್ರಕ್ಕೆ ಮಿಮಿಕ್ರಿ ದಯಾನಂದ್ ಅವರ ಪ್ರಧಾನ ಪಾತ್ರ ಹಾಗೂ ನಿರ್ದೇಶನವಿದೆ.

ಅದೂ ಅವರಿಗೆ ಅನಿರೀಕ್ಷಿತವೇ ಅಂತೆ. ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆ ಆಗಿದೆ. ಮಂಗಳೂರು ಹಾಗೂ ಕೇರಳದ ಕೆಲವು ಪ್ರದೇಶಗಳ ಸುಂದರ ಪರಿಸರದಲ್ಲಿ ಚಿತ್ರೀಕರಣ ನಡೆದಿದೆ. ಸಮುದ್ರ ತೀರದ ಮನೆಯೊಂದರಲ್ಲಿ ಹೆಚ್ಚು ದಿನದ ಚಿತ್ರೀಕರಣ ನಡೆದಿತ್ತು. ಲಾಕ್‌ಡೌನ್ ಸಮಯವಾದುದ್ದರಿಂದ ಯಾರು ಆಚೆ ಹೋಗುವಂತಿರಲಿಲ್ಲ. ಅಡುಗೆ ಕೆಲಸದಿಂದ ಹಿಡಿದು ಎಲ್ಲವನ್ನೂ ನಾವೇ ಮಾಡಿಕೊಂಡೆವು. ಕೇರಳದವರೇ ಆದ ಭಾಮ ಅರುಣ್ ನಾಯಕಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ ಎಂದ ದಯಾನಂದ್, ಸರ್ಕಾರದ ಮಾರ್ಗಸೂಚಿ ನೋಡಿಕೊಂಡು ಚಿತ್ರ ಬಿಡುಗಡೆ ಮಾಡುತ್ತೇವೆ ಎಂದಿದ್ದಾರೆ. ಎಸ್.ಕೆ.ಟಾಕೀಸ್ ಲಾಂಛನದಲ್ಲಿ ಶಾಂತಕುಮಾರ್ ನಿರ್ಮಿಸಿರುವ ಈ ಚಿತ್ರದ ಸಹ ನಿರ್ಮಾಪಕರು ಸಂತೋಷ್ ಕೊಡಂಕೇರಿ, ರಘು ಎಸ್. ಹಾಗೂ ಮಿಮಿಕ್ರಿ ದಯಾನಂದ್. ❖



'ದ್ವಿತ್ವ' ಅವತಾರದಲ್ಲಿ ಪುನೀತ್

ಸಿನಿ ಸಂಕ್ಷಿಪ್ತ

'ರಾಜಕುಮಾರ್', 'ಯುವರತ್ನ' ಬಳಿಕ ಹೊಂಬಾಳೆ ಫಿಲ್ಮ್ಸ್ ಜೊತೆ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಮತ್ತೊಮ್ಮೆ ಕೈಜೋಡಿಸಿದ್ದು, 'ಲೂಸಿಯಾ' ಸಿನಿಮಾ ಖ್ಯಾತಿಯ ನಿರ್ದೇಶಕ ಪವನ್ ಕುಮಾರ್ 'ಆ್ಯಕ್ಷನ್ ಕಟ್' ಹೇಳಲಿರುವ 'ದ್ವಿತ್ವ'ದಲ್ಲಿ ವಿಭಿನ್ನವಾಗಿ ಕಾಣಿಸಿಕೊಳ್ಳಲಿದ್ದಾರೆ.

ಕಳೆದ ಯುಗಾದಿಯಂದು ಪವನ್ ನಿರ್ದೇಶನದ ಚಿತ್ರದಲ್ಲಿ ನಟಿಸುವ ಕುರಿತು ಪುನೀತ್ ಟ್ವೀಟ್‌ನಲ್ಲಿ ಮಾಹಿತಿ ನೀಡಿದ್ದರು. ಚಿತ್ರದ ಶೀರ್ಷಿಕೆ ಹಾಗೂ ಫಸ್ಟ್ ಲುಕ್ ಗುರುವಾರ ಅನಾವರಣಗೊಂಡಿದ್ದು, ಈ ವಿಶಿಷ್ಟವಾದ ಸೈಕಲಾಜಿಕಲ್ ಡ್ರಾಮಾ ಥ್ರಿಲ್ಲರ್‌ನಲ್ಲಿ ಕಾಣಿಸಿಕೊಳ್ಳಲಿದ್ದೇನೆ ಎಂದು ಪುನೀತ್ ಟ್ವೀಟ್ ಮೂಲಕ ತಿಳಿಸಿದ್ದಾರೆ. ಚಿತ್ರವನ್ನು ವಿಜಯ್ ಕಿರಗಂದೂರ್ ನಿರ್ಮಾಣ ಮಾಡುತ್ತಿದ್ದು, ಸೆಪ್ಟೆಂಬರ್‌ನಲ್ಲಿ ಚಿತ್ರೀಕರಣ ಆರಂಭವಾಗಲಿದೆ ಎಂದು ಚಿತ್ರತಂಡವು ತಿಳಿಸಿದೆ.

ಈಗಾಗಲೇ 'ಲೈಫು ಇಷ್ಟೇನೆ', 'ಲೂಸಿಯಾ', 'ಯೂಟರ್ನ್' ಸಿನಿಮಾಗಳ ಮುಖಾಂತರ ಪ್ರೇಕ್ಷಕರ ಎದುರಿಗೆ ವಿಭಿನ್ನ ಕಥೆಗಳನ್ನು ಪವನ್ ಕುಮಾರ್ ಇರಿಸಿದ್ದಾರೆ. 'ದ್ವಿತ್ವ'ದ ಪೋಸ್ಟರ್‌ನಲ್ಲಿ ಪುನೀತ್ ಅವರ ಫಸ್ಟ್‌ಲುಕ್ ಕೂಡಾ ಭಿನ್ನವಾಗಿದೆ. ಪ್ರಸ್ತುತ ಜೇಮ್ಸ್ ಚಿತ್ರದ ಚಿತ್ರೀಕರಣದಲ್ಲಿ ಪುನೀತ್ ತೊಡಗಿಸಿಕೊಂಡಿದ್ದು, ಈ ಚಿತ್ರವು ಇದೇ ಡಿಸೆಂಬರ್ ವೇಳೆಗೆ ತೆರೆಕಾಣುವ ಸಾಧ್ಯತೆ ಇದೆ. 2022ರಲ್ಲಿ 'ದ್ವಿತ್ವ' ತೆರೆಗೆ ಬರಲಿದೆ. ❖

'ಕನಸಲ್ಲಿ ನಡೆವ ಗೀತೆ...'

'ವ್ಹೀಲ್ ಚೇರ್ ರೋಮಿಯೋ' ಚಿತ್ರದ ಲಿರಿಕಲ್ ಹಾಡು ಇತ್ತೀಚೆಗೆ ಬಿಡುಗಡೆ ಆಗಿದೆ. ಝಂಕಾರ್ ಮ್ಯೂಸಿಕ್ ಸಂಸ್ಥೆ ಈ ಹಾಡನ್ನು ಹೊರ ತಂದಿದೆ. ಬಿಡುಗಡೆಯಾದ ನಾಲ್ಕು ದಿನಗಳಲ್ಲೇ ಸುಮಾರು 6 ಲಕ್ಷಕ್ಕೂ ಅಧಿಕ ಮಂದಿ ವೀಕ್ಷಿಸಿದ್ದಾರೆ. ಜಯಂತ ಕಾಯ್ಕಿಣಿ ಅವರು ಸಾಹಿತ್ಯ ಬರೆದಿದ್ದಾರೆ, 'ಕನಸಲ್ಲಿ ನಾ ನಡೆವೆ' ಎಂಬ ಹಾಡನ್ನು ಸಂಜಿತ್ ಹೆಗ್ಡೆ ಹಾಡಿದ್ದಾರೆ. ಬಿ.ಜೆ. ಭರತ್ ಅವರ ಸಂಗೀತ ಇದೆ.

ವ್ಹೀಲ್ ಚೇರ್ ರೋಮಿಯೋ
ರಾಮ್ ಚೇತನ್, ಮಯೂರಿ

ಕಾಲು ಕಳೆದುಕೊಂಡ ಹುಡುಗ, ಕಣ್ಣಿಲ್ಲದ ಹುಡುಗಿಯ ನಡುವಿನ ಪ್ರೇಮಕಥೆಯೇ 'ವ್ಹೀಲ್ ಚೇರ್ ರೋಮಿಯೋ'.

ಬೆಂಗಳೂರು, ಮುಂಬೈ ಮುಂತಾದ ಕಡೆ ಚಿತ್ರೀಕರಣ ನಡೆದಿದೆ. ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಜಿ.ನಟರಾಜ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಈ ಚಿತ್ರಕ್ಕೆ ಗುರು ಕಶ್ಯಪ್ ಸಂಭಾಷಣೆ ಬರೆದಿದ್ದಾರೆ. ಅಗಸ್ತ್ಯ ಕ್ರಿಯೇಷನ್ಸ್ ಮೂಲಕ ಟಿ.ವೆಂಕಟಾಚಲಯ್ಯ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ರಾಮ್ ಚೇತನ್ ಅವರು ಈ ಚಿತ್ರದ ನಾಯಕ, ಮಯೂರಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ❖

ಶ್ರೇಯಸ್ ಈಗ 'ರಾಣ'

ಖ್ಯಾತ ನಿರ್ಮಾಪಕ ಕೆ.ಮಂಜು ಅವರ ಪುತ್ರ ಶ್ರೇಯಸ್ ಅವರು ನಾಯಕನಾಗಿ ನಟಿಸುತ್ತಿರುವ ನೂತನ ಚಿತ್ರದ ಶೀರ್ಷಿಕೆ ಅನಾವರಣ ಗುರುವಾರ ಬೆಳಗ್ಗೆ ಮೋದಿ ಆಸ್ಪತ್ರೆ ಬಳಿಯ ಗಣಪತಿ ದೇವಸ್ಥಾನದಲ್ಲಿ ನೆರವೇರಿತು. 'ಅಧ್ಯಕ್ಷ', 'ರನ್ನ', 'ಪೊಗರು'ನಂತಹ ಯಶಸ್ವಿ ಚಿತ್ರಗಳನ್ನು ನಿರ್ದೇಶಿಸಿದ ನಂದ ಕಿಶೋರ್ ಈ ಹೊಸ ಚಿತ್ರ 'ರಾಣ'ವನ್ನು ನಿರ್ದೇಶಿಸುತ್ತಿದ್ದಾರೆ.

ಜುಲೈ 7ರಂದು 'ರಾಣ' ಚಿತ್ರದ ಮುಹೂರ್ತ ಸಮಾರಂಭ ನಡೆಯಲಿದೆ.

ಈ ಚಿತ್ರದ ಶೀರ್ಷಿಕೆ ಮೊದಲು ನಿರ್ಮಾಪಕ ರಮೇಶ್ ಕಶ್ಯಪ್ ಅವರ ಬಳಿಯಿತ್ತು. ರಾಕಿಂಗ್ ಸ್ಟಾರ್ ಯಶ್ ಅವರು 'ರಾಣ' ಚಿತ್ರದಲ್ಲಿ ಅಭಿನಯಿಸಬೇಕಿತ್ತು. ರಮೇಶ್ ಕಶ್ಯಪ್ ಅವರು ನಮಗಾಗಿ ಈ ಶೀರ್ಷಿಕೆ ಬಿಟ್ಟುಕೊಟ್ಟಿದ್ದಾರೆ. ಶೀರ್ಷಿಕೆ ಬಿಟ್ಟುಕೊಟ್ಟಿರುವುದಕ್ಕೆ ನಿರ್ಮಾಪಕ ಪುರುಷೋತ್ತಮ ಗುಜ್ಜಾಲ್ ಹಾಗೂ ಕೆ.ಮಂಜು ಧನ್ಯವಾದ ತಿಳಿಸಿದ್ದಾರೆ. ಚಿತ್ರಕ್ಕೆ ಚಂದನ್ ಶೆಟ್ಟಿ ಸಂಗೀತ ನೀಡುತ್ತಿದ್ದು, ಶೇಖರ್ ಚಂದ್ರು ಛಾಯಾಗ್ರಹಣವಿದೆ. ನಾಯಕಿಯಾಗಿ ರೇಶ್ಮಾ ನಾಣಯ್ಯ ಅಭಿನಯಿಸುತ್ತಿದ್ದಾರೆ. ❖

ಡಾಕ್ಟರ್ ಚೀಟಿಯಲ್ಲಿ ಸಿನಿಮಾ ಗೀತೆ

ಶರತ್ ಹೆಗ್ಡೆ

ಸ್ಟೆತಾಸ್ಕೋಪ್ ಹಿಡಿಯುವ, ಔಷಧದ ಚೀಟಿ ಬರೆಯುವ ಕೈಗಳು ಆಗಾಗ ಗೀಚಿದ ಸಾಲುಗಳು ಬೆಳ್ಳಿತೆರೆಯ ಚಿತ್ರಗಳಲ್ಲಿ ಗೀತೆಗಳಾಗಿ ಝೇಂಕರಿಸಿದವು. ಚಿತ್ರಕ್ಕೊಂದು ಗೀತ 'ಚಿಕಿತ್ಸೆ' ಕೊಟ್ಟ ಡಾಕ್ಟರ್ ಮಾತ್ರ ಯಾವ ಹೆಸರು, ಕೀರ್ತಿಗೂ ಕಾಯದೆ ತಮ್ಮ ಪಾಡಿಗೆ ಬರೆಯುತ್ತಲೇ ಇದ್ದಾರೆ. ಕನ್ನಡ, ತುಳು, ಹಿಂದಿ ಗೀತೆಗಳು ಡಾಕ್ಟರ್ ಚೀಟಿಯಲ್ಲಿ ಅರಳಿವೆ.

ಚಿತ್ರ ಸಾಹಿತಿ ಪಾಂಡಿತ್ಯ ಪ್ರದರ್ಶನ ಮಾಡುವುದಲ್ಲ. ಹೇಳಬೇಕಾಗಿರುವ ಸಂದೇಶವನ್ನು ಸರಳವಾಗಿ ದಾಟಿಸಿದರೆ ಸಾಕು. ಒಂದಿಷ್ಟು ಭಾಷಾಜ್ಞಾನ, ಸಂಗೀತಜ್ಞಾನ, ಬರೆಯುವ ಆಸಕ್ತಿ ಇಷ್ಟಂತೂ ಬೇಕು.

– ಇದು ಕನ್ನಡ, ತುಳು ಮತ್ತು ಹಿಂದಿ ಚಲನಚಿತ್ರ, ವಿಡಿಯೊ ಆಲ್ಬಂಗಳಿಗೆ ಸಾಹಿತ್ಯ ಬರೆಯುವ ಡಾ.ಉಮೇಶ್ ಪಿಲಿಕುಡೇಲು ಅವರ ಬರವಣಿಗೆಯ ಫಿಲಾಸಫಿ.

ಡಾ.ಉಮೇಶ್ ಅವರು ಮಂಗಳೂರಿನಲ್ಲಿ ಆಯುರ್ವೇದ ವೈದ್ಯರು. ವೃತ್ತಿಯ ಮಧ್ಯೆ ಸಣ್ಣ ಪುರುಸೊತ್ತು ಸಿಕ್ಕಾಗ ಒಂದೆರಡು ಸಾಲು ಬರೆದಿದ್ದೇ ಸೂಪರ್‌ಹಿಟ್ ಸಂಗೀತವಾಗಿ ಚಿತ್ರರಸಿಕರು ಮತ್ತು ಸಂಗೀತ ಪ್ರೇಮಿಗಳನ್ನು ಸೆಳೆದಿದೆ.

ಕನ್ನಡದಲ್ಲಿ ಸುಮಾರು 20ಕ್ಕೂ ಹೆಚ್ಚು ಚಲನಚಿತ್ರ ಗೀತೆಗಳು, ತುಳುವಿನ ಚಿತ್ರ ಹಾಗೂ ವಿಡಿಯೊ ಹಾಡುಗಳಿಗೆ ಬರೆದ ಸಾಹಿತ್ಯ, ಹಿಂದಿಯಲ್ಲಿ ಎರಡು ವಿಡಿಯೊ ಹಾಡುಗಳು ಹೀಗೆ ಬರೆದ ಗೀತೆಗಳ ಸಂಖ್ಯೆ ಲೆಕ್ಕವಿಟ್ಟಿಲ್ಲ ಎನ್ನುತ್ತಾರೆ ಡಾ.ಉಮೇಶ್.

ದರ್ಶನ್ ಅಭಿನಯದ 'ಚಕ್ರವರ್ತಿ' ಚಿತ್ರದ 'ಮತ್ತೆ ಮಳೆಯಾಗಿದೆ...' ಹಾಡು, 'ಮಳೆ ಬರಲಿ ಮಂಜು ಇರಲಿ' ಚಿತ್ರದ 'ಜಗ ಜಗಿಸೋ ಜಗ ಬೇಡ ಕಣೋ....', ಹೀಗೆ ತಮ್ಮ ಹಾಡುಗಳನ್ನು ರಿಯಾಲಿಟಿ ಷೋಗಳಲ್ಲಿ ಆದ್ಯತೆಯ ಗೀತೆಯಾಗಿ ಸ್ಪರ್ಧಿಗಳು ಹಾಡುತ್ತಾರೆ ಎಂದು ಅವರು ಖುಷಿಯಿಂದ ಹೇಳುತ್ತಾರೆ.

ವಿ.ಮನೋಹರ್, ಗುರುಕಿರಣ್, ಗಿರಿಧರ್ ದಿವಾನ್ ಅವರಂಥ ಖ್ಯಾತ ಸಂಗೀತ ನಿರ್ದೇಶಕರು ನನ್ನ ಗೀತೆಗಳಿಗೆ ರಾಗ ಜೋಡಿಸಿದ್ದಾರೆ. ಯೋಗರಾಜ್ ಭಟ್, ವಿಲೋಪ್ ಶೆಟ್ಟಿ ಕೂಡಾ ಅವಕಾಶ ಕೊಟ್ಟು ಪ್ರೋತ್ಸಾಹಿಸಿದ್ದಾರೆ ಎಂದು ಸಿನಿಬದುಕಿನಲ್ಲಿ ಗುರುತಿಸಿದ ಮಂದಿಯನ್ನು ನೆನಪಿಸಿಕೊಂಡರು ಅವರು.

ಚಿತ್ರಸಾಹಿತಿಯಾಗಲೆಂದೇ ಮುಂಬೈಗೆ ಹೋದೆ...

ನನಗೆ ಮೊದಲು ಹಿಂದಿ ಗಝಲ್‌ಗಳ ಮೇಲೆ ಆಸಕ್ತಿ ಇತ್ತು. ಹಿಂದಿಯಲ್ಲಿ ಸಾಕಷ್ಟು ಗಝಲ್‌ಗಳನ್ನು ಬರೆದಿದ್ದೆ. ವೈದ್ಯಕೀಯ ಕೋರ್ಸ್ ಮುಗಿದ ಬಳಿಕ ಇದೇ ಆಸಕ್ತಿ ಮುಂದಿಟ್ಟುಕೊಂಡು ಚಿತ್ರಸಾಹಿತಿ ಆಗಬೇಕು ಎಂದೇ ಮುಂಬೈಗೆ ಹೋದೆ. ಕ್ಯಾಸೆಟ್ ಕಂಪನಿ, ಸಂಗೀತ ಸಂಸ್ಥೆಗಳನ್ನು ಸಂಪರ್ಕಿಸಿದೆ. ಸುಮಾರು 6 ತಿಂಗಳು ನೋಡಿದೆ. ಅದ್ಯಾಕೋ ನನಗೆ ಸರಿ ಹೊಂದಲಿಲ್ಲ. ಮುಂಬೈಯ ಗಿಜಿಗುಡುವ ಜೀವನಶೈಲಿ ನನಗೆ ಹಿಡಿಸಲಿಲ್ಲ. ವಾಪಸ್ ಬಂದು ಮಂಗಳೂರಿನಲ್ಲಿ ವೈದ್ಯವೃತ್ತಿಯನ್ನು ಮುಂದುವರಿಸಿದೆ. ಆಗ ಕನ್ನಡದಲ್ಲಿ ಏಕೆ ಹಾಡು ಬರೆಯಲು ಪ್ರಯತ್ನಿಸಬಾರದು ಎಂದು ಮುಂದುವರಿದೆ. ಏಕೆಂದರೆ ಮಾತೃಭಾಷೆಯಲ್ಲಿ ಬರೆಯುವುದು ಸುಲಭ ಅಲ್ಲವೇ. ಹಾಗಾಗಿ ಇಲ್ಲಿ ಗೀತೆಗಳ ಮೂಲಕ ಗುರುತಿಸಿಕೊಂಡೆ.

'ಬೆಳದಿಂಗಳಾಗಿ ಬಾ' ಚಿತ್ರದ 'ನೀ...ನನ್ನ ಉಸಿರಾಗಬೇಡ' ನಾನು ಬರೆದ ಮೊದಲ ಕನ್ನಡ ಹಾಡು. ತುಳುವಿನಲ್ಲಿ 'ಏರೆಗ್ಲಾ ಪನೊಡ್ಚಿ' ('ಯಾರಿಗೂ ಹೇಳ್ಬೇಡಿ' ಚಿತ್ರದ ರಿಮೇಕ್) ಚಿತ್ರಕ್ಕೂ ಹಾಡುಗಳನ್ನು ಬರೆದೆ. ಕಂಬಳ ಉಳಿಸುವ ಸಂಬಂಧಿಸಿ 'ಕಂಬಳ' ಎಂಬ ಹಾಡನ್ನು ಬರೆದೆ. ಪ್ರೊ ಕಬ್ಬಡ್ಡಿಯ ಶೀರ್ಷಿಕೆ ಗೀತೆಯನ್ನು ಬರೆದಿದ್ದೆ. ಹೀಗೆ ಬರೆದ ಹಾಡುಗಳೆಲ್ಲವೂ ಅದ್ಭುತವಾಗಿ ಹಿಟ್ ಆದವು. ಇನ್ನೂ ಕೆಲವು ಹಾಡುಗಳನ್ನೇನೋ ಬರೆದೆ. ಆ ಚಿತ್ರಗಳೇ ಪೂರ್ಣಗೊಳ್ಳಲಿಲ್ಲ. ಅದಕ್ಕೆ ಅದರದ್ದೇ ಆದ ಸಮಸ್ಯೆಗಳು ಇವೆ ಎಂದು ವಿವರಿಸಿದರು ಡಾ.ಉಮೇಶ್.

ಈಗ '3000', 'ಚೇಸ್' ಚಿತ್ರಗಳಿಗೆ ಹಾಡು ಬರೆದಿದ್ದೇನೆ. ಈ ಮಧ್ಯೆ ಓದುವಿಕೆ, ಸಂಗೀತ ಕೇಳುವಿಕೆ ಮುಂದುವರಿದಿದೆ. ಗೀತರಚನೆಕಾರನಿಗೆ ಇದು ಬಹಳ ಮುಖ್ಯ ಎನ್ನುತ್ತಾರೆ ಅವರು. ಮುಖ್ಯವಾಗಿ ಕನ್ನಡ ಭಾಷಾಜ್ಞಾನ ಇರುವವರ ಕೊರತೆ ಸಿನಿಮಾ ಕ್ಷೇತ್ರದಲ್ಲಿದೆ ಎಂಬ ಬೇಸರವೂ ಅವರದ್ದು.

ಚಿತ್ರ ಸಾಹಿತ್ಯ ಬರೆಯುವುದನ್ನು ವೃತ್ತಿ ಮಾಡಿಕೊಳ್ಳಬೇಕು ಎಂಬ ಗುರಿ ಇರಲಿಲ್ಲ. ನಾನೊಬ್ಬ ಗೀತಸಾಹಿತಿ ಆಗಬೇಕು ಎಂಬ ಗುರಿ ಇತ್ತು. ಅದನ್ನು ತಲುಪಿದ್ದೇನೆ. ಕೆಲವು ಸಂದರ್ಭ ಗೀತೆಯ ಧ್ವನಿಮುದ್ರಣ, ಬಿಡುಗಡೆ ಸಂದರ್ಭದಲ್ಲಿ ಬೆಂಗಳೂರಿಗೆ ಬರಲು ಆಗುತ್ತಿರಲಿಲ್ಲ. ಹೀಗಾಗಿ ಹೊರಗೆ ಗುರುತಿಸಿಕೊಳ್ಳಲು ಆಗಲಿಲ್ಲ. ಅದು ನನ್ನ ಇತಿಮಿತಿಯೂ ಹೌದು. ಆದರೆ, ಎಷ್ಟೋ ಸಂದರ್ಭದಲ್ಲಿ ಗೀತರಚನೆಕಾರನಿಗೆ ಸಿಗಬೇಕಾದ ಕನಿಷ್ಠ ಗೌರವ (ಕ್ರೆಡಿಟ್) ಸಿಗುವುದಿಲ್ಲ. ರೇಡಿಯೊ, ಟಿವಿಯಲ್ಲೂ ಗೀತರಚನೆಕಾರನ ಹೆಸರನ್ನೇ ಹೇಳುವುದಿಲ್ಲ ಎಂಬ ಬೇಸರವೂ ಅವರಿಗಿದೆ. ❖

ಡಾ.ಉಮೇಶ್ ಪಿಲಿಕುಡೇಲು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಒಬ್ಬ ಮನುಷ್ಯ ವಿಫಲನಾಗಿಲ್ಲ ಅಂದಮಾತ್ರಕ್ಕೆ ಅವನು ಮಹೋನ್ನತ ವ್ಯಕ್ತಿ ಆಗಿಬಿಡುವುದಿಲ್ಲ. ವೈಫಲ್ಯದಿಂದ ಹಿಮ್ಮೆಟ್ಟದಿದ್ದರೆ ಅವನು ಮಹಾನ್ ವ್ಯಕ್ತಿಯಾಗಲು ಸಾಧ್ಯ.

–ಕನ್‌ಫ್ಯೂಷಿಯಸ್

ಕೋವಿಡ್ ಸಾವಿಗೆ ಪರಿಹಾರ 'ಸುಪ್ರೀಂ' ತೀರ್ಪು ಸ್ವಾಗತಾರ್ಹ

ಕೋವಿಡ್-19 ಸಾಂಕ್ರಾಮಿಕದಿಂದ ಮೃತಪಟ್ಟವರ ಕುಟುಂಬಗಳಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆ ಅನುಸಾರ ಸೂಕ್ತ ಪರಿಹಾರ ನೀಡಬೇಕೆಂದು ಸುಪ್ರೀಂ ಕೋರ್ಟ್ ಆದೇಶ ನೀಡಿರುವುದು ಸ್ವಾಗತಾರ್ಹ. ಆದರೆ ಮೃತ ಪ್ರತೀ ವ್ಯಕ್ತಿಯ ಕುಟುಂಬಕ್ಕೆ ತಲಾ ₹ 4 ಲಕ್ಷ ಪರಿಹಾರ ನೀಡಬೇಕೆಂಬ ಅರ್ಜಿದಾರರ ವಾದವನ್ನು ಸುಪ್ರೀಂ ಕೋರ್ಟ್ ಮಾನ್ಯ ಮಾಡಿಲ್ಲ. 'ಯಾವ ದೇಶವೂ ಅಮಿತ ಸಂಪನ್ಮೂಲಗಳನ್ನು ಹೊಂದಿರುವುದಿಲ್ಲ. ಕೋವಿಡ್ ಸೋಂಕಿನ ವಿರಾಟ್ ಸ್ವರೂಪದ ಹಿನ್ನೆಲೆಯಲ್ಲಿ ಮೃತರ ಕುಟುಂಬಗಳಿಗೆ ಇಂತಿಷ್ಟು ಹಣವನ್ನು ನೀಡಬೇಕೆಂದು ಸೂಚಿಸುವುದು ಕಾರ್ಯಸಾಧುವಲ್ಲ. ಆದರೆ, ಪರಿಹಾರ ನೀಡಬೇಕಾದುದು ಸರ್ಕಾರದ ಕರ್ತವ್ಯ. ಸರ್ಕಾರವೇ ರೂಪಿಸಿದ ವಿಪತ್ತು ನಿರ್ವಹಣಾ ಕಾಯ್ದೆಯಡಿಯಲ್ಲಿ ಇದು ಕಡ್ಡಾಯವೂ ಹೌದು' ಎಂದು ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್ ಮತ್ತು ಎಂ.ಆರ್. ಶಾ ಅವರಿದ್ದ ನ್ಯಾಯಪೀಠವು ಅಭಿಪ್ರಾಯಪಟ್ಟಿದೆ. ಈ ಪರಿಹಾರ ಮೊತ್ತವನ್ನು ವಿತರಿಸಲು ಅನುವಾಗುವಂತೆ ಆರು ವಾರಗಳ ಒಳಗೆ ಮಾರ್ಗಸೂಚಿಗಳನ್ನು ಸಿದ್ಧಪಡಿಸುವಂತೆಯೂ ಸರ್ಕಾರಕ್ಕೆ ಕೋರ್ಟ್ ಆದೇಶಿಸಿದೆ. ಪರಿಹಾರ ನೀಡಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರ ಮಂಡಿಸಿದ ವಾದವನ್ನು ಕೋರ್ಟ್ ಸ್ಪಷ್ಟವಾಗಿ ತಿರಸ್ಕರಿಸಿರುವುದು ಗಮನಾರ್ಹ. 'ಚಂಡಮಾರುತ, ಭೂಕಂಪ ಮತ್ತು ಪ್ರವಾಹಗಳು ಯಾವಾಗಲೋ ಒಮ್ಮೆ ಸಂಭವಿಸುವಂತಹವು. ಆದರೆ, ಕೋವಿಡ್ ಸೋಂಕು ನಿರಂತರವಾಗಿ ಕಾಡುತ್ತಿದೆ. ಹಾಗಾಗಿ ಇದನ್ನು ವಿಪತ್ತು ನಿರ್ವಹಣಾ ಕಾಯ್ದೆಯಡಿ ಪರಿಗಣಿಸಬಾರದು' ಎನ್ನುವ ಸರ್ಕಾರದ ವಾದವನ್ನು ಕೋರ್ಟ್ ಒಪ್ಪಿಕೊಂಡಿಲ್ಲ. ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಕನಿಷ್ಠ ಮಟ್ಟದ ಪರಿಹಾರವನ್ನಾದರೂ ಒದಗಿಸುವುದು ಪ್ರಧಾನಿ ಅಧ್ಯಕ್ಷತೆಯ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಾಂವಿಧಾನಿಕ ಹೊಣೆಗಾರಿಕೆ ಎಂದು ಕೋರ್ಟ್ ಸ್ಪಷ್ಟಮಾತುಗಳಲ್ಲಿ ಹೇಳಿದೆ. ಕೋವಿಡ್ ಸೋಂಕಿನ ಬಳಿಕ ಕಪ್ಪು ಮತ್ತು ಹಳದಿ ಫಂಗಸ್ ಬಾಧೆಗೆ ಈಡಾಗಿ ಪ್ರಾಣ ಕಳೆದುಕೊಂಡಿರುವವರ ಕುಟುಂಬಗಳಿಗೆ ತಲಾ ₹ 4 ಲಕ್ಷ ಪರಿಹಾರ ನೀಡಬೇಕೆಂದು ಕೋರಿರುವ ಇನ್ನೊಂದು ಅರ್ಜಿಯೂ ಸುಪ್ರೀಂ ಕೋರ್ಟಿನ ಮುಂದಿದೆ. ಈ ಸಂಬಂಧ ಸರ್ಕಾರಕ್ಕೆ ಕೋರ್ಟ್ ಈಗಾಗಲೇ ನೋಟಿಸ್ ನೀಡಿದೆ.

ಈ ತೀರ್ಪಿನ ಬಳಿಕವಾದರೂ ಕೇಂದ್ರ ಸರ್ಕಾರವು ಜನರ ಆರೋಗ್ಯ ರಕ್ಷಣೆಯತ್ತ ಹೆಚ್ಚು ಗಮನ ಹರಿಸಿ, ಮೂಲ ಸೌಕರ್ಯಗಳ ವಿಸ್ತರಣೆಗೆ ಹೆಚ್ಚು ಸಂಪನ್ಮೂಲವನ್ನು ಒದಗಿಸಿ ಕಾರ್ಯೋನ್ಮುಖವಾಗಲಿ

ದೇಶದಲ್ಲಿ ಕೋವಿಡ್-19 ಸಾಂಕ್ರಾಮಿಕದಿಂದಾಗಿ ಜೂನ್ ಅಂತ್ಯಕ್ಕೆ 3.98 ಲಕ್ಷ ಜನರು ಮೃತಪಟ್ಟಿದ್ದಾರೆ. ಈ ಸಂಖ್ಯೆ ಇನ್ನಷ್ಟು ಹೆಚ್ಚುವ ಎಲ್ಲ ಸಾಧ್ಯತೆಗಳೂ ಇವೆ. ಈ ಸಾಂಕ್ರಾಮಿಕವನ್ನು ರಾಷ್ಟ್ರೀಯ ವಿಪತ್ತು ಎಂದು 2020ರ ಮಾರ್ಚ್‌ನಲ್ಲಿ ಸರ್ಕಾರವೇ ಪ್ರಕಟಿಸಿದೆ. 2015ರ ಅಧಿಸೂಚನೆಯ ಪ್ರಕಾರ ಚಂಡಮಾರುತ, ಪ್ರವಾಹ, ಭೂಕಂಪ ಸಹಿತ ರಾಷ್ಟ್ರೀಯ ವಿಪತ್ತುಗಳಿಗೆ ಒಳಗಾದ ಸಂತ್ರಸ್ತರ ಕುಟುಂಬಗಳಿಗೆ ತಲಾ ₹ 4 ಲಕ್ಷ ಪರಿಹಾರ ನೀಡಬೇಕು ಎಂದು ಕಾಯ್ದೆಯೇ ಹೇಳುತ್ತದೆ. ಹಾಗಿದ್ದೂ ನ್ಯಾಯಪೀಠವು ಸರ್ಕಾರದ ಆರ್ಥಿಕ ಸಂಕಷ್ಟವನ್ನು ಗಮನದಲ್ಲಿ ಇಟ್ಟುಕೊಂಡು ಪರಿಹಾರದ ಮೊತ್ತ ಎಷ್ಟೆಂದು ನಿಗದಿ ಮಾಡುವುದನ್ನು ಸರ್ಕಾರದ ವಿವೇಚನೆಗೆ ಬಿಟ್ಟಿರುವುದು ಸರಿಯಾಗಿಯೇ ಇದೆ. ಹಾಗೆ ನೋಡಿದರೆ ಈಗಿನ ಈ ದುಃಸ್ಥಿತಿಗೆ ಕೋವಿಡ್ ನಿರ್ವಹಣೆಯಲ್ಲಿ ಸರ್ಕಾರಗಳ ವೈಫಲ್ಯವೇ ಕಾರಣ ಎನ್ನುವುದು ಮೇಲ್ನೋಟಕ್ಕೇ ಎದ್ದು ಕಾಣಿಸುತ್ತಿದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಿ, ಕೊರೊನಾ ಸೋಂಕಿತರಿಗೆ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ದೊರಕುವಂತೆ ಮಾಡಿದ್ದರೆ ದೇಶದಲ್ಲಿ ಸಾವಿನ ಪ್ರಮಾಣ ಇಷ್ಟೊಂದು ಏರಿಕೆ ಆಗುತ್ತಿರಲಿಲ್ಲ. ಆಡಳಿತದ ಅದಕ್ಷತೆ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಮೂಲ ಸೌಕರ್ಯಗಳ ಕೊರತೆಯೇ ಸಾವಿನ ಸಂಖ್ಯೆ ಹೆಚ್ಚುವುದಕ್ಕೆ ಪ್ರಮುಖ ಕಾರಣ ಎನ್ನುವುದರಲ್ಲಿ ಎರಡು ಮಾತಿಲ್ಲ. ಕೋವಿಡ್ ನಿರ್ವಹಣೆಯಲ್ಲಿ ಸರ್ಕಾರ ಎಡವಿದ್ದನ್ನು ದೇಶದ ನ್ಯಾಯಾಲಯಗಳೇ ಸರ್ಕಾರದ ಗಮನಕ್ಕೆ ತಂದು ಪದೇ ಪದೇ ಎಚ್ಚರಿಸಿವೆ. ಆಮ್ಲಜನಕ ಪೂರೈಕೆಯಲ್ಲಿ ಅವ್ಯವಸ್ಥೆ ಆಗಿದ್ದನ್ನು ಗಮನಿಸಿ ಸರ್ಕಾರಕ್ಕೆ ಚಾಟಿಯೇಟು ನೀಡಿವೆ. ದೇಶದಲ್ಲಿ ಕೋವಿಡ್ ಪ್ರತಿರೋಧಕ ಲಸಿಕೆಯ ಅಸಮರ್ಪಕ ಪೂರೈಕೆಯನ್ನು ಸರಿಪಡಿಸಲು ಸಹ ಸುಪ್ರೀಂ ಕೋರ್ಟ್ ಮಧ್ಯಪ್ರವೇಶ ಮಾಡಬೇಕಾಯಿತು ಎನ್ನುವುದು ನಮ್ಮ ಕಣ್ಣಮುಂದೆಯೇ ಇದೆ. ಕೋವಿಡ್ ಅಥವಾ ಅದರಿಂದಾದ ಸಮಸ್ಯೆಗಳಿಂದ ವ್ಯಕ್ತಿ ಮೃತಪಟ್ಟಿದ್ದರೂ 'ಕೋವಿಡ್‌ನಿಂದ ಮೃತಪಟ್ಟಿದ್ದಾರೆ' ಎಂಬ ಪ್ರಮಾಣಪತ್ರ ಪಡೆದುಕೊಳ್ಳಲು ಹಲವು ತೊಡಕುಗಳು ಇವೆ ಎನ್ನಲಾಗುತ್ತಿದೆ. ಪ್ರಮಾಣಪತ್ರ ಪಡೆಯುವ ಪ್ರಕ್ರಿಯೆಯನ್ನು ಸರಳಗೊಳಿಸಿ ಮಾರ್ಗಸೂಚಿ ಹೊರಡಿಸಿ ಎಂದೂ ನ್ಯಾಯಾಲಯವು ಕೇಂದ್ರಕ್ಕೆ ಸೂಚಿಸಿದೆ. ಇಂತಹ ಸಾಮಾನ್ಯಜ್ಞಾನದ ವಿಚಾರಗಳಲ್ಲಿ ಕೂಡ ನ್ಯಾಯಾಲಯದಿಂದ ಹೇಳಿಸಿಕೊಳ್ಳುವುದು ಯಾವುದೇ ಸರ್ಕಾರಕ್ಕೆ ಶೋಭೆ ತರುವುದಿಲ್ಲ. ಸಾವಿಗೀಡಾದವರ ಕುಟುಂಬಗಳಿಗೆ ನೆರವಾಗುವ ವಿಷಯದಲ್ಲಿ ತನ್ನ ಹೊಣೆ ಏನೂ ಇಲ್ಲ ಎಂಬಂತೆ ಕೇಂದ್ರ ಸರ್ಕಾರವು ನುಣುಚಿಕೊಳ್ಳಲು ಪ್ರಯತ್ನಿಸುತ್ತಿರುವುದು ಎಳ್ಳಷ್ಟೂ ಸರಿಯಲ್ಲ. ಸರ್ಕಾರದ ಕಿವಿ ಹಿಂಡುವ ಕೆಲಸವನ್ನು ಸಕಾಲದಲ್ಲಿ ಮಾಡುವ ಮೂಲಕ ಸುಪ್ರೀಂ ಕೋರ್ಟ್, ಸಂತ್ರಸ್ತ ಕುಟುಂಬಗಳ ನೆರವಿಗೆ ಧಾವಿಸಿರುವುದು ಮೆಚ್ಚಬೇಕಾದಂತಹ ಅಂಶ. ಸರ್ಕಾರಗಳು ಜನರ ರಕ್ಷಣೆಗೆ ನಿಲ್ಲುವಲ್ಲಿ ವಿಫಲವಾದಾಗ ಕೋರ್ಟ್‌ಗಳು ನೆರವಿಗೆ ಬರಲೇಬೇಕಾಗುತ್ತದೆ. ಈ ತೀರ್ಪಿನ ಬಳಿಕವಾದರೂ ಕೇಂದ್ರ ಸರ್ಕಾರವು ಜನರ ಆರೋಗ್ಯ ರಕ್ಷಣೆಯತ್ತ ಹೆಚ್ಚು ಗಮನ ಹರಿಸಿ, ಮೂಲ ಸೌಕರ್ಯಗಳ ವಿಸ್ತರಣೆಗೆ ಹೆಚ್ಚು ಸಂಪನ್ಮೂಲವನ್ನು ಒದಗಿಸಿ ಕಾರ್ಯೋನ್ಮುಖವಾಗಲಿ. ಕೋವಿಡ್‌ನ ಮೂರನೇ ಅಲೆ ಸಾಧ್ಯತೆ ಕುರಿತು ವೈದ್ಯಕ್ಷೇತ್ರದ ತಜ್ಞರು ಈಗಾಗಲೇ ಎಚ್ಚರಿಸಿದ್ದಾರೆ. ಆ ವೇಳೆಯಲ್ಲಾದರೂ ಜನರ ಸಾವು– ನೋವುಗಳು ಹೆಚ್ಚಾಗದಂತೆ ಸೂಕ್ತ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಲಿ.

ದಿನದ ಟ್ವೀಟ್

ಹೀರೊಗಳಿಗೆ ಅಭಿನಂದನೆ

ಒಬ್ಬ ತಜ್ಞವೈದ್ಯನಾಗಿ ವೈದ್ಯಕೀಯ ಚಿಕಿತ್ಸೆಯ ಒಳಹೊಕ್ಕಾಗ, ಕಲೆ, ವಿಜ್ಞಾನ ಮತ್ತು ವೃತ್ತಿಪರತೆಯ ಪ್ರಾಮುಖ್ಯ ಅರಿವಿಗೆ ಬರುತ್ತದೆ. ಅದು ಈ ವರ್ಷ ಇನ್ನೂ ನಿಚ್ಚಳವಾಗಿ ಮನವರಿಕೆಯಾಯಿತು. ಜನಸಮುದಾಯದ ಒಳಿತಿಗಾಗಿ ತಮ್ಮ ಜೀವವನ್ನೇ ಮುಡುಪಾಗಿಟ್ಟು ಸೇವೆ ಸಲ್ಲಿಸಿದ ಎಲ್ಲಾ ಹೀರೊಗಳಿಗೂ ರಾಷ್ಟ್ರೀಯ ವೈದ್ಯರ ದಿನಾಚರಣೆಯ ಈ ಸಂದರ್ಭದಲ್ಲಿ ಅಭಿನಂದನೆಗಳು.

ಡಾ. ಶ್ರೀರಾಮ್ ನೆನೆ, ವೈದ್ಯ

ತಪ್ಪು ಮಾಹಿತಿ ತಡೆಯೋಣ

ಕೋವಿಡ್– 19 ಸೋಂಕಿನ ಈ ಸಂದರ್ಭದಲ್ಲಿ, ತಪ್ಪು ಮಾಹಿತಿಯು ಮಾರಕವಾಗಿ ಪರಿಣಮಿಸಬಹುದು. ಆದರೆ ನಾವೆಲ್ಲರೂ ಇದರ ಬಗ್ಗೆ ಏನಾದರೂ ಮಾಡಲು ಸಾಧ್ಯ: #PledgeToPause ಮತ್ತು ತಪ್ಪು ಮಾಹಿತಿ ಹಾಗೂ ವೈರಸ್ ಹರಡುವುದನ್ನು ತಡೆಯಲು, ನೀವು ಆನ್‌ಲೈನ್‌ನಲ್ಲಿ ಏನನ್ನಾದರೂ ಹಂಚಿಕೊಳ್ಳುವ ಮುನ್ನ ಅದರ ಸತ್ಯಾಸತ್ಯತೆಯನ್ನು ಪರಿಶೀಲಿಸಿ.

ವಿಶ್ವಸಂಸ್ಥೆ

50 ವರ್ಷಗಳ ಹಿಂದೆ

ಶುಕ್ರವಾರ, 2-7-1971

- **ಸೋಯುಜ್ ಹುತಾತ್ಮರಿಗೆ ಅಂತ್ಯ ಗೌರವ**

ಮಾಸ್ಕೊ, ಜುಲೈ 1– ರಷ್ಯಾದ ಮೂವರು ಗಗನಯಾತ್ರಿಗಳಾದ ಜಾರ್ಜಿ ಡೊಬ್ರೋವೋಲ್‌ಸಿ, ವ್ಲಾಡಿಸ್ಲಾವ್ ವೋಲ್ಕೋವ್ ಮತ್ತು ವಿಕ್ಟರ್ ಪ್ಯಾಟ್ಸೆಯೇವ್ ಅವರುಗಳ ಕಳೇಬರಗಳನ್ನು ಸೇನೆಯ ಪ್ರಧಾನ ಕಚೇರಿಯಲ್ಲಿ ಇಡಲಾಗಿದೆ.

ಶವಪರೀಕ್ಷೆಯ ನಂತರ ಬೈಕೋನೂರ್ ಬಾಹ್ಯಾಕಾಶ ಪ್ರಯೋಗ ಕೇಂದ್ರದಿಂದ ಕಳೇಬರಗಳನ್ನು ಇಲ್ಲಿಗೆ ತರಲಾಯಿತು.

- **ಚೀನಾ, ಪಾಕ್ ಬೆದರಿಕೆ ಕಾರಣ ಸೈನ್ಯ ಪ್ರಾಬಲ್ಯಕ್ಕೆ ಸರ್ಕಾರದ ಗಮನ**

ನವದೆಹಲಿ, ಜುಲೈ 1– ಚೀನಾ ಮತ್ತು ಪಾಕಿಸ್ತಾನಗಳಿಂದ ದೇಶದ ಭದ್ರತೆಗೆ ಸಂಭವನೀಯ ಬೆದರಿಕೆಯನ್ನೇ ಪ್ರಮುಖ ಆಧಾರವಾಗಿಟ್ಟುಕೊಂಡು ಭಾರತದ ರಕ್ಷಣೆ ಹಾಗೂ ಯೋಜನಾ ನೀತಿಗಳನ್ನು ರೂಪಿಸಲಾಗುವುದು.

ರಕ್ಷಣಾ ಸಚಿವ ಶಾಖೆಯು ಇಂದು ಲೋಕಸಭೆಗೆ ಸಲ್ಲಿಸಿದ ತನ್ನ ವಾರ್ಷಿಕ ವರದಿಯಲ್ಲಿ 'ನಮ್ಮ ಭದ್ರತೆಗೆ ಒಡ್ಡಿರುವ ಬೆದರಿಕೆಗಳ ಕಾರಣ ಸೈನ್ಯ ತನ್ನ ಭದ್ರತಾ ವ್ಯವಸ್ಥೆಯನ್ನು ಬಲಪಡಿಸಬೇಕಾಗಿದೆ' ಎಂದು ತಿಳಿಸಿದೆ.

ಚೀನಾವು ಮಾಡುತ್ತಿರುವ ಭಾರತ ವಿರೋಧಿ ಪ್ರಚಾರದ ಗಡುಸು ಸ್ವಲ್ಪ ತಗ್ಗಿದ್ದರೂ ಅದರಿಂದ 'ನಮ್ಮ ಭದ್ರತೆಗೆ ಇರುವ ಮಿಲಿಟರಿ ಬೆದರಿಕೆಯಲ್ಲಿ ಗಣನೀಯ ಬದಲಾವಣೆಯಾಗಿಲ್ಲ' ಎಂದು ವರದಿ ಹೇಳಿದೆ.

- **ಬರುವ ವರ್ಷದಿಂದ ಭಾರತದ ಬಟ್ಟೆ ರಫ್ತಿಗೆ ಸುಂಕ ವಿನಾಯಿತಿ ರದ್ದು: ಬ್ರಿಟನ್ ಪ್ರಕಟಣೆ**

ಲಂಡನ್, ಜುಲೈ 1– ಸುಂಕ ನೀಡದೆಯೇ ಹತ್ತಿ ಬಟ್ಟೆಯನ್ನು ಬ್ರಿಟನ್ನಿಗೆ ರಫ್ತು ಮಾಡಲು ಭಾರತಕ್ಕೆ ಅವಕಾಶ ಮಾಡಿ ಕೊಡುವ ರಿಯಾಯಿತಿ ವಾಣಿಜ್ಯ ಒಪ್ಪಂದವು ಮುಂದಿನ ಜನವರಿ 1ರಿಂದ ರದ್ದಾಗುವುದೆಂದು ಬ್ರಿಟನ್ನಿನ ವಾಣಿಜ್ಯ ಸಚಿವ ಮೈಕೇಲ್ ನೋಬ್ಲೆ ನಿನ್ನೆ ಕಾಮನ್ಸ್ ಸಭೆಯಲ್ಲಿ ಪ್ರಕಟಿಸಿದರು.

ಅಮೆರಿಕ– ರಷ್ಯಾ ನಡುವೆ ಸಂಬಂಧ ಸುಧಾರಿಸುವುದು ಭಾರತದ ದೃಷ್ಟಿಯಿಂದ ಒಳ್ಳೆಯದು

ಬೈಡನ್, ಪುಟಿನ್: ಆಂತರ್ಯ ಬಲ್ಲವರಾರು?

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಅಮೆರಿಕ ಮತ್ತು ರಷ್ಯಾದ ನಾಯಕರು ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡರೆ, ಮುಖಾಮುಖಿಯಾದಾಗ ಮುಗುಳ್ನಕ್ಕರೆ ಅದು ಆ ಕ್ಷಣಕ್ಕೆ ಜಗತ್ತಿನ ಪ್ರಮುಖ ಸುದ್ದಿಯಾಗಿ ಬಿತ್ತರವಾಗುತ್ತದೆ. ಒಂದೊಮ್ಮೆ ಉಭಯ ನಾಯಕರ ನಡುವೆ ಶೃಂಗಸಭೆ ಏರ್ಪಟ್ಟು ಅರ್ಧತಾಸು ಮಾತುಕತೆ ನಡೆದರೆ, ಜಾಗತಿಕ ರಾಜಕೀಯ ಚಾವಡಿಯಲ್ಲಿ ಆ ಕುರಿತು ವಾರಗಟ್ಟಲೆ ಚರ್ಚೆ ನಡೆಯುತ್ತದೆ.

ಹಾಗೆ ನೋಡಿದರೆ, ಶೀತಲ ಸಮರದ ದಿನಗಳಲ್ಲಿ ರಷ್ಯಾ ಮತ್ತು ಅಮೆರಿಕದ ನಾಯಕರು ಚರ್ಚೆಗೆ ತೆರೆದುಕೊಂಡಿದ್ದು ಕಡಿಮೆಯೇ. ಗೋರ್ಬಚೆವ್ ಅವರು ಸೋವಿಯತ್ ಅಗ್ರ ನಾಯಕನ ಸ್ಥಾನಕ್ಕೆ ಬಂದ ಮೇಲೆ ಅಮೆರಿಕದ ಅಧ್ಯಕ್ಷ ರೇಗನ್ ಮತ್ತು ಗೋರ್ಬಚೆವ್ ನಡುವೆ ಪತ್ರ ಸಂವಾದ ಆರಂಭವಾಯಿತು. ನಂತರ ಶೃಂಗಸಭೆ ಏರ್ಪಟ್ಟಿತು. ಈ ನಾಯಕರು ಜಿನಿವಾದಲ್ಲಿ ಮೊದಲ ಬಾರಿಗೆ ಭೇಟಿಯಾದಾಗ, 'ಅಧಿಕಾರಿಗಳ ಮಟ್ಟದ ಮಾತುಕತೆ ನಡೆಯುತ್ತಿರಲಿ, ನಾವು ಶುದ್ಧ ಗಾಳಿ ಸೇವಿಸುತ್ತಾ ಒಂದು ಸುತ್ತು ತಿರುಗಾಡಿ ಬರೋಣ' ಎಂದು ಗೋರ್ಬಚೆವ್ ಅವರನ್ನು ರೇಗನ್ ಕರೆದೊಯ್ದಿದ್ದರು. 'ಅಣುಯುದ್ಧವಾದರೆ ಅದರಲ್ಲಿ ಗೆದ್ದ ದೇಶ ಎಂಬುದು ಇರುವುದಿಲ್ಲ. ಎರಡೂ ಕಡೆ ನಾಶವನ್ನಷ್ಟೇ ಕಾಣಬಹುದು' ಎಂಬುದು ಉಭಯ ನಾಯಕರಿಗೂ ಮನವರಿಕೆಯಾಗಿತ್ತು.

ಅದುವರೆಗೆ ಅಮೆರಿಕ ಹಾಗೂ ಸೋವಿಯತ್ 'MAD' (Mutual assured destruction) ಧೋರಣೆ ಅನುಸರಿಸುತ್ತಿದ್ದವು. ಅಂದರೆ ಎರಡೂ ದೇಶಗಳು ಸಮಪ್ರಮಾಣದ ಅಣ್ವಸ್ತ್ರಗಳನ್ನು ಇಟ್ಟುಕೊಳ್ಳುವುದು ಮತ್ತು ಒಂದೊಮ್ಮೆ ದಾಳಿಯಾದರೆ ಪ್ರತಿದಾಳಿ ಮಾಡಲು ಸಜ್ಜಾಗುವುದು. ಇದು ಈ ಎರಡು ದೇಶಗಳ ನಡುವೆ ಶಸ್ತ್ರ ಜಮಾವಣೆಯ ಪೈಪೋಟಿಗೆ ಕಾರಣವಾಗಿತ್ತು. ಸೋವಿಯತ್ ಪತನದ ಬಳಿಕ ಅಮೆರಿಕ ಮತ್ತು ರಷ್ಯಾ ನಡುವೆ ಹಲವು ಸುತ್ತಿನ ಮಾತುಕತೆಗಳು ನಡೆದವು. ಕ್ಲಿಂಟನ್, ಬುಷ್ ಮತ್ತು ಒಬಾಮ ಅವರು ರಷ್ಯಾಕ್ಕೆ ಹೋಗಿ ಬಂದರು. ರಷ್ಯಾದ ನಾಯಕರು ಅಮೆರಿಕಕ್ಕೆ ಭೇಟಿ ನೀಡಿದರು.

2010ರಲ್ಲಿ ಒಬಾಮ ಅಧಿಕಾರದ ಅವಧಿಯಲ್ಲಿ ಅಮೆರಿಕ ಮತ್ತು ರಷ್ಯಾ 'ಸಮಗ್ರ ಶಸ್ತ್ರ ನಿಯಂತ್ರಣ ಒಪ್ಪಂದ'ಕ್ಕೆ ಸಹಿ ಹಾಕಿದವು. 2016ರ ಅಧ್ಯಕ್ಷೀಯ ಚುನಾವಣೆಯ ಹೊತ್ತಿಗೆ ಅಮೆರಿಕದ ಚುನಾವಣೆಯನ್ನು ರಷ್ಯಾ ಪ್ರಭಾವಿಸುತ್ತಿದೆ ಎಂಬ ಆರೋಪ ಕೇಳಿಬಂತು. ಆದರೂ ಸಂವಹನಕ್ಕೆ ತಡೆ ಬೀಳಲಿಲ್ಲ. 2018ರಲ್ಲಿ ಟ್ರಂಪ್ ಮತ್ತು ಪುಟಿನ್ ಹೆಲ್ಸಿಂಕಿಯಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದರು. 2020ರ ಚುನಾವಣೆಯಲ್ಲಿ ಬೈಡನ್ ಗೆದ್ದಾಗ, ಅಮೆರಿಕ ಮತ್ತು ರಷ್ಯಾದ ಸಂಬಂಧ ಹೇಗಿರಲಿದೆ ಎಂಬ ಪ್ರಶ್ನೆ ಮತ್ತೊಮ್ಮೆ ಉದ್ಭವಿಸಿತು. ಕಾರಣ, ಪುಟಿನ್ ಕುರಿತು ಬೈಡನ್ ಸದಭಿಪ್ರಾಯ ಹೊಂದಿರಲಿಲ್ಲ ಎನ್ನುವುದು.

ಇದೇ ಮಾರ್ಚ್‌ನಲ್ಲಿ ಅಧ್ಯಕ್ಷ ಬೈಡನ್, 'ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿನ ಹಸ್ತಕ್ಷೇಪ ಮತ್ತು ಕ್ರಿಮಿಯಾ ಭಾಗದಲ್ಲಿ ನಡೆದಿರುವ ಮಾನವಹಕ್ಕು ಉಲ್ಲಂಘನೆಗೆ ಪ್ರತಿಯಾಗಿ ರಷ್ಯಾ ಬೆಲೆ ತೆರಬೇಕು' ಎಂದು ಕಿಡಿಕಾರಿದರು. ಶಿಕ್ಷೆಯ ರೂಪದಲ್ಲಿ ರಷ್ಯಾದ 10 ರಾಜತಾಂತ್ರಿಕ ಅಧಿಕಾರಿಗಳನ್ನು ಅಮೆರಿಕ ಗಡಿಪಾರು ಮಾಡಿತು. ಪ್ರತಿಯಾಗಿ ಅಮೆರಿಕದ 8 ಉನ್ನತ ಅಧಿಕಾರಿಗಳಿಗೆ ರಷ್ಯಾ ನಿರ್ಬಂಧ ವಿಧಿಸಿತು. ಎರಡೂ ದೇಶಗಳ ರಾಯಭಾರಿಗಳು ತಮ್ಮ ದೇಶಗಳಿಗೆ ಮರಳಿದರು. ಈ ಬೆಳವಣಿಗೆ ಅಮೆರಿಕ ಮತ್ತು ರಷ್ಯಾ ಸಂಬಂಧ ಕುರಿತಂತೆ ಮುಂದೇನು ಎಂಬ ಪ್ರಶ್ನೆಯನ್ನು ಒಡ್ಡಿತು.

ಆದರೆ ಈಗ ಆತಂಕದ ಕಾರ್ಮೋಡ ಕೊಂಚ ಸರಿದಂತಿದೆ. ಜಿ-7 ರಾಷ್ಟ್ರಗಳ ಶೃಂಗಸಭೆಯಲ್ಲಿ ಭಾಗಿಯಾಗಿದ್ದ ಬೈಡನ್, ಜಿನಿವಾದಲ್ಲಿ ಪುಟಿನ್ ಕೈಕುಲುಕಿದ್ದಾರೆ. ಸಂದರ್ಭಕ್ಕೆ ಸೋತು, ಬಿಗುಮಾನ ತೊರೆದು ಇಬ್ಬರು ನಾಯಕರು ಮಾತುಕತೆಗೆ ಕುಳಿತಿದ್ದರ ಹಿಂದೆ ಹಲವು ಲೆಕ್ಕಾಚಾರಗಳಿವೆ. ಇರಾನ್ ವಿಷಯದಲ್ಲಿ ಅಮೆರಿಕವು ಇರಾನ್ ಮಾತುಕತೆಗೆ ತೆರೆದುಕೊಳ್ಳಲಿ, ಅಣು ಒಪ್ಪಂದಕ್ಕೆ ಬದ್ಧವಾಗಲಿ ಎಂದು ಕಾಯುತ್ತಿದೆ. ಇರಾನ್ ಪರ ರಷ್ಯಾ ನಿಲ್ಲದಂತೆ ತಡೆಯುವುದು ಅಮೆರಿಕದ ಅಗತ್ಯ. 2014ರಲ್ಲಿ ಕ್ರಿಮಿಯಾವನ್ನು ರಷ್ಯಾ ವಶಮಾಡಿಕೊಂಡಾಗ ಪಶ್ಚಿಮ ದೇಶಗಳು ರಷ್ಯಾ ಮೇಲೆ ಆರ್ಥಿಕ ದಿಗ್ಬಂಧನ ವಿಧಿಸಿದ್ದವು. ಅದರಿಂದ ಹೊರಬರುವುದು ರಷ್ಯಾಕ್ಕೆ ಜರೂರು. ಉಕ್ರೇನ್ ಬಿಕ್ಕಟ್ಟು ಬಗೆಹರಿಯುವುದು ಎರಡು ದೇಶಗಳಿಗೂ ಬೇಕಿದೆ.

ಇನ್ನು, ಅಫ್ಗಾನಿಸ್ತಾನದ ವಿಷಯ. ಈಗಾಗಲೇ ಅಮೆರಿಕ ತಾನು ಅಫ್ಗಾನಿಸ್ತಾನ ತೊರೆಯುವ ನಿರ್ಧಾರವನ್ನು ಘೋಷಿಸಿದೆ. ಒಂದೊಮ್ಮೆ ತಾನು ಅಲ್ಲಿಂದ ಕಾಲ್ತೆಗೆದ ಮೇಲೆ ಚೀನಾ ಮತ್ತು ಪಾಕಿಸ್ತಾನವು ಅಫ್ಗಾನಿಸ್ತಾನದಲ್ಲಿ ಬೇರೂರಬಹುದೇ ಎಂಬ ಆತಂಕ ಅಮೆರಿಕಕ್ಕಿದೆ. ಹಾಗಾಗಿ ಅಫ್ಗಾನಿಸ್ತಾನ ಕುರಿತ ನೀತಿಯಲ್ಲಿ ರಷ್ಯಾದೊಂದಿಗೆ ಸಹಮತ ಸಾಧ್ಯವಾದರೆ ಅಮೆರಿಕಕ್ಕೆ ನಿರಾಳ. ಉಳಿದಂತೆ, ಇಂಡೊ- ಪೆಸಿಫಿಕ್ ಭಾಗದಲ್ಲಿ ಅಮೆರಿಕದ 'ಕ್ವಾಡ್' ಒಕ್ಕೂಟ ರಚನೆಯಿಂದ ಅಳುಕಿರುವ ರಷ್ಯಾ, ಚೀನಾದೊಂದಿಗೆ ಹೆಣೆದುಕೊಳ್ಳುತ್ತಾ, ತಾನು ಉತ್ಪಾದಿಸುವ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಚೀನಾಕ್ಕೆ ಸರಬರಾಜು ಮಾಡುತ್ತಿದೆ. ಇದನ್ನು ತಡೆಯುವುದು ಅಮೆರಿಕದ ಉದ್ದೇಶ.

ಮಾತುಕತೆಯ ವೇಳೆ ಸಿರಿಯಾ ವಿಷಯವನ್ನು ಬೈಡನ್ ಪ್ರಮುಖವಾಗಿ ಪ್ರಸ್ತಾಪಿಸಿದ್ದಾರೆ. ಟರ್ಕಿಯ ಭಾಗದಿಂದ ಸಿರಿಯಾದ ವಾಯವ್ಯ ಗಡಿ ಪ್ರವೇಶಿಸುವ ಪರಿಹಾರ ಸಾಮಗ್ರಿಗಳನ್ನು ಹೊತ್ತ ವಿಶ್ವಸಂಸ್ಥೆಯ ಟ್ರಕ್ಕುಗಳಿಗೆ ಯಾವುದೇ ತಡೆ ಒಡ್ಡಬಾರದು ಎಂಬುದು ಅಮೆರಿಕದ ಆಗ್ರಹ. ಉಳಿದಂತೆ ಸೈಬರ್ ದಾಳಿ ನಿಯಂತ್ರಿಸುವುದು, ಮಾನವ ಹಕ್ಕು ಉಲ್ಲಂಘನೆ ತಡೆಯುವುದು ಇತ್ಯಾದಿ ವಿಷಯಗಳು ಉಭಯ ದೇಶಗಳ ನಾಯಕರನ್ನು ಹತ್ತಿರ ತಂದಿವೆ.

ಮೊದಲೆಲ್ಲಾ ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳು ನ್ಯಾಟೊ ಸಭೆಯಲ್ಲಿ ಅಥವಾ ಜಿ-7 ಶೃಂಗದಲ್ಲಿ ಭಾಗಿಯಾದರೆ ಮಾತುಕತೆಯ ಕೇಂದ್ರ ವಿಷಯ ರಷ್ಯಾ ಆಗಿರುತ್ತಿತ್ತು. ಆದರೆ ಈಗ ಆ ಸ್ಥಾನಕ್ಕೆ ಚೀನಾ ಬಂದಿದೆ. ಹಾಂಗ್‌ಕಾಂಗ್ ಮತ್ತು ತೈವಾನ್ ವಿಷಯದಲ್ಲಿ ಚೀನಾ ತೋರುತ್ತಿರುವ ಧಾಡಸಿತನ, ಕೊರೊನಾ ಕುರಿತ ಅನುಮಾನಾಸ್ಪದ ನಡೆ, ಉತ್ಪಾದನಾ ಶಕ್ತಿಯನ್ನು ಬಳಸಿಕೊಂಡು ಅದು ವಿಸ್ತರಿಸಿಕೊಳ್ಳುತ್ತಿರುವ ಜಾಗತಿಕ ಪ್ರಭಾವ, ಚೀನಾವನ್ನು ಪಶ್ಚಿಮ ರಾಷ್ಟ್ರಗಳ ಪ್ರತಿಸ್ಪರ್ಧಿಯಾಗಿಸಿದೆ. ಹಾಗಾಗಿ ಚೀನಾದ ಓಟವನ್ನು ತಡೆಯುವುದು ಪ್ರಥಮ ಆದ್ಯತೆಯಾಗಿದೆ. ಹೆಚ್ಚು ಅಪಾಯವೆನಿಸದ ರಷ್ಯಾದೊಂದಿಗೆ ಅಮೆರಿಕಕ್ಕೆ ಸಂಘರ್ಷ ಬೇಡವಾಗಿದೆ.

ಬೈಡನ್ ಮತ್ತು ಪುಟಿನ್ ಅವರ ಜಿನಿವಾ ಭೇಟಿಯ ಬಳಿಕ ಉಭಯ ದೇಶಗಳ ರಾಯಭಾರಿಗಳು ತಮ್ಮ ರಾಯಭಾರ ಕಚೇರಿಗಳಿಗೆ ಹಿಂದಿರುಗಿದ್ದಾರೆ. ಅಷ್ಟರಮಟ್ಟಿಗೆ ಸಂಘರ್ಷದ ಕಾರ್ಮೋಡ ಸರಿದಿದೆ. ಮುಂದೆ ಶಸ್ತ್ರನಿಗ್ರಹ ಮತ್ತು ಸೈಬರ್ ಸೆಕ್ಯುರಿಟಿ ಕುರಿತಾಗಿ ಮಾತುಕತೆ ನಡೆಯಲಿದೆ ಎಂದು ಶ್ವೇತಭವನ ಹೇಳಿದೆ. ಭಾರತದ ಮಟ್ಟಿಗೆ ಹೇಳುವುದಾದರೆ, ಅಮೆರಿಕ ಮತ್ತು ರಷ್ಯಾ ನಡುವೆ ಸಂಬಂಧ ಸುಧಾರಿಸಿದರೆ ಒಳ್ಳೆಯದೇ. ಅಮೆರಿಕದ ದಿಗ್ಬಂಧನದ ಕಾರಣದಿಂದ ರಷ್ಯಾದ ರಕ್ಷಣಾ ಉಪಕರಣಗಳ ಖರೀದಿಗೆ ಕೆಲವು ನಿರ್ಬಂಧಗಳಿವೆ. ಅವು ತೆರವಾಗುತ್ತವೆ. ಮುಖ್ಯವಾಗಿ ನಮಗೆ ಮಗ್ಗುಲ ಮುಳ್ಳಾಗಿರುವ ಚೀನಾಕ್ಕೆ ಆಧುನಿಕ ಉಪಕರಣಗಳ ಸರಬರಾಜು ತಗ್ಗುತ್ತದೆ.

2001ರಲ್ಲಿ ಪುಟಿನ್ ಮತ್ತು ಅಮೆರಿಕದ ಅಂದಿನ ಅಧ್ಯಕ್ಷ ಬುಷ್, ಸ್ಲೊವೇನಿಯಾ ಶೃಂಗದಲ್ಲಿ ಭೇಟಿಯಾದಾಗ, ಜಂಟಿ ಪತ್ರಿಕಾಗೋಷ್ಠಿಯ ವೇಳೆ 'ಪುಟಿನ್ ಅವರನ್ನು ನಂಬುತ್ತೀರಾ' ಎಂಬ ಪ್ರಶ್ನೆಗೆ ಬುಷ್ 'ಆ ಮನುಷ್ಯನ ಕಣ್ಣಲ್ಲಿ ಕಣ್ಣಿಟ್ಟು ನೋಡಿದ್ದೇನೆ. ಪುಟಿನ್ ಆಂತರ್ಯ ಅರ್ಥವಾಗಿದೆ' ಎಂದಿದ್ದರು. 2011ರಲ್ಲಿ ಅಂದಿನ ಉಪಾಧ್ಯಕ್ಷ ಬೈಡನ್, ಆಗ ರಷ್ಯಾದ ಪ್ರಧಾನಿಯಾಗಿದ್ದ ಪುಟಿನ್ ಅವರನ್ನು ಭೇಟಿಯಾದಾಗ ಬುಷ್ ಧಾಟಿಯಲ್ಲೇ 'ಪ್ರಧಾನಿ ಪುಟಿನ್, ನಾನು ನಿಮ್ಮ ಕಣ್ಣುಗಳನ್ನು ದಿಟ್ಟಿಸಿದ್ದೇನೆ. ನಿಮ್ಮಲ್ಲಿ ಆತ್ಮಸಾಕ್ಷಿ ಎಂಬುದು ಇದೆ ಎನಿಸುವುದಿಲ್ಲ' ಎಂದಿದ್ದರು. ಇದೇ ಮಾರ್ಚ್‌ನಲ್ಲಿ ಪುಟಿನ್ ಓರ್ವ 'ಕೊಲೆಗಡುಕ' ಎಂದು ಬೈಡನ್ ಕರೆದಿದ್ದರು. ಜಿನಿವಾದಲ್ಲಿ ಕೈ ಕುಲುಕಿದಾಗ ಇಬ್ಬರ ಮುಖದಲ್ಲೂ ಮುಗುಳ್ನಗೆ ಇತ್ತು. ಯಾರ ಆಂತರ್ಯವನ್ನು ಯಾರು ಅರಿತಿದ್ದರೋ ಬಲ್ಲವರಾರು?

ಚುರುಮುರಿ

ಜಂಟಿ ಖಾತೆ!

• ಬಿ.ಎನ್.ಮಲ್ಲೇಶ್

'ರೀ... ಇವತ್ತಿನ್ ಪೇಪರ್ ಓದಿದ್ರಾ?' ಮಡದಿ ಮುಗುಳುನಗೆ ಬೆರೆಸಿದ ಬಿಸಿ ಬಿಸಿ ಕಾಫಿ ತಂದು ಕೊಡುತ್ತ ಕೇಳಿದಳು.

ಓದಿದ್ನಲ್ಲ, ಏನ್ಸಮಾಚಾರ? ಗೋಲ್ಡ್ ರೇಟ್ ಇಳೀತಾ ಅಥವಾ ಯಾವುದಾದ್ರು ಸೇಲ್ ಹಾಕಿದಾರಾ?'

'ಥು ಆ ಸುದ್ದಿ ಅಲ್ಲ ಕಣ್ರಿ...'

'ಮತ್ತೆ? ಇನ್ಯಾವುದು? ಮುಂದೆ ಮುಖ್ಯ ಮಂತ್ರಿ ಆಗೋರ ಸುದ್ದಿನೋ ಮುಖ್ಯಮಂತ್ರಿ ಇಳಿಸೋರ ಸುದ್ದಿನೋ?'

'ನಿಮ್ತಲೆ, ದರಿದ್ರ ರಾಜಕೀಯದ್ದಲ್ಲ ಕಣ್ರಿ, ಬೇರೆ...'

'ಓ... ಕೊರೊನಾ ಕೇಸ್ ಇಳೀತಾ ಏತಲ್ಲ ಅದಾ ಅಥವಾ ಹೊಸ ವ್ಯಾಕ್ಸಿನ್ ಬಂದೇತಲ್ಲ ಅದರ ಸುದ್ದಿನಾ?'

'ಅದೂ ಅಲ್ಲ... ಈಗ ಕಾಫಿ ಕುಡೀರಿ, ಹೊಳೆಯುತ್ತೆ'.

'ಓ... ಗೊತ್ತಾತು ಬಿಡು, ಟ್ವಿಟರ್ನೋರು ಭಾರತದ ಭೂಪಟ ಬದಲಾಯಿಸಿದಾರಲ್ಲ ಅದಾ? ನಾವು ಟ್ವಿಟರ್‌ನೇ ಬದಲಾಯಿಸಿದ್ರಾತು ಬಿಡು...'

'ಅದೂ ಅಲ್ಲ, ಡ್ರೋನ್ ದಾಳಿದೂ ಅಲ್ಲ, ಎಸ್ಸೆಲ್ಸಿ ಪರೀಕ್ಷೆದೂ ಅಲ್ಲ...'

'ಮತ್ತಿನ್ಯಾವುದೆ? ಸಿನಿಮಾ ಸುದ್ದಿನಾ ಅಥವಾ ಅದ್ಯಾರೋ ಮಾಜಿ ಕಾರ್ಪೊರೇಟರ್‌ನ ಕೊಲೆ ಮಾಡಿದಾರಲ್ಲ ಅದಾ?'

'ಬೆಳಿಗ್ಗೆ ಎದ್ರೆ ಪೇಪರ್ ಹೆಡ್ಡಿಂಗ್‌ನಿಂದ ಹಿಡಿದು ಕೊನೇಪುಟದ ಕೊನೇ ಸಾಲುತಂಕ ಓದ್ತೀರ, ನಾನೇಳಿದ್ದು ಒಂದು ಸುದ್ದಿ ನಿಮ್ಮ ಕಣ್ಣಿಗೆ ಬಿದ್ದಿಲ್ಲ ಅಲ್ವ?' ಮಡದಿಗೆ ಸಿಟ್ಟು ಬಂತು.

'ಕೋಪ ಬ್ಯಾಡ, ಅದ್ಯಾವುದು ಸುದ್ದಿ ನೀನೇ ತೋರಿಸು ಎಂದೆ. ಕೈಯಿಂದ ಖಾಲಿ ಕಪ್ ಕಸಿದುಕೊಂಡ ಮಡದಿ ಪೇಪರ್ ತಗೊಂಡು 'ದಂಪತಿಗಳಿಗೆ ಆಸ್ತಿ ಜಂಟಿ ಖಾತೆ' ಎಂಬ ಸುದ್ದಿ ಮುಂದಿಡಿದಳು.

'ಓ ಇದಾ? ಈಗೇನು ನಿಂಗೂ ನನ್ನ ಎಲ್ಲ ಆಸ್ತಿಲೂ ಜಂಟಿ ಖಾತೆ ಬೇಕು ತಾನೆ? ನಾಳೆನೇ ಮಾಡ್ಸೋಣ ಬಿಡು' ಎಂದೆ.

'ಥ್ಯಾಂಕ್ಯೂರೀ, ನಿಮಗೆ ಇನ್ನೊಂದ್ ಕಪ್ ಬಿಸಿ ಕಾಫಿ ತರ್ತೀನಿ ಇರಿ' ಎಂದು ಖುಷಿಯಿಂದ ಒಳಗೋಡಿದಳು.

'ಬರೀ ಆಸ್ತಿ ಅಷ್ಟೇ ಅಲ್ಲ ಕಣೆ, ಸಾಲದ ಖಾತೆನೂ ಇದೆ' ಎಂದದ್ದು ಅವಳಿಗೆ ಕೇಳಿಸಲೇ ಇಲ್ಲ.

ಚರ್ಚೆ

ಶ್ರೇಷ್ಠತೆಯ ವ್ಯಸನಕ್ಕೆ ವರ್ಗಭೇದವಿಲ್ಲ

'ವೇದಗಳ ಕಾಲದ ಬ್ರಾಹ್ಮಣ್ಯವನ್ನು ಈಗಿನ ಬ್ರಾಹ್ಮಣರಿಗೆ ಆರೋಪಿಸುವುದು ಸೂಕ್ತವಲ್ಲ'

• ಆರ್.ಲಕ್ಷ್ಮೀನಾರಾಯಣ

ಬ್ರಾಹ್ಮಣ ಎನ್ನುವುದು ಜಾತಿವಾಚಕವಲ್ಲ, ಅದೊಂದು ವರ್ಣವಾಚಕ ಎಂದು ಗ.ನಾ.ಭಟ್ಟ ಅವರು ಹೇಳಿರುವುದು (ಚರ್ಚೆ, ಜೂನ್ 22) ಅಕ್ಷರಶಃ ನಿಜ. ಆದರೆ ಆ ಅರ್ಥದ ಕಾಲ ಕಳೆದುಹೋಗಿ ವರ್ಣಗಳೆಲ್ಲ ಜಾತಿಗಳಾಗಿ ಅದೆಷ್ಟೋ ಸಾವಿರ ವರ್ಷಗಳಾಗಿಬಿಟ್ಟಿವೆ. ಅವರು ಹೇಳಿದಂತೆ ವೇದಗಳ ಕಾಲದಲ್ಲಿ ಪ್ರಾರಂಭದಲ್ಲಿ ಸಮಾಜಜೀವನ ಸುಗಮವಾಗಿ ಸಾಗುವಂತಾಗಲು ಜನಸಮುದಾಯದಲ್ಲಿ ಒಂದು ವ್ಯವಸ್ಥೆ ಅಗತ್ಯವೆನಿಸಿ ಅವರು ತಮಗೆ ಆ ಕಾಲಕ್ಕೆ ತೋಚಿದಂತೆ ನಾಲ್ಕು ವರ್ಗಗಳನ್ನು (ವರ್ಣ) ರಚಿಸಿದರು. ಈಗ ನಮಗೆ ಅದು ಮೂರ್ಖತನದ್ದೆನಿಸಬಹುದು! ಅದು ಬೇರೆ.

ಇದು, ಅಂಬೇಡ್ಕರ್ ಅವರು ಹೇಳಿದಂತೆ ಯಾವುದೋ ಒಬ್ಬ ವ್ಯಕ್ತಿ ಅಥವಾ ಒಂದು ವರ್ಗ ಸೃಷ್ಟಿಸಿದ್ದಲ್ಲ. ಒಟ್ಟಾರೆ ಇಡೀ ಜನಸಮುದಾಯವೇ ಒಂದು ತೀರ್ಮಾನಕ್ಕೆ ಬಂದು ರೂಪಿಸಿಕೊಂಡದ್ದು. ವೇದಗಳನ್ನು ಆಗಿನ ಇಡೀ ಸಮಾಜವು ಜ್ಞಾನದ ಭಂಡಾರಗಳೆಂದು ತಿಳಿದಿದ್ದರಿಂದ ('ವಿದ್' ಎಂದರೆ ತಿಳಿ ಅದರಿಂದ 'ವೇದ'- ತಿಳಿವು ಶಬ್ದ) ಅವುಗಳನ್ನು ಅಭ್ಯಾಸ ಮಾಡುವ ಮೂಲಕ ನಿರಂತರವಾಗಿ ಉಳಿಸಿಕೊಂಡು ಬರುವ ಸಲುವಾಗಿ ಒಂದು ವರ್ಗ (ಬ್ರಾಹ್ಮಣ), ಪ್ರಜಾರಕ್ಷಣೆ, ರಾಜ್ಯವಾಳುವುದು ಮೊದಲಾದ ಕೆಲಸಗಳಿಗೆ ಒಂದು ವರ್ಗ (ಕ್ಷತ್ರಿಯ), ವ್ಯಾಪಾರ ವಹಿವಾಟು ನೋಡಿಕೊಳ್ಳಲು ಒಂದು ವರ್ಗ (ವೈಶ್ಯ) ಮತ್ತು ಕೃಷಿ, ಉಪಕರಣಗಳನ್ನು ತಯಾರಿಸುವುದು, ಇನ್ನಿತರ ಕೆಲಸಗಳಿಗೆಲ್ಲಾ ಒಂದು ಜನಸಮುದಾಯವಿದ್ದರೆ ಒಳಿತೆಂದು ಭಾವಿಸಿ ಒಂದು ವರ್ಗವನ್ನು (ಶೂದ್ರ) ಅವರು ರೂಪಿಸಿದರು. ಆಗ ಲಿಪಿಯಿರಲಿಲ್ಲ. ವೇದಗಳನ್ನು ಸರಿಯಾಗಿ ಉಚ್ಚರಿಸಲು, ಅವುಗಳನ್ನು ದೀರ್ಘಕಾಲ ಅಭ್ಯಾಸ ಮಾಡಿ ಬಾಯಿಪಾಠ ಮಾಡುವ ಮೂಲಕ ಉಳಿಸಬೇಕಾಗುತ್ತದೆಂದು ಮನಗಂಡು ಅದಕ್ಕೊಂದು ವರ್ಗವೇ ಅಗತ್ಯವೆಂದು ಬ್ರಾಹ್ಮಣ ವರ್ಗ ರಚಿತವಾಯಿತು. ಹಾಗೆಯೇ ಉಳಿದ ವರ್ಗಗಳು. ಆಗ ಅದು ಯಾರೊಬ್ಬರಿಗೋ ಮೀಸಲಾಗಿರಲಿಲ್ಲ. ಯಾರು ಬೇಕಾದರೂ ಆ ವರ್ಗವನ್ನು, ಅದರ ವೃತ್ತಿಯನ್ನು ಆರಿಸಿಕೊಳ್ಳಬಹುದಿತ್ತು.

ವೇದವ್ಯಾಸ ಹುಟ್ಟಿನಿಂದ ಬ್ರಾಹ್ಮಣನೇ ಅಲ್ಲ. ಅವನು 'ಬೋಯಿತಿಯ' ಮಗ. ಅಗಸ್ತ್ಯನೂ ಅಷ್ಟೇ, ಬ್ರಾಹ್ಮಣನಲ್ಲ. ಆದರೆ ಬ್ರಹ್ಮರ್ಷಿ ಎನಿಸಿಕೊಂಡ. ದ್ರೋಣ ಹುಟ್ಟಿನಿಂದ ಬ್ರಾಹ್ಮಣನಾದರೂ ವೃತ್ತಿಯಿಂದ ಕ್ಷತ್ರಿಯ. ವಿಶ್ವಾಮಿತ್ರ ಮೊದಲಿಗೆ ಕ್ಷತ್ರಿಯನಾಗಿದ್ದು ಆಮೇಲೆ ಬ್ರಾಹ್ಮಣನಾದ ಪ್ರಸಿದ್ಧ ಕಥೆ ಗೊತ್ತೇ ಇದೆ. ನಿರಂತರ 12 ವರ್ಷಗಳ ಕಾಲ ಬ್ರಹ್ಮಚರ್ಯಾಶ್ರಮದಲ್ಲಿ ಗುರುಕುಲ ವಾಸದಲ್ಲಿದ್ದುಕೊಂಡು ವೇದಾಭ್ಯಾಸ ಮಾಡಬೇಕಾಗುತ್ತಿತ್ತು. ಅದು ಕಷ್ಟಸಾಧ್ಯವಾದ್ದರಿಂದ ಅದನ್ನು ಆರಿಸಿಕೊಂಡು ಹೋದವರ ಸಂಖ್ಯೆ ಕಡಿಮೆಯೇ. ಪ್ರಖ್ಯಾತ ಕಮ್ಯುನಿಸ್ಟ್ ಇ.ಎಂ.ಎಸ್. ನಂಬೂದಿರಿಪಾಡ್ ಅವರು ಹಾಗೆ ಹನ್ನೆರಡು ವರ್ಷ ವೇದಾಭ್ಯಾಸ ಮಾಡಿ ಕೊನೆಗೆ 'I wasted my twelve precious years' ಎಂದು ಹೇಳಿದರು. ಅವರಿಗೆ ಈಗ ಅನ್ನಿಸಿದ ಹಾಗೆಯೇ ಇನ್ನಿತರ ಸಹಸ್ರಾರು ಜನಸಮುದಾಯಕ್ಕೆ ಅಂದೇ ಅದು ವ್ಯರ್ಥ ಅನಿಸಿರಬೇಕು. ಅವರಾರೂ ಬ್ರಾಹ್ಮಣ್ಯವನ್ನು ವರಿಸಲಿಲ್ಲ; ಬ್ರಾಹ್ಮಣರಾಗಲಿಲ್ಲ. ಆದರೆ ಮುಂದೆ ಈ ವರ್ಣಗಳೆಲ್ಲವೂ ಜಾತಿಗಳಾಗಿ ಪರಿಣಮಿಸಿ, ಆಯ್ಕೆ ಹೋಗಿ ಹುಟ್ಟಿನಿಂದಲೇ ನಿರ್ಧರಿತವಾಗುವ ಕಾಲ ಬಂದಮೇಲೆ ಜಾತಿ ಜಾತಿಗಳಲ್ಲಿ ಮೇಲು ಕೀಳು ಭಾವನೆ, ಮಡಿ ಮೈಲಿಗೆ ಭಾವನೆ ಶುರುವಾಯಿತು. ಅದಕ್ಕೆ ಬ್ರಾಹ್ಮಣನೊಬ್ಬನೇ ಕಾರಣನಲ್ಲ. ಪ್ರತಿಯೊಂದು ಜಾತಿಯೂ ತಾನು 'ಆ' ಇನ್ನೊಂದು ಜಾತಿಗಿಂತ ಶ್ರೇಷ್ಠ ಎಂದು ತಿಳಿಯುವುದು ಇಂದಿಗೂ ಇದ್ದೇ ಇದೆ. ಇದು ಬರೀ ಬ್ರಾಹ್ಮಣರ ಚಾಳಿಯೇನಲ್ಲ. ಹಾಗೆ ಬದಲಾದ ಕಾಲದಲ್ಲಿ ಬ್ರಾಹ್ಮಣನೆಂದರೆ ತನ್ನ ಹುಟ್ಟಿನ ಕಾರಣಕ್ಕಾಗಿಯೇ ಶ್ರೇಷ್ಠನೆನಿಸಿಕೊಳ್ಳುವ, ಇನ್ಯಾರೋ ಹುಟ್ಟಿನ ಕಾರಣಕ್ಕಾಗಿಯೇ ಕೀಳೆನಿಸಿಕೊಳ್ಳುವ ಕಾಲವೂ ಬಂದು ಸ್ಥಿರವಾದದ್ದು ಈಗ ಇತಿಹಾಸ.

ಮೊನ್ನೆ ಬ್ರಾಹ್ಮಣ್ಯದ ಬಗ್ಗೆ ಹೇಳಿದವರು ಮತ್ತು ಬರೆದವರೆಲ್ಲರೂ 'ಬ್ರಾಹ್ಮಣ' ಎಂದರೆ, 'ಬ್ರಾಹ್ಮಣಿಕೆ' ಎಂದರೆ ಹುಟ್ಟಿನ ಕಾರಣಕ್ಕಾಗಿಯೇ ತಮ್ಮನ್ನು ಶ್ರೇಷ್ಠರೆಂದು ತಿಳಿಯುವುದು, ಮಡಿಮೈಲಿಗೆಯ ಆಚರಣೆಗಳಿಂದ ಇತರೆ ಬೃಹತ್ ಜನಸಮುದಾಯದಿಂದ ತಮ್ಮನ್ನು ಪ್ರತ್ಯೇಕಿಸಿಕೊಳ್ಳುವುದು ಎಂಬ ಅರ್ಥದಲ್ಲಿಯೇ ಹೇಳಿದ್ದಾರೆಂದೇ ತಿಳಿಯುತ್ತೇನೆ. ಅದೇನೂ ಸುಳ್ಳಲ್ಲವಲ್ಲ. ಇದಕ್ಕೆ ಅಪವಾದಗಳಿರುವುದು ಬೇರೆ ಮಾತು. ಈ ಅರ್ಥದಲ್ಲೇ ತೀರ ತಳ ಸಮುದಾಯದಲ್ಲಿ ಹುಟ್ಟಿದರೂ ಸರ್ಕಾರಿ ಸವಲತ್ತುಗಳನ್ನು ಪಡೆದು ಉತ್ತಮ ವಿದ್ಯಾಭ್ಯಾಸ ಮಾಡಿ ಉನ್ನತ ಹುದ್ದೆಗಳಿಗೆ ಹೋಗಿ ಆ ತಳ ಸಮುದಾಯದಿಂದ ತಾವು ವಿವಿಕ್ತವಾಗಿದ್ದುಕೊಂಡು, ಅವರಿಂದ ಪ್ರತ್ಯೇಕಿಸಿಕೊಳ್ಳುವವರನ್ನು 'ನವಬ್ರಾಹ್ಮಣ'ರೆಂದು ಕರೆಯುವುದೂ ಆ ಅರ್ಥದಲ್ಲೇ. ವೇದಗಳ ಕಾಲದ ಬ್ರಾಹ್ಮಣ್ಯವನ್ನು ಈಗಿನ ಬ್ರಾಹ್ಮಣರಿಗೆ ಆರೋಪಿಸುವುದು ಸೂಕ್ತವಲ್ಲ.

ಹಿಂದಿನವರು ಮಾಡಿದ್ದು ಸರಿಯಿಲ್ಲ ಎಂದು ಹೇಳುವ ನಾವು ಈಗ ತಾನೆ ಉತ್ತಮವಾದದ್ದೇನು ಮಾಡಿದ್ದೇವೆ? ಮಾಡುತ್ತಿದ್ದೇವೆ? ಜಾತಿಗಳು ಬೇರೆ ಬೇರೆಯಾಗಿದ್ದರೂ ಹಳ್ಳಿಗಳಲ್ಲಿ ನಮ್ಮ ಜನಸಮುದಾಯದ ನಡುವೆ ಸಾಮರಸ್ಯಕ್ಕೇನೂ ಕೊರತೆ ಇರಲಿಲ್ಲ. ಅಲ್ಪಸಂಖ್ಯಾತರ ವಿಷಯಕ್ಕೂ ದ್ವೇಷಭಾವನೆ ಖಂಡಿತ ಇರಲಿಲ್ಲ. ಆದರೆ ಆದದ್ದೇನು? ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಇತಿಹಾಸವೆಂದರೇನೇ ವೋಟಿಗಾಗಿ ನಮ್ಮ ದೇಶದಲ್ಲಿ ಮೊದಲಿನಿಂದಲೂ ಇದ್ದ ಜಾತಿಗಳ ಬೇರು ಬುಡಗಳನ್ನು ಇನ್ನಷ್ಟು ಗಟ್ಟಿಗೊಳಿಸುತ್ತ ಹೋದದ್ದು ಮತ್ತು ಜಾತ್ಯತೀತತೆಯ ಹೆಸರಿನಲ್ಲಿ ಅಲ್ಪಸಂಖ್ಯಾತರನ್ನು ತುಷ್ಟೀಕರಿಸುವ ಮೂಲಕ ಕೋಮುಭಾವನೆಯನ್ನು ಇನ್ನಷ್ಟು ದೃಢಗೊಳಿಸುತ್ತ ಕೋಮುದ್ವೇಷವನ್ನಾಗಿ ಪರಿವರ್ತಿಸಿದ್ದು ಎನ್ನುವ ಮಟ್ಟಿಗೆ ಆದದ್ದನ್ನು ದುರಂತವೆನ್ನದೆ ವಿಧಿಯಿಲ್ಲ.

ವಾಚಕರ ವಾಣಿ

ಪಠ್ಯಪುಸ್ತಕವನ್ನಾದರೂ ಒದಗಿಸಿ

ಕೊರೊನಾ ಎರಡನೇ ಅಲೆಯ ತೀವ್ರತೆ ಕಡಿಮೆಯಾಗುತ್ತಾ ಬಂದಂತೆ ಶಾಲೆಗಳು ಚಟುವಟಿಕೆಯನ್ನು ಪ್ರಾರಂಭಿಸಿವೆ. ಶಿಕ್ಷಕರು ಶಾಲೆಗಳ ಕಡೆಗೆ ಮುಖ ಮಾಡಿದ್ದಾರೆ. ಮೊಬೈಲ್ ಫೋನ್ ಮೂಲಕ ವಿದ್ಯಾರ್ಥಿಗಳಿಗೆ ಚಟುವಟಿಕೆಗಳನ್ನು ನೀಡುತ್ತಿದ್ದಾರೆ. ಆದರೆ ಅನೇಕ ವಿದ್ಯಾರ್ಥಿಗಳಿಗೆ ಆ್ಯಂಡ್ರಾಯ್ಡ್ ಮೊಬೈಲ್‌ಗಳ ಸೌಕರ್ಯವಿಲ್ಲ. ಇಂಥ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮನೆಯಲ್ಲಿ ಅಭ್ಯಾಸ ಮಾಡಲು ಪಠ್ಯಪುಸ್ತಕಗಳ ಅಗತ್ಯವಿದೆ. ಆದರೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಹಿಂದಿನ ವರ್ಷದ ಪುಸ್ತಕಗಳನ್ನು ಹಿಂತಿರುಗಿಸಿ, ಈ ವರ್ಷದ ಪುಸ್ತಕಗಳನ್ನು ಹಳೆ ವಿದ್ಯಾರ್ಥಿಗಳಿಂದ ಕೊಡಿಸುವುದಾಗಿ ಹೇಳುತ್ತಿದ್ದಾರೆ.

ಎಷ್ಟೋ ವಿದ್ಯಾರ್ಥಿಗಳು ತಮ್ಮ ಶಾಲೆಗಳನ್ನು ಬದಲಿಸಿದ್ದಾರೆ, ಮತ್ತಷ್ಟು ವಿದ್ಯಾರ್ಥಿಗಳು ಪುಸ್ತಕಗಳನ್ನೇ ಹಾಳು ಮಾಡಿಕೊಂಡಿದ್ದಾರೆ. ಇಂಥ ಸಂದರ್ಭದಲ್ಲಿ ಕನಿಷ್ಠ ಹೊಸ ಪಠ್ಯಪುಸ್ತಕಗಳನ್ನಾದರೂ ಸರ್ಕಾರವು ವಿದ್ಯಾರ್ಥಿಗಳಿಗೆ ಒದಗಿಸುವಂತೆ ಆಗಬೇಕು. ಇಲ್ಲದಿದ್ದರೆ ಈಗಾಗಲೇ ಕುಸಿದಿರುವ ವಿದ್ಯಾರ್ಥಿಗಳ ಕಲಿಕೆ ಮತ್ತಷ್ಟು ಕುಸಿಯಲು ಅವಕಾಶ ಆಗುತ್ತದೆ.

ಈ.ಬಸವರಾಜು, ಬೆಂಗಳೂರು

ಪರಿಸರ ಜಾಗೃತಿಗೆ ಸಿಗಲಿ ಬೆಂಬಲ

ಜನರಲ್ಲಿ ಇತ್ತೀಚೆಗೆ ಹಸಿರು ಪರಿಸರ ಜಾಗೃತಿ ಮೂಡುತ್ತಿರುವುದು ಸಂತೋಷದ ವಿಷಯ. ಜನರ ಜಾಗೃತಿಗೆ ಇನ್ನಷ್ಟು ಉತ್ತೇಜನ ಕೊಡಲು ಅರಣ್ಯ ಇಲಾಖೆ ಸಹಕರಿಸಬೇಕು. ಪ್ರತೀ ಐವತ್ತು ಕಿಲೊಮೀಟರ್ ವ್ಯಾಪ್ತಿಯಲ್ಲಿ ಸಸ್ಯ ನರ್ಸರಿಗಳನ್ನು ಸ್ಥಾಪಿಸಬೇಕು. ಇದರಿಂದ ಗ್ರಾಮೀಣ ಭಾಗದಲ್ಲಿ ಉದ್ಯೋಗ ಅವಕಾಶಗಳು ಹೆಚ್ಚಾಗುತ್ತವೆ ಮತ್ತು ಹಸಿರು ಕ್ರಾಂತಿಗೆ ಬೆಂಬಲ ಸಿಗುತ್ತದೆ. ಸುತ್ತಮುತ್ತಲಿನ ರೈತರು, ಪರಿಸರಪ್ರೇಮಿಗಳು, ಸಂಘ ಸಂಸ್ಥೆಗಳು ಮತ್ತು ಹಸಿರು ತೋಟಗಳನ್ನು ಮಾಡಲು ಇಚ್ಛಿಸುವವರು ಹತ್ತಿರದ ನರ್ಸರಿಗಳಿಗೆ ಬಂದು ಸಸಿಗಳನ್ನು ತೆಗೆದುಕೊಂಡು ಹೋಗಲು ಅನುಕೂಲವಾಗುತ್ತದೆ.

ಮಳೆಗಾಲ ಪ್ರಾರಂಭವಾಗುತ್ತಿದ್ದಂತೆ ಜೂನ್, ಜುಲೈನಲ್ಲಿ ವಿವಿಧ ರೀತಿಯ ಸಸಿಗಳನ್ನು ನರ್ಸರಿಗಳಲ್ಲಿ ಕೇಳಲು ಹೋದವರಿಗೆ 'ಖಾಲಿಯಾಗಿವೆ' ಎನ್ನುವ ಉತ್ತರ ಬರುತ್ತದೆ. ಇಲಾಖೆ ಪ್ರತಿವರ್ಷವೂ ಬೇಡಿಕೆಗೆ ತಕ್ಕಂತೆ ಸಸಿಗಳನ್ನು ಒದಗಿಸುವ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು.

ಗೋಡೆ ಶಿವರಾಜ್, ಸಿರಿಗೇರಿ

ಪ್ರೋತ್ಸಾಹಧನ: ಇರಲಿ ಸಮಾನತೆ

ಸಮಾಜದಲ್ಲಿ ಅತ್ಯಂತ ದೈನ್ಯ ಸ್ಥಿತಿಯಲ್ಲಿ ಯಾವುದೇ ಸಮುದಾಯಗಳಿದ್ದರೂ ಅವುಗಳನ್ನು ಮೇಲೆತ್ತಬೇಕಾದದ್ದು ಸರ್ಕಾರದ ಆದ್ಯ ಕರ್ತವ್ಯ. ಅದರಂತೆ, ಅಂಗವೈಕಲ್ಯ ಇರುವವರನ್ನು ಇತರ ಸಾಮಾನ್ಯರು ಮದುವೆಯಾದರೆ ಅವರ ಹೆಸರಿನಲ್ಲಿ ಜಂಟಿಯಾಗಿ ₹ 50 ಸಾವಿರದ ನಿಶ್ಚಿತ ಠೇವಣಿಯನ್ನು ಬ್ಯಾಂಕ್‌ನಲ್ಲಿ ಇಡಲಾಗುತ್ತದೆ. ಈ ಸೌಲಭ್ಯವನ್ನು ಸುಮಾರು ವರ್ಷಗಳಿಂದ ನೀಡಲಾಗುತ್ತಿದೆ. ಆದರೆ ಪರಿಶಿಷ್ಟ ಜಾತಿ, ಪಂಗಡದವರು ಇತರ ಸಾಮಾನ್ಯ ವರ್ಗದವರೊಡನೆ ವೈವಾಹಿಕ ಸಂಬಂಧ ಹೊಂದಿದರೆ ಅವರಿಗೆ ₹ 2.5 ಲಕ್ಷದಿಂದ 3 ಲಕ್ಷದಷ್ಟು ಪ್ರೋತ್ಸಾಹಧನ ನೀಡಲಾಗುತ್ತದೆ. ಈ ನೀತಿಯು ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ ಹಚ್ಚುವ ಧೋರಣೆಯಾಗಿದೆ. ಅಂಗವೈಕಲ್ಯ ಇರುವವರನ್ನು ಸ್ವತಃ ಅವರ ಸಮುದಾಯದಲ್ಲೇ ಮದುವೆಯಾಗಲು ನಿರಾಕರಿಸುವ ಸ್ಥಿತಿ ಇರುವುದರಿಂದ ಅವರ ಕಷ್ಟವನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಕೇವಲ ₹ 50 ಸಾವಿರದ ನಿಶ್ಚಿತ ಠೇವಣಿಯಲ್ಲಿ ಅಂಗವಿಕಲರ ವೈವಾಹಿಕ ಜೀವನ ಸುಗಮವಾಗಿ ಮುಂದುವರಿಯಬಹುದು ಎಂಬ ಕಲ್ಪನೆ ಹಾಸ್ಯಾಸ್ಪದವಾಗಿದೆ. ಪರಿಶಿಷ್ಟ ಸಮುದಾಯಕ್ಕೆ ಸಿಗುವ ಎಲ್ಲಾ ಸೌಲಭ್ಯಗಳನ್ನು ಅಂಗವಿಕಲರಿಗೂ ವಿಸ್ತರಿಸುವ ಮೂಲಕ ಸರ್ಕಾರವು ಸಮಾನತೆಯ ಮೌಲ್ಯವನ್ನು ಎತ್ತಿಹಿಡಿಯಬೇಕಾಗಿದೆ.

ಕೊಡಕ್ಕಲ್ ಶಿವಪ್ರಸಾದ್, ಶಿವಮೊಗ್ಗ

ವಿತ್ತೀಯ ಕೊರತೆ ತಗ್ಗಿಸಲು ಗಮನ ಕೊಡಿ

ಸರ್ಕಾರದ ಒಟ್ಟು ಆದಾಯಕ್ಕಿಂತ ವೆಚ್ಚದ ಪ್ರಮಾಣ ಹೆಚ್ಚಿದಾಗ ವಿತ್ತೀಯ ಕೊರತೆ ಸಂಭವಿಸುತ್ತದೆ. ಕೋವಿಡ್‌ನಿಂದಾಗಿ ಸಂಕಷ್ಟದಲ್ಲಿ ಸಿಲುಕಿರುವ ಅರ್ಥವ್ಯವಸ್ಥೆಯ ಪುನಶ್ಚೇತನಕ್ಕೆ ಕೇಂದ್ರ ಸರ್ಕಾರ ಘೋಷಿಸಿದ ಆರ್ಥಿಕ ಪ್ಯಾಕೇಜ್‌ನ ಒಟ್ಟು ಮೊತ್ತವು ₹ 6.29 ಲಕ್ಷ ಕೋಟಿ ಆಗಿದೆ. ಕೋವಿಡ್ ಬಿಕ್ಕಟ್ಟಿನಿಂದಾಗಿ ಸರ್ಕಾರಕ್ಕೆ ಬರುತ್ತಿರುವ ವರಮಾನದ ಪ್ರಮಾಣ ಕಡಿಮೆ ಇದ್ದು, ಸರ್ಕಾರದ ಅಭಿವೃದ್ಧಿಯೇತರ ವೆಚ್ಚ ಹೆಚ್ಚುತ್ತಿದೆ. ಕಳೆದ ವರ್ಷ ವಿತ್ತೀಯ ಕೊರತೆಯು ಶೇ 9.8ರಷ್ಟು ಆಗಿತ್ತು. 2021-22ನೇ ಹಣಕಾಸು ವರ್ಷದಲ್ಲಿ ವಿತ್ತೀಯ ಕೊರತೆಯು ಒಟ್ಟು ಜಿಡಿಪಿಯ ಶೇ 6.8ರಷ್ಟು ಇರುತ್ತದೆ ಎಂದು ಅಂದಾಜು ಮಾಡಲಾಗಿತ್ತು. ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಸರ್ಕಾರದ ವೆಚ್ಚವು ಅಂದಾಜು ಮಾಡಿದ ವಿತ್ತೀಯ ಕೊರತೆಯನ್ನು ಹೆಚ್ಚಿಸಿದೆ.

ಸರ್ಕಾರದ ಸಾಲದ ಪ್ರಮಾಣ ಹೆಚ್ಚಿದಷ್ಟೂ ಭವಿಷ್ಯದಲ್ಲಿ ತೆರಿಗೆಯ ಪ್ರಮಾಣ ಹೆಚ್ಚುತ್ತದೆ. ಇದರಿಂದಾಗಿ ಅಂತಿಮ ತೆರಿಗೆಯ ಹೊರೆ ಬೀಳುವುದು ಗ್ರಾಹಕರ ಮೇಲೆ. ಹೀಗಾಗಿ ಸರ್ಕಾರವು ಉತ್ಪಾದನಾ ಚಟುವಟಿಕೆಗಳಿಗೆ ಸಹಾಯಕವಾಗುವ ರೀತಿಯಲ್ಲಿ, ಆರ್ಥಿಕತೆಯಲ್ಲಿ ಬೇಡಿಕೆಯನ್ನು ಹೆಚ್ಚಿಸುವ ರೀತಿಯಲ್ಲಿ ಅಭಿವೃದ್ಧಿ ವೆಚ್ಚವನ್ನು ಕೈಗೊಂಡು ವಿತ್ತೀಯ ಕೊರತೆಯನ್ನು ಕಡಿಮೆ ಮಾಡುವತ್ತ ಗಮನಹರಿಸಬೇಕಾಗಿದೆ.

ನಿರ್ಮಲ ನಾಗೇಶ್, ಮುರುಡೇಶ್ವರ

ತರಗತಿ ಕೋಣೆಯಲ್ಲಿ ಬೇಕು ಸಂಗೀತ ಆಲಿಕೆ ವ್ಯವಸ್ಥೆ

'ಶಿಕ್ಷಣ ಯಜ್ಞದಲ್ಲೊಂದು ಸಂಗೀತ ಲೋಕ' ಎಂಬ ಲೇಖನದಲ್ಲಿ (ಸಂಗತ, ಜೂನ್ 20) ಯೋಗಾನಂದ ಅವರು ಶಿಕ್ಷಣದಲ್ಲಿ ಸಂಗೀತದ ಮಹತ್ವವನ್ನು ತಿಳಿಸಿದ್ದಾರೆ. ಮಕ್ಕಳ ಭಾವೋಲ್ಲಾಸವನ್ನು ಇಮ್ಮಡಿಗೊಳಿಸಿ ಕಲಿಕೆಯಲ್ಲಿ ಅಂಕುರಿಸುವ ಶಕ್ತಿ ಸಂಗೀತಕ್ಕಿದೆ. ಭಾಷೆಯ ಉಚ್ಚಾರ, ಶಬ್ದಗಳ ಉತ್ಪತ್ತಿ, ಹಾಡು, ವಾಕ್ಯಗಳಿಗೆ ಭಾವ ತುಂಬಿ ತೋರಿಸುವುದು ಹೇಗೆಂಬುದನ್ನು ಸಂಗೀತ ಕಲಿಸುತ್ತದೆ. ಭಾಷೆಯ ಜೊತೆಗೆ ಕೋರ್ ವಿಷಯಗಳ ಬೋಧನೆಯ ಮಧ್ಯೆ ಸಂಗೀತ ಆಲಿಸುವಂಥ ವ್ಯವಸ್ಥೆ ತರಗತಿ ಕೋಣೆಯಲ್ಲಿರಬೇಕು. ಸಂಗೀತ, ನಾಟಕ, ಚಿತ್ರಕಲೆಯ ಪ್ರದರ್ಶನಗಳು ಶಾಲೆಯಲ್ಲಿ ಕೇವಲ ಕಾಟಾಚಾರದ ಪ್ರದರ್ಶನವಾಗಬಾರದು. ಅದೊಂದು ಯಜ್ಞವಾಗಬೇಕು, ಬದ್ಧತೆಯಾಗಬೇಕು, ಫಲಪ್ರದವಾಗಬೇಕು. ಅದ್ಭುತ ಸಂಗೀತಗಾರ, ಕಲಾವಿದ, ಕ್ರೀಡಾಪಟು ದೇಶದ ಕೀರ್ತಿಯನ್ನು ಹೆಚ್ಚಿಸಬಲ್ಲರು. ಈ ಕೀರ್ತಿಯು ದೇಶದ ಆರ್ಥಿಕ, ರಾಜಕೀಯ ಪ್ರಗತಿಗಿಂತಲೂ ಹೆಚ್ಚು ಸಂತೃಪ್ತಿಯನ್ನು ಜನಮಾನಸಕ್ಕೆ ತಂದುಕೊಡಬಲ್ಲದು.

ಪ್ರಾಣೇಶ ಪೂಜಾರ್ ಗಿಣಗೇರಾ, ಕೊಪ್ಪಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಗಡಿನಾಡು ಕಾಸರಗೋಡಿನಲ್ಲಿ ಕನ್ನಡಕ್ಕೆ ಕುತ್ತು

ಕಾಸರಗೋಡು – ಮಂಗಳೂರು ಹೆದ್ದಾರಿಯಲ್ಲಿ ಮಂಜೇಶ್ವರದ ಹೆಸರನ್ನು ಮಂಜೇಶ್ವರಂ ಎಂದು ಬದಲಿಸಿರುವುದು

• ಚಿದಂಬರ ಪ್ರಸಾದ, ಉದಯ ಯು.

'ಹೆಸರಿನಲ್ಲೇನಿದೆ ಬಿಡಿ...' ಎಂದು ಕೆಲವೊಮ್ಮೆ ಲಘುವಾಗಿ ಹೇಳಿದರೂ ನಮ್ಮ ಹೆಸರನ್ನು ಯಾರಾದರೂ ತಪ್ಪಾಗಿ ಉಚ್ಚರಿಸಿದರೆ ಅದನ್ನು ತಿದ್ದದೆ ಬಿಡುವುದಿಲ್ಲ. ಅಂದಮೇಲೆ, ಹೆಸರಲ್ಲಿ ಏನೋ ಇದೆ ಎಂಬುದು ಖಚಿತ. ನಮ್ಮಲ್ಲಿ ಸರ್ಕಾರಗಳು ಬದಲಾದಾಗ ಕೆಲವು ನಗರಗಳ, ಸಂಸ್ಥೆಗಳ ಹೆಸರು ಬದಲಾಗಿರುವುದು, ಅದರ ಪರ-ವಿರುದ್ಧ ತೀವ್ರ ಸ್ವರೂಪದ ಚರ್ಚೆಗಳು ನಡೆದಿರುವ ಉದಾಹರಣೆಗಳು ಸಾಕಷ್ಟಿವೆ. ಹೆಸರಿನೊಂದಿಗೆ ಬೆಸೆದುಕೊಂಡಿರುವ ಜನರ ಭಾವನೆಗಳು, ಸಾಂಸ್ಕೃತಿಕ ಹಿನ್ನೆಲೆಗಳು ಇದಕ್ಕೆ ಕಾರಣ ಎಂದು ತಜ್ಞರು ಹೇಳುತ್ತಾರೆ.

ಆ ಕಾರಣಕ್ಕೇ ನಮ್ಮದಲ್ಲದ ಯಾವುದೋ ಹೆಸರನ್ನು ನಮ್ಮ ಮೇಲೆ ಹೇರಲು ಬಂದಾಗ ವಿರೋಧ ವ್ಯಕ್ತವಾಗುತ್ತದೆ. ಒಂದು ಕಾಲದಲ್ಲಿ ಅಚ್ಚ ಕನ್ನಡ ನಾಡಾಗಿದ್ದ, ಭಾಷಾವಾರು ರಾಜ್ಯ ವಿಂಗಡಣೆಯ ಸಂದರ್ಭದಲ್ಲಿ ಕೇರಳದ ಪಾಲಾದ ಕಾಸರಗೋಡು ಜಿಲ್ಲೆಯಲ್ಲಿ ಈಗ 'ಹೆಸರಿನ ದಬ್ಬಾಳಿಕೆ' ನಡೆಯುತ್ತಿದೆ ಎಂಬ ಚರ್ಚೆ ಕಳೆದ ಕೆಲವು ದಿನಗಳಿಂದ ನಡೆಯುತ್ತಿದೆ.

ಕೇರಳದ ಉತ್ತರ ತುದಿಯ ಜಿಲ್ಲೆಯಾದ ಕಾಸರಗೋಡಿಗೆ ಹೆಚ್ಚು ನಂಟು ಇರುವುದು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಮಂಗಳೂರಿನ ಜತೆಗೆ. ಶಿಕ್ಷಣ, ವ್ಯಾಪಾರ, ಆರೋಗ್ಯ ಸೇವೆಗಳು... ಹೀಗೆ ಕಾಸರಗೋಡಿನ ಹೆಚ್ಚಿನ ಜನರು ಅವಲಂಬಿಸಿರುವುದು ಮಂಗಳೂರನ್ನೇ. ಸಂಸ್ಕೃತಿ ಮತ್ತು ಭಾಷೆಯ ಕೊಂಡಿಯೊಂದು ಐದು ದಶಕಕ್ಕೂ ಹೆಚ್ಚು ಕಾಲದಿಂದ ಈ ಸಂಬಂಧವನ್ನು ನಿರಂತರವಾಗಿ ಕಾಪಾಡಿಕೊಂಡು ಬಂದಿದೆ. ಆದ್ದರಿಂದ ಗಡಿಭಾಗದ ಅನೇಕ ಊರುಗಳ ಹೆಸರುಗಳು ಕನ್ನಡದವುಗಳೇ ಆಗಿವೆ. ಆದರೆ, ಈಗ ಕೇರಳ ಸರ್ಕಾರವು ಅವುಗಳನ್ನು ಬದಲಿಸುವ ಹುನ್ನಾರ ನಡೆಸುತ್ತಿದೆ ಎಂಬುದು ಚರ್ಚೆಯ ವಿಚಾರವಾಗಿದೆ.

ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು, ಕರ್ನಾಟಕದ ಅನೇಕ ಜನಪ್ರತಿನಿಧಿಗಳು ಸಾಮಾಜಿಕ ಜಾಲತಾಣಗಳಲ್ಲಿ ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ರಾಜ್ಯದ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಗಡಿಜಿಲ್ಲೆಯಲ್ಲಿರುವ ಕನ್ನಡದ ಹೆಸರುಗಳನ್ನು ಬದಲಿಸದಂತೆ ಕೇರಳ ಮುಖ್ಯಮಂತ್ರಿಗೆ ಮನವಿ ಮಾಡಿದ್ದಾರೆ. ಅತ್ತ, ಹೆಸರುಗಳನ್ನು ಬದಲಿಸುವ ವಿಚಾರದಲ್ಲಿ ಯಾವುದೇ ಚರ್ಚೆ ಆಗಿಲ್ಲ. ಅಂಥ ಪ್ರಸ್ತಾವವೂ ಸರ್ಕಾರದ ಮುಂದೆ ಇಲ್ಲ ಎಂದು ಕೇರಳದ ಆಡಳಿತ ಪಕ್ಷದ ಪ್ರತಿನಿಧಿಗಳು ಹೇಳಿದ್ದಾರೆ.

ಕೇರಳದ ಉತ್ತರ ತುದಿಯ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಶಾಸಕ ಎ.ಕೆ.ಎಂ.ಅಶ್ರಫ್ ಅವರು ಈ ಬಗ್ಗೆ ಸ್ಪಷ್ಟನೆ ನೀಡಿ, 'ಯಾವ ಹೆಸರನ್ನೂ ಬದಲಿಸುತ್ತಿಲ್ಲ' ಎಂದಿದ್ದಾರೆ. ಆದರೆ, ರಾಷ್ಟ್ರೀಯ ಹೆದ್ದಾರಿಯಲ್ಲಿ ಅಳವಡಿಸಿರುವ ಫಲಕದಲ್ಲಿ ಅವರದೇ ಊರಿನ ಹೆಸರನ್ನು, ಮಂಜೇಶ್ವರ ಎನ್ನುವುದರ ಬದಲಾಗಿ 'ಮಂಜೇಶ್ವರಂ' ಎಂದು ಬರೆಯಲಾಗಿದೆ. ವಿಧಾನಸಭೆಯಲ್ಲಿ ಕನ್ನಡದಲ್ಲೇ ಪ್ರಮಾಣವಚನ ಸ್ವೀಕರಿಸುವ ಮೂಲಕ ಹಾಗೂ ಕನ್ನಡಲ್ಲೇ ಮಾತನಾಡುವ ಮೂಲಕ ಅಶ್ರಫ್ ಅವರು ತಮ್ಮ ಕನ್ನಡ ಭಾಷಾ ಪ್ರೀತಿಯನ್ನು ಪ್ರದರ್ಶಿಸಿದ್ದರು. ಊರಿನ ಹೆಸರುಗಳ ಮೂಲ ಸ್ವರೂಪವನ್ನು ಉಳಿಸಿಕೊಳ್ಳುವ ಹೋರಾಟದಲ್ಲೂ ಅವರು ಜತೆಯಾಗಬೇಕು ಎಂದು ಕಾಸರಗೋಡಿನ ಕನ್ನಡಿಗರು ಬಯಸುತ್ತಾರೆ.

ಎ.ಕೆ.ಎಂ.ಅಶ್ರಫ್

ಹಿಂಬಾಗಿಲಿನಿಂದ ಬದಲಾವಣೆ

ಯಾವುದೇ ಊರಿನ ಹೆಸರನ್ನು ಬದಲಿಸಬೇಕಾದರೆ ಅದಕ್ಕೆ ಒಂದು ದೀರ್ಘ ಪ್ರಕ್ರಿಯೆ ಇದೆ. ಅದನ್ನು ಪಾಲಿಸಿದರೆ ವಿರೋಧ ಬರಬಹುದೆಂಬ ಕಾರಣಕ್ಕೆ ಕೇರಳ ಸರ್ಕಾರವು ಹಿಂಬಾಗಿಲಿನ ಮೂಲಕ ಹೆಸರು ಬದಲಾವಣೆ ನಡೆಸುತ್ತಿದೆ ಎಂದು ಸ್ಥಳೀಯರು ಆರೋಪಿಸುತ್ತಾರೆ.

ಸರ್ಕಾರಿ ದಾಖಲೆಗಳಲ್ಲಿ ಊರ ಹೆಸರುಗಳನ್ನು ಮಲಯಾಳೀಕರಣ ಮಾಡಿಯೇ ಬಳಸಲಾಗುತ್ತಿದೆ. ಸರ್ಕಾರಿ ಕಚೇರಿಗಳ ನಾಮ ಫಲಕಗಳಲ್ಲೂ ಮಲಯಾಳೀಕರಣಗೊಂಡ ಹೆಸರನ್ನು ಬಳಸಲಾಗುತ್ತದೆ. ಇದು ಯಾರ ಗಮನಕ್ಕೂ ಬಾರದಂತೆ ಆಗುವ ಬದಲಾವಣೆಯಾಗಿರುವುದರಿಂದ ಜನರೂ ತಲೆಕೆಡಿಸಿಕೊಳ್ಳುವುದಿಲ್ಲ. ಕಾಲಾಂತರದಲ್ಲಿ ಹೊಸ ಹೆಸರೇ ಉಳಿದುಕೊಂಡು ಹಳೆಯದು ಮಾಯವಾಗುತ್ತದೆ. ಅಲ್ಲಿಗೆ ಕನ್ನಡದ ನೆಲದ ಮಲಯಾಳೀಕರಣ ಪೂರ್ತಿಯಾಗುತ್ತದೆ ಎಂಬುದು ಸ್ಥಳೀಯರ ಆತಂಕ.

ಮಲಯಾಳೀಕರಣಗೊಂಡ ಹೆಸರುಗಳು

ಕನ್ನಡ ಹೆಸರು	ಮಲಯಾಳೀಕರಣಗೊಂಡ ಹೆಸರು
ಮಧೂರು	ಮಧೂರಂ
ಮಲ್ಲ	ಮಲ್ಲಂ
ಕಾರಡ್ಕ	ಕಾಡಗಂ
ಬೇಡಡ್ಕ	ಬೇಡಗಂ
ಕುಂಬಳೆ	ಕುಂಬ್ಲಾ
ಪಿಲಿಕುಂಜೆ	ಪುಲಿಕುನ್ನು
ಆನೆಬಾಗಿಲು	ಆನವಾದುಕ್ಕಲ್
ಹೊಸದುರ್ಗ	ಪುದಿಯಕೋಟ
ಸಸಿಹಿತ್ಲು	ತೈವಳಪ್ಪು
ಮಹಾಸತಿಗುಂಡಿ	ಮಾಸ್ತಿಕುಂಡು

(ಮಾಹಿತಿ: ಗಡಿ ಅಭಿವೃದ್ಧಿ ಪ್ರಾಧಿಕಾರ)

ಕನ್ನಡತನಕ್ಕೂ ಪೆಟ್ಟು

ಕನ್ನಡ ಹೆರುಗಳಷ್ಟೇ ಅಲ್ಲ, ಕನ್ನಡ ಭಾಷೆಯ ಮೇಲೂ ಸರ್ಕಾರ ದಾಳಿ ನಡೆಸುತ್ತಿದೆ ಎಂಬುದು ಕಾಸರಗೋಡಿನ ಕನ್ನಡಿಗರ ಹಳೆಯ ಆರೋಪವಾಗಿದೆ.

ಒಂದೆರಡು ದಶಕಗಳ ಹಿಂದಿನವರೆಗೂ ಜಿಲ್ಲೆಯಲ್ಲಿ ಸರ್ಕಾರಿ ಕಚೇರಿಗಳಿಗೆ ಕನ್ನಡದಲ್ಲೇ ಅರ್ಜಿಗಳನ್ನು ಬರೆದು ಸಲ್ಲಿಸಬಹುದಾಗಿತ್ತು. ಕನ್ನಡ ಬಲ್ಲ ಸಿಬ್ಬಂದಿ, ಅಧಿಕಾರಿಗಳು ಕಚೇರಿಯಲ್ಲಿ ಇರುತ್ತಿದ್ದರು. ಇಂದು ಆ ಪರಿಸ್ಥಿತಿ ಇಲ್ಲ. ಕನ್ನಡದ ಜ್ಞಾನವಿಲ್ಲದ ಸಿಬ್ಬಂದಿಯನ್ನು ಜಿಲ್ಲೆಗೆ ನೇಮಕ ಮಾಡಲಾಗುತ್ತದೆ. ಮಲಯಾಳ ಅಥವಾ ಇಂಗ್ಲಿಷ್‌ನಲ್ಲೇ ಅರ್ಜಿಗಳನ್ನು ಕೊಡಿ ಎಂದು ಅವರು ಒತ್ತಾಯಿಸುತ್ತಾರೆ. ಕನ್ನಡ ಮಾಧ್ಯಮ ಶಾಲೆಗಳಿಗೂ ಮಲಯಾಳಿ ಶಿಕ್ಷಕರನ್ನು ನೇಮಿಸಿದ ಉದಾಹರಣೆಗಳಿವೆ. ಆ ಬಗ್ಗೆ ಇತ್ತೀಚೆಗೆ ಪ್ರತಿಭಟನೆಗಳೂ ನಡೆದಿದ್ದವು. ಇವೆಲ್ಲವೂ ಕನ್ನಡದ ಮೇಲೆ ನಡೆಯುವ ದಬ್ಬಾಳಿಕೆಯೇ ಎಂದು ಸ್ಥಳೀಯರು ಹೇಳುತ್ತಾರೆ.

ಕನ್ನಡ ಮಾಧ್ಯಮದಲ್ಲಿ ಕಲಿತರೆ ಏನೂ ಉಪಯೋಗವಾಗುವುದಿಲ್ಲ ಎಂಬುದು ಈ ಭಾಗದ ಜನರ ಇನ್ನೊಂದು ಅಳಲು. ಕೇರಳ ಸರ್ಕಾರ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಲಯಾಳ ಅಥವಾ ಇಂಗ್ಲಿಷ್‌ನಲ್ಲಿ ಮಾತ್ರ ಉತ್ತರ ಬರೆಯಲು ಅವಕಾಶ ಇರುತ್ತದೆ. ಕನ್ನಡ ಮಾಧ್ಯಮದಲ್ಲಿ ಕಲಿತರೆ ಸರ್ಕಾರಿ ಉದ್ಯೋಗ ಪಡೆಯುವುದು ಕಷ್ಟವಾಗುತ್ತದೆ. ಮಕ್ಕಳಿಗೆ ಕರ್ನಾಟಕದಲ್ಲಾದರೂ ಉದ್ಯೋಗ ಲಭಿಸುತ್ತದೆ ಎಂಬ ಖಾತರಿ ಇಲ್ಲ. ಆದ್ದರಿಂದ ಮಲಯಾಳ ಭಾಷೆಯನ್ನೇ ಕಲಿಯಲಿ ಎಂದು ಪಾಲಕರು ಸಹ ಬಯಸುವಂತಾಗಿದೆ. ಪರಿಣಾಮ ಕನ್ನಡ ಮಾಧ್ಯಮ ಶಾಲೆಗಳು ನಿಧಾನಕ್ಕೆ ಆಂಗ್ಲಮಾಧ್ಯಮಗಳಾಗಿ ಪರಿವರ್ತನೆಯಾಗುತ್ತಿವೆ. ಅವುಗಳಲ್ಲಿ ಮಲಯಾಳ ಅನ್ನೂ ಒಂದು ಭಾಷೆಯಾಗಿ ಕಲಿಸಲಾಗುತ್ತಿದೆ.

ಹೋರಾಟಗಾರರು ಕನ್ನಡಿಗರಲ್ಲ

ಕಾಸರಗೋಡಿನಲ್ಲಿ ದಶಕಗಳಿಂದ ನಡೆಯುತ್ತಿರುವ ಕನ್ನಡ ಪರ ಹೋರಾಟವು ಇತರ ಭಾಗಗಳ ಹೋರಾಟಕ್ಕಿಂತ ಭಿನ್ನವಾದುದು. ಯಾಕೆಂದರೆ ಅಲ್ಲಿ ಕನ್ನಡ ಭಾಷೆ- ಸಂಸ್ಕೃತಿಯ ಉಳಿವಿಗಾಗಿ ಹೋರಾಟ ಮಾಡುತ್ತಿರುವ ಬಹುತೇಕರಿಗೆ ಕನ್ನಡ ಮಾತೃಭಾಷೆಯಲ್ಲ.

ವಿವಿಧ ಸಮುದಾಯ, ಜಾತಿ- ಧರ್ಮಗಳ ಜನರು ಇಲ್ಲಿ ಒಟ್ಟಾಗಿ ಕನ್ನಡಪರ ಹೋರಾಟ ನಡೆಸುತ್ತಾ ಬಂದಿದ್ದಾರೆ. ಮಲಯಾಳದ ಜತೆಗೆ ತುಳು, ಕೊಂಕಣಿ, ಹವ್ಯಕ, ಕರಾಡ, ಮರಾಠಿ ಮುಂತಾದ ಅನೇಕ ಭಾಷಿಕರು ಇಲ್ಲಿ ಕನ್ನಡದ ಪರ ಧ್ವನಿ ಎತ್ತಿದ್ದಾರೆ. ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸಬೇಕೆಂಬ ಹೋರಾಟದ ಧ್ವಜ ಹಿಡಿದಿದ್ದ ಕಯ್ಯಾರ ಕಿಞ್ಞಣ್ಣ ರೈ ಅವರ ಮಾತೃಭಾಷೆ ತುಳು. ಆದ್ದರಿಂದ ದಶಕಗಳಿಂದ ಇಲ್ಲಿ ಕನ್ನಡಪರ ಚಳವಳಿಯನ್ನು ಜೀವಂತವಾಗಿಟ್ಟವರು ಭಾಷೆ ಮತ್ತು ಸಂಸ್ಕೃತಿಯ ಮೇಲಿನ ಪಕ್ಕಾ ಅಭಿಮಾನಿಗಳೇ ಆಗಿದ್ದಾರೆ ಎಂಬುದು ಸ್ಪಷ್ಟ. ಇವರು 'ಒಳನಾಡು' ಕರ್ನಾಟಕದಿಂದಲೂ ಈ ಹೋರಾಟಕ್ಕೆ ಬೆಂಬಲವನ್ನು ನಿರೀಕ್ಷಿಸುವುದು ಸಹಜವಾಗಿದೆ.

ಹೋರಾಟಕ್ಕೆ ಸಂಪನ್ಮೂಲದ ಕೊರತೆ

ಕಾಸರಗೋಡಿನಲ್ಲಿ ಕನ್ನಡ ಪರ ಹೋರಾಟವು ಸಾಮಾಜಿಕ ಮಾಧ್ಯಮಕ್ಕೆ ಸೀಮಿತವಾಗುತ್ತಿದೆ. ಜನಬೆಂಬಲ ಮತ್ತು ಆರ್ಥಿಕ ಬಲ ಇಲ್ಲದೆ ಹೋರಾಟ ದುರ್ಬಲವಾಗುತ್ತಿದೆ ಎಂದು ಹಳೆಯ ಹೋರಾಟಗಾರರು ಹೇಳುತ್ತಿದ್ದಾರೆ.

ಮಲೆಯಾಳೀಕರಣ ವಿರುದ್ಧದ ಹೋರಾಟಕ್ಕೆ ಅತ್ತ ರಾಜಕೀಯ ಬಲವೂ ಇತ್ತ ಆರ್ಥಿಕ ಬಲವೂ ಇಲ್ಲದಂತಾಗಿದೆ. ಹೀಗಾಗಿ ಹೋರಾಟದ ಕಾವು, ಕೆಚ್ಚು ಮುಂದಿನ ಪೀಳಿಗೆಗೆ ಮುಂದುವರಿಯುವ ಲಕ್ಷಣ ಕಾಣಿಸುತ್ತಿಲ್ಲ ಎಂಬ ಆತಂಕ ಇಲ್ಲಿನ ಹಿರಿಯ ಹೋರಾಟಗಾರರ ಮಾತುಗಳಲ್ಲಿ ಕಾಣಿಸುತ್ತದೆ.

'ಇತ್ತೀಚಿನ ಕೆಲವು ವರ್ಷಗಳಿಂದ ಕನ್ನಡ ಶಾಲೆಗಳು ಕನ್ನಡ ಮಾಧ್ಯಮ ವಿಷಯಗಳಿಗೂ ಕನ್ನಡ ಅರಿಯದ ಮಲಯಾಳ ಶಿಕ್ಷಕರನ್ನು ನೇಮಿಸುವ ಕುತಂತ್ರ (ಉಪ್ಪಳ, ಬೇಕಲ, ಉದುಮ ಶಾಲೆಗಳಲ್ಲಿ ಆಗಿವೆ) ನಡೆಯುತ್ತಿದೆ. ಇದನ್ನು ಪ್ರತಿಭಟಿಸಿದ್ದೇವೆ. ಇದನ್ನು ನ್ಯಾಯಾಲಯಗಳಲ್ಲಿ ಪ್ರಶ್ನಿಸಿದ್ದೇವೆ. ಕಾನೂನು ಹೋರಾಟ ಪ್ರಗತಿಯಲ್ಲಿದೆ. ಆದರೆ ಬೀದಿಗಿಳಿದು ನಡೆಸುವ ಹೋರಾಟವಿರಲಿ, ಕಾನೂನು ಹೋರಾಟವಿರಲಿ ಖರ್ಚು-ವೆಚ್ಚ ಇರುತ್ತದೆ. ಇದನ್ನು ಮುಖಂಡರೇ ಭರಿಸಬೇಕಾಗುತ್ತದೆ ಎಂದು ಕನ್ನಡ ಸಾಹಿತ್ಯ ಪರಿಷತ್ತು ಕಾಸರಗೋಡು ಗಡಿನಾಡು ಘಟಕದ ಅಧ್ಯಕ್ಷ ಎಸ್. ವಿ. ಭಟ್ ಹೇಳಿದ್ದಾರೆ.

'ಸಂಘಟನೆಗಳಲ್ಲಿ ಹಣವಿಲ್ಲ. ಕನ್ನಡ ಹೋರಾಟಗಾರರ ಮೇಲೆ ಈಗಾಗಲೇ ನಾಲ್ಕು ಪ್ರಕರಣಗಳು ನಡೆಯುತ್ತಿವೆ. ಈ ಕಾನೂನು ಹೋರಾಟದ ವೆಚ್ಚ ಭರಿಸುವುದಾದರೂ ಹೇಗೆ? ಹೈಕೋರ್ಟ್, ಸುಪ್ರೀಂ ಕೋರ್ಟ್‌ಗಳಲ್ಲಿ ಕನ್ನಡಿಗರ ಸಮಸ್ಯೆಯ ಬಗ್ಗೆ ಹೋರಾಟ ಮಾಡಬೇಕಿದ್ದರೆ ಲಕ್ಷಾಂತರ ರೂಪಾಯಿ ಇಡುಗಂಟು ಬೇಕಾಗುತ್ತದೆ. ಇದನ್ನು ನಾವು ಎಲ್ಲಿಂದ ತರೋಣ' ಎಂದು ಅವರು ಪ್ರಶ್ನಿಸುತ್ತಾರೆ.

ಎಲ್ಲಾ ಸರ್ಕಾರಿ ಆದೇಶಗಳನ್ನೂ ಕನ್ನಡದಲ್ಲಿಯೂ ಕೊಡಬೇಕು ಎಂಬ ಆದೇಶಗಳು ಸಾಕಷ್ಟು ಬಾರಿ ಆಗಿವೆ. ಆದರೆ ಅದು ಪಾಲನೆಯಾಗುತ್ತಿಲ್ಲ. ಎಲ್ಲಾ ಫಲಕಗಳಲ್ಲೂ ಕನ್ನಡ ಇರಲೇ ಬೇಕೆಂಬ ಆದೇಶವೂ ಇದೆ, ಯಾವುದಕ್ಕೂ ಸರ್ಕಾರ ಬೆಲೆ ಕೊಡುತ್ತಿಲ್ಲ. ಅದೂ ಅಲ್ಲದೆ ಕಯ್ಯಾರ ಕಿಞ್ಞಣ್ಣ ರೈ ಅವರಂಥ ನಾಯಕರೂ ಈಗ ಇಲ್ಲ. ಯುವಕರಿಗೆ ಹೋರಾಟದಲ್ಲಿ ಆಸಕ್ತಿ ಇಲ್ಲ... ಹೀಗೆ ಹೋರಾಟಕ್ಕೆ ಸಮಸ್ಯೆಗಳು ಹಲವು ಇವೆ. ಆದರೂ ನಮ್ಮ ಪ್ರಯತ್ನವನ್ನು ಮಾಡಿಯೇ ತೀರುತ್ತೇವೆ ಎಂದು ಭಟ್ ಹೇಳುತ್ತಾರೆ.

'ಗುರಿ ಸಾಧಿಸುವವರೆಗೂ ಕನ್ನಡಕ್ಕಾಗಿ ಜನಪರವಾದ ಹೋರಾಟವನ್ನು ನಡೆಸುತ್ತೇವೆ' ಎಂದು ಕನ್ನಡಪರ ಹೋರಾಟಗಾರ ಶಿವರಾಮ ಕಾಸರಗೋಡು ಹೇಳುತ್ತಾರೆ. ಆದರೆ ಜನರು ಕೈಜೋಡಿಸುತ್ತಿಲ್ಲ ಎಂಬುದು ಅವರ ಅಳಲು. 'ಹೋರಾಟಕ್ಕೆ ಜನರೇ ಸಿಗುತ್ತಿಲ್ಲ. ನಿವೃತ್ತ ಕನ್ನಡ ಸರ್ಕಾರಿ ನೌಕರರಲ್ಲಿ ಬಹುಪಾಲು ಮಂದಿ ಮಂಗಳೂರಿನಲ್ಲಿ ನೆಲೆಗೊಳ್ಳಲು ಪ್ರಯತ್ನಿಸುತ್ತಾರೆ. ಹೋರಾಟದ ಪ್ರಯೋಜನ ಪಡೆದವರೇ ಈಗ ಹೋರಾಟಕ್ಕೆ ಬರುತ್ತಿಲ್ಲ' ಎಂಬ ನೋವನ್ನೂ ಅವರು ತೋಡಿಕೊಳ್ಳುತ್ತಾರೆ. ಇವರೊಬ್ಬರಲ್ಲ, ಕಾಸರಗೋಡಿನಲ್ಲಿ ದಶಕಗಳ ಕಾಲ ಕನ್ನಡಪರ ಹೋರಾಟ ನಡೆಸಿದ ಅನೇಕರ ಅಳಲು ಇದಾಗಿದೆ.

ಕೋವ್ಯಾಕ್ಸಿನ್ ಲಸಿಕೆಯಲ್ಲಿ ಅಮೆರಿಕದ ಪ್ರತಿರೋಧಕ

ಪ್ರಜಾವಾಣಿ ವಾರ್ತೆ

ಹೈದರಾಬಾದ್: 'ಭಾರತ ಮತ್ತು ಅಮೆರಿಕದ ಕಂಪನಿಗಳ ಸಹಯೋಗದಲ್ಲಿ 2019ರಲ್ಲಿ ಆರಂಭಿಸಿದ್ದ ಸಂಶೋಧನೆಯು ಈಗ ಭಾರತದಲ್ಲಿ ಕೋವಿಡ್ ವಿರುದ್ಧ ಬಳಸುತ್ತಿರುವ ಕೋವ್ಯಾಕ್ಸಿನ್ ಲಸಿಕೆಯ ಪರಿಣಾಮದ ಪ್ರಮಾಣವನ್ನು ಹೆಚ್ಚಿಸಿದೆ' ಎಂದು ಅಮೆರಿಕದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್ (ಎನ್‌ಐಎಚ್) ಹೇಳಿದೆ.

'ಅಮೆರಿಕದ ಕಂಪನಿಯು ಅಭಿವೃದ್ಧಿಪಡಿಸಿದ್ದ ಲಸಿಕೆ ಪ್ರತಿರೋಧಕವನ್ನು ಕೋವ್ಯಾಕ್ಸಿನ್‌ನಲ್ಲಿ ಬಳಸಲಾಗುತ್ತಿದೆ. ಈ ಕಾರಣದಿಂದಲೇ ಆಲ್ಫಾ (ಬಿ.1.1.7) ಮತ್ತು ಡೆಲ್ಟಾ (ಬಿ.1.617) ತಳಿಯ ಕೊರೊನಾ ವೈರಾಣು ವಿರುದ್ಧ ಕೋವ್ಯಾಕ್ಸಿನ್ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ' ಎಂದೂ ಎನ್‌ಐಎಚ್ ತನ್ನ ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದೆ.

ಅಮೆರಿಕದ ಕನ್ಸಾಸ್‌ನಲ್ಲಿರುವ ವೈರೊವ್ಯಾಕ್ಸ್ ಎಲ್‌ಎಲ್‌ಸಿ ಎಂಬ ಕಂಪನಿಯು ಅಲ್‌ಹೈಡ್ರೋಕ್ಸಿಕ್ವಿಂ-2 ಎಂಬ ಲಸಿಕೆ ಪ್ರತಿರೋಧಕವನ್ನು ಅಭಿವೃದ್ಧಿಪಡಿಸಿತ್ತು. ಅಲ್‌ಹೈಡ್ರೋಕ್ಸಿಕ್ವಿಂ-2ನಂತಹ ಪ್ರತಿರೋಧಕವನ್ನು ಅಭಿವೃದ್ಧಿಪಡಿಸಲು ಅಮೆರಿಕದ ವೈರೊವ್ಯಾಕ್ಸ್ ಮತ್ತು ಭಾರತದ ಭಾರತ್ ಬಯೊಟೆಕ್ 2019ರಲ್ಲಿ ಜಂಟಿಯಾಗಿ ಸಂಶೋಧನೆ ಆರಂಭಿಸಿದ್ದವು. ಕೋವ್ಯಾಕ್ಸಿನ್ ಅಭಿವೃದ್ಧಿಯಲ್ಲಿ ಭಾರತ್ ಬಯೊಟೆಕ್ ಈ ಅಲ್‌ಹೈಡ್ರೋಕ್‌ಇಕ್ವಿಂ-2 ಅನ್ನು ಬಳಸಿದೆ ಎಂದು ಎನ್‌ಐಎಚ್ ಹೇಳಿದೆ.

'ಅಲ್‌ಹೈಡ್ರೋಕ್ಸಿಕ್ವಿಂ-2 ಅನ್ನು ವಿವಿಧ ಲಸಿಕೆಗಳ ಅಭಿವೃದ್ಧಿಯಲ್ಲಿ ಬಳಸಲು ಒಪ್ಪಂದಕ್ಕೆ ಬರಲಾಗಿತ್ತು. ಜಗತ್ತಿನ ವಿವಿಧೆಡೆ ನಾಲ್ಕು ಕಂಪನಿಗಳು ಈ ಸಂಬಂಧ ಪ್ರಸ್ತಾವ ಸಲ್ಲಿಸಿದ್ದವು. ಭಾರತ್ ಬಯೊಟೆಕ್ ಈ ಒಪ್ಪಂದವನ್ನು ಅಂತಿಮಗೊಳಿಸಿತ್ತು. 2020ರಲ್ಲಿ ಕೋವಿಡ್ ಕಾಣಿಸಿಕೊಂಡ ನಂತರ, ಕೊರೊನಾ ವೈರಾಣು ವಿರುದ್ಧ ಲಸಿಕೆ ಅಭಿವೃದ್ಧಿಪಡಿಸುವಲ್ಲಿ ಅಲ್‌ಹೈಡ್ರೋಕ್ಸಿಕ್ವಿಂ-2 ಅನ್ನು ಬಳಸಿಕೊಳ್ಳಲು ವೈರೊವ್ಯಾಕ್ಸ್ ಮತ್ತು ಭಾರತ್ ಬಯೊಟೆಕ್ ಒಪ್ಪಂದವನ್ನು ವಿಸ್ತರಿಸಿಕೊಂಡಿದ್ದವು. ಕೋವ್ಯಾಕ್ಸಿನ್‌ನಲ್ಲಿ ಅಲ್‌ಹೈಡ್ರೋಕ್ಸಿಕ್ವಿಂ-2 ಅನ್ನು ಬಳಸುವ ಸಂಬಂಧ ದೀರ್ಘ ಸಂಶೋಧನೆ ನಡೆಸಲಾಗಿದೆ. ಆನಂತರವೇ ಲಸಿಕೆಯಲ್ಲಿ ಅದನ್ನು ಬಳಸಲಾಗಿದೆ' ಎಂದು ವೈರೊವ್ಯಾಕ್ಸ್ ಬಯೊಟೆಕ್‌ನ ಸಿಇಒ ಸುನಿಲ್ ಡೇವಿಡ್ ಹೇಳಿದ್ದಾರೆ.

ಭಾರತ್ ಬಯೊಟೆಕ್ ಕಂಪನಿಯು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು, ರಾಷ್ಟ್ರೀಯ ವೈರಾಣುವಿಜ್ಞಾನ ಸಂಸ್ಥೆಯ ಸಹಯೋಗದಲ್ಲಿ ಕೋವ್ಯಾಕ್ಸಿನ್ ಅನ್ನು ಅಭಿವೃದ್ಧಿಪಡಿಸಿದೆ. ಭಾರತದಲ್ಲಿ ಕೋವಿಡ್ ಹರಡುವುದನ್ನು ತಡೆಯಲು ಪ್ರತಿ ವ್ಯಕ್ತಿಗೆ ಕೋವ್ಯಾಕ್ಸಿನ್‌ನ ಎರಡು ಡೋಸ್‌ಗಳನ್ನು ನೀಡಲಾಗುತ್ತಿದೆ. ಕೋವಿಡ್ ಲಸಿಕೆ ಕಾರ್ಯಕ್ರಮದಲ್ಲಿ ಕೋವಿಶೀಲ್ಡ್ ಜತೆಗೆ ಕೋವ್ಯಾಕ್ಸಿನ್ ಲಸಿಕೆಯನ್ನೂ ಬಳಸಲಾಗುತ್ತಿದೆ. ವಿಶ್ವದ 12 ದೇಶಗಳು ಕೋವ್ಯಾಕ್ಸಿನ್ ಅನ್ನು ಬಳಸುತ್ತಿವೆ.

'ಪ್ರತಿರೋಧಕ್ಕೆ ಪ್ರಚೋದನೆ'

'ಲಸಿಕೆಯಲ್ಲಿರುವ ಅಲ್‌ಹೈಡ್ರೋಕ್ಸಿಕ್ವಿಂ-2 ದೇಹವನ್ನು ಸೇರಿದ ನಂತರ ವೈರಾಣು ವಿರುದ್ಧ ಪ್ರತಿರೋಧಕಗಳನ್ನು ಉಂಟುಮಾಡಲು ಜೀವಕೋಶಗಳನ್ನು ಪ್ರಚೋದಿಸುತ್ತದೆ. ಈ ಜೀವಕೋಶಗಳು ದೇಹದಲ್ಲಿ ಪ್ರಬಲ ಪ್ರತಿರೋಧ ಶಕ್ತಿಯನ್ನು ಉಂಟು ಮಾಡುತ್ತವೆ' ಎಂದು ಎನ್‌ಐಎಚ್ ಹೇಳಿದೆ.

'ಮನುಷ್ಯನ ದೇಹದಲ್ಲಿ ಜೀವಕೋಶಗಳಲ್ಲಿ ಟಿಎಲ್‌ಆರ್7 ಮತ್ತು ಟಿಎಲ್‌ಆರ್8 ಎಂಬ ಕಣಗಳಿವೆ. ಇವು ದೇಹವನ್ನು ಸೇರುವ ವೈರಾಣುಗಳ ವಿರುದ್ಧ ಪ್ರತಿರೋಧ ಶಕ್ತಿಯನ್ನು ಉಂಟು ಮಾಡುತ್ತವೆ. ಪ್ರತಿರೋಧಕ ಶಕ್ತಿಯನ್ನು ಸೃಷ್ಟಿಸುವಂತೆ ಟಿಎಲ್‌ಆರ್7 ಮತ್ತು ಟಿಎಲ್‌ಆರ್8 ಕಣಗಳನ್ನು ಅಲ್‌ಹೈಡ್ರೋಕ್ಸಿಕ್ವಿಂ-2 ಪ್ರಚೋದಿಸುತ್ತದೆ. ಆ ಮೂಲಕ ಕೊರೊನಾವೈರಾಣು ವಿರುದ್ಧ ದೇಹದಲ್ಲಿ ಪ್ರಬಲ ಪ್ರತಿರೋಧ ಶಕ್ತಿ ಸೃಷ್ಟಿಯಾಗುತ್ತದೆ' ಎಂದು ಎನ್‌ಐಎಚ್ ಹೇಳಿದೆ.

'ಅಲ್‌ಹೈಡ್ರೋಕ್‌ಇಕ್ವಿಂ-2 ಅನ್ನು ಬಳಸಿರುವುದರಿಂದಲೇ ಕೋವ್ಯಾಕ್ಸಿನ್ ತೆಗೆದುಕೊಂಡವರಲ್ಲಿ ಪ್ರತಿರೋಧ ಶಕ್ತಿ ಹೆಚ್ಚುತ್ತದೆ. ಲಸಿಕೆ ಪಡೆದುಕೊಂಡ ನಂತರ ಲಸಿಕೆ ನೀಡಲಾದ ಜಾಗದ ಸಮೀಪದಲ್ಲೇ ಇರುವ ಬಿಳಿರಕ್ತಕಣಗಳನ್ನು ಅಲ್‌ಹೈಡ್ರೋಕ್ಸಿಕ್ವಿಂ-2 ಹುಡುಕುತ್ತದೆ. ಆ ಮೂಲಕ ವೈರಾಣು ವಿರುದ್ಧ ಹೋರಾಡಲು ಬಿಳಿರಕ್ತಕಣಗಳನ್ನು ಸಜ್ಜುಗೊಳಿಸುತ್ತದೆ. ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು ನಡೆಸಿರುವ ಎರಡು ಸಂಶೋಧನೆಗಳಲ್ಲಿ ಈ ಅಂಶ ಪತ್ತೆಯಾಗಿದೆ. ಕೋವ್ಯಾಕ್ಸಿನ್ ಪಡೆದುಕೊಂಡವರಲ್ಲಿ ಆಲ್ಫಾ ಮತ್ತು ಡೆಲ್ಟಾ ರೂಪಾಂತರ ಕೊರೊನಾವೈರಾಣುವನ್ನು ನಿಷ್ಕ್ರಿಯಗೊಳಿಸುವ ಪ್ರತಿರೋಧ ಶಕ್ತಿ ಪ್ರಬಲವಾಗಿದೆ ಎಂದು ಸಂಶೋಧನಾ ವರದಿಯಲ್ಲಿ ಹೇಳಲಾಗಿದೆ' ಎಂದು ಎನ್‌ಐಎಚ್ ಹೇಳಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ವಯಂಸೇವಕರಿಗೆ ಪದಕ ನೀಡಲಾಗುತ್ತದೆ. ಆ ಪದಕದ ಮೇಲೆ ವಿಶ್ವದ ಹಲವು ಭಾಷೆಗಳಲ್ಲಿ ಸ್ವಯಂಸೇವಕ ಎಂದು ಬರೆಯಲಾಗಿದೆ. ಭಾರತದ ರಾಷ್ಟ್ರೀಯ ಭಾಷೆಯಾದ ಹಿಂದಿಯಲ್ಲಿಯೂ 'ಸ್ವಯಂಸೇವಕ್' ಎಂದು ಬರೆಯಲಾಗಿದೆ. ಇದು ಭಾರತಕ್ಕೆ ಸಿಕ್ಕ ಗೌರವ' ಎಂದು ಮೇಜರ್ ಸುರೇಂದ್ರ ಪೂನಿಯಾ ಎಂಬ ಬಿಜೆಪಿ ಕಾರ್ಯಕರ್ತ ಟ್ವೀಟ್ ಮಾಡಿದ್ದಾರೆ. ಈ ಟ್ವೀಟ್ ಅನ್ನು 2,500ಕ್ಕೂ ಹೆಚ್ಚು ಬಾರಿ ರಿಟ್ವೀಟ್ ಮಾಡಲಾಗಿದೆ. ಫೇಸ್‌ಬುಕ್‌ನಲ್ಲೂ ಈ ವಿವರ ಇರುವ ಪೋಸ್ಟ್‌ಗಳನ್ನು ಸಾವಿರಾರು ಬಾರಿ ಹಂಚಿಕೊಳ್ಳಲಾಗಿದೆ. ಈ ಟ್ವೀಟ್ ಮತ್ತು ಪೋಸ್ಟ್‌ಗಳ ಜತೆಗೆ ಪದಕದ ಚಿತ್ರವನ್ನೂ ಹಂಚಿಕೊಳ್ಳಲಾಗಿದೆ. ಎಲ್ಲವೂ ವೈರಲ್ ಆಗಿವೆ.



ವೈರಲ್ ಆಗಿರುವ ಚಿತ್ರ

'ಇದು ಸುಳ್ಳು ಸುದ್ದಿ. ಯಾವ ಒಲಿಂಪಿಕ್ಸ್‌ನಲ್ಲಿಯೂ ಸ್ವಯಂಸೇವಕರಿಗೆ ಪದಕ ನೀಡುವುದಿಲ್ಲ. ಜಪಾನ್‌ನಲ್ಲಿ ನಡೆಯಲಿರುವ ಟೋಕಿಯೊ ಒಲಿಂಪಿಕ್ಸ್‌ನಲ್ಲಿಯೂ ಸ್ವಯಂಸೇವಕರಿಗೆ ಪದಕ ನೀಡುತ್ತಿಲ್ಲ. ಅವರಿಗೆ ಟೋಕಿಯೊದಲ್ಲಿ ಓಡಾಡಲು ಪ್ರಯಾಣ ಭತ್ಯೆ ಮತ್ತು ಊಟೋಪಚಾರ ಮಾತ್ರ ನೀಡಲಾಗುತ್ತದೆ ಎಂಬ ವಿವರ ಟೋಕಿಯೊ ಒಲಿಂಪಿಕ್ಸ್‌ನ ಅಧಿಕೃತ ಜಾಲತಾಣದಲ್ಲಿ ಇದೆ. ವೈರಲ್ ಆಗಿರುವ ಚಿತ್ರವನ್ನು ಗೂಗಲ್ ರಿವರ್ಸ್ ಇಮೇಜ್ ಸರ್ಚ್‌ನಲ್ಲಿ ಹುಡಕಲಾಯಿತು. ಅದು ಅಮೆರಿಕದಲ್ಲಿ ಇ-ಬೇ ಇ-ಕಾಮರ್ಸ್‌ನಲ್ಲಿ ಮಾರಾಟಕ್ಕೆ ಇಡಲಾಗಿರುವ ಬ್ಯಾಡ್ಜ್‌ನ ಚಿತ್ರ. ಈ ಬ್ಯಾಡ್ಜ್ ಅನ್ನೇ ಒಲಿಂಪಿಕ್ಸ್‌ನಲ್ಲಿ ಸ್ವಯಂಸವೇಕರಿಗೆ ನೀಡಲಾಗುವ ಪದಕ ಎಂದು ಸುಳ್ಳು ಸುದ್ದಿ ಸೃಷ್ಟಿಲಾಗಿದೆ' ಎಂದು ಆಲ್ಟ್‌ನ್ಯೂಸ್ ಹೇಳಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಪರ್ಣಕುಟಿಗಳಲ್ಲಿ ನೆಲೆ

ಎಲ್ಲರಿಂದ ಬೀಳ್ಕೊಂಡು, ವೆಸ್ಸಂತರ, ಮಾದ್ರಿ ಹಾಗೂ ಮಕ್ಕಳು ಕಾಡಿನ ದಾರಿಯನ್ನು ಏರತೊಡಗಿದರು. ಗಂಧಮಾದನ ಪರ್ವತದಲ್ಲಿ ಒಂದು ದಿನ ಕಳೆದು, ಮುಂದೆ ಕೇತುಮತಿ ನದಿಯ ದಂಡೆಯಲ್ಲಿ ನಿಂತು, ಸ್ನಾನ ಮಾಡಿ, ಹಣ್ಣುಗಳನ್ನು ತಿಂದು, ಪರ್ವತದ ಶಿಖರದಲ್ಲಿದ್ದ ಆಲದ ಮರವನ್ನು ಸೇರಿದರು. ಮುಚಲಿಂದ ಸರೋವರವನ್ನು ದಾಟಿದ ಮೇಲೆ ಕಾಡು ಬಹಳ ದಟ್ಟವಾಗಿ, ಭಯಂಕರವಾಗಿ ಕಾಣುತ್ತಿತ್ತು. ಸ್ವಲ್ಪ ಮುಂದೆ ಸಾಗಿದಾಗ, ಚೆತರಾಜ್ಯದ ಪ್ರಜೆಗಳು ತಿಳಿಸಿದಂತೆ ಚೌಕಾದ ಸುಂದರ ಪುಷ್ಕರಣಿ ಕಂಡಿತು. ಇದೇ ಸಮಯದಲ್ಲಿ ದೇವರಾಜ ಶಕ್ರ ತನ್ನ ಧ್ಯಾನದಲ್ಲಿ ಚಿಂತಿಸಿದಾಗ, ವೆಸ್ಸಂತರ ತನ್ನ ಪರಿವಾರ ಸಮೇತ ಹಿಮಾಲಯಕ್ಕೆ ಬರುತ್ತಿರುವುದನ್ನು ತಿಳಿದ. ಅವನಿಗೆ ಅನುಕೂಲ ಮಾಡಿಕೊಡಬೇಕೆಂದುಕೊಂಡು ವಿಶ್ವಕರ್ಮನನ್ನು ಕರೆದ. 'ಮಿತ್ರ, ನೀನು ತಕ್ಷಣ ಹಿಮಾಲಯದ ವಂಕಪರ್ವತಕ್ಕೆ ಹೋಗು. ಅಲ್ಲಿ ಪುಷ್ಕರಣಿ ತೀರದಲ್ಲಿ ಎರಡು ಸುಂದರವಾದ ಆಶ್ರಮಗಳನ್ನು ನಿರ್ಮಿಸಿ ಬಾ' ಎಂದು ಅಪ್ಪಣೆ ಕೊಟ್ಟ. ವಿಶ್ವಕರ್ಮ ಪುಷ್ಕರಣಿಯ ಉತ್ತರ ಪೂರ್ವದಲ್ಲಿ ಎರಡು ಪರ್ಣಕುಟಿಗಳನ್ನು ಸಿದ್ಧಪಡಿಸಿದ. ಎರಡೂ ಚಂಕ್ರಮಣ ಕ್ಷೇತ್ರಗಳ ಸುತ್ತ ನಾನಾ ತರಹದ ಹೂವಿನ, ಹಣ್ಣುಗಳ ಗಿಡಗಳನ್ನು ನೆಡಿಸಿದ. ಕದಳೀವನವನ್ನೇ ನಿರ್ಮಿಸಿದ. ಪ್ರವ್ರಜಿತರಿಗೆ ಬೇಕಾಗುವ ಸರ್ವ ಅವಶ್ಯಕತೆಗಳಿಗೆ ಅಲ್ಲಿ ವ್ಯವಸ್ಥೆ ಮಾಡಿದ. ಪರ್ಣಕುಟಿಗಳ ಮುಂದೆ, ಇವು ಪ್ರವ್ರಜಿತರ ಉಪಯೋಗಕ್ಕೆ ಬಂದು ಅಕ್ಷರ ಬರೆಸಿದ. ಕಾಡಿನ ಆ ಭಾಗದಲ್ಲಿದ್ದ ಕಾಡುಪ್ರಾಣಿಗಳನ್ನು, ಉಗ್ರಪಕ್ಷಿಗಳನ್ನು ಅಲ್ಲಿಂದ ದೂರ ಓಡಿಸಿ ಅವು ಮರಳಿ ಬರದಂತೆ ನೋಡಿಕೊಂಡ. ಅಲ್ಲಿ ಪರ್ಣಕುಟಿಗಳು ಇವೆಯೆಂದು ಇವರಿಗೆ ಗೊತ್ತಾಗುವಂತೆ ಕಾಲುದಾರಿಯನ್ನು ಮಾಡಿದ.

ಬೋಧಿಸತ್ವ ವೆಸ್ಸಂತರ ಆ ಮಾರ್ಗವಾಗಿ ನಡೆದುಬಂದಾಗ ಕಾಲುದಾರಿಯನ್ನು ನೋಡಿ, ಬಹುಶಃ ಇದೇ ಪ್ರವ್ರಜಿತರು ಇರಬಹುದಾದ ಜಾಗ ಎಂದು ತಿಳಿದು ಮಾದ್ರಿ ಮತ್ತು ಮಕ್ಕಳನ್ನು ಕರೆದುಕೊಂಡು ಆಶ್ರಮದ್ವಾರಕ್ಕೆ ಬಂದ. ತಾನೊಬ್ಬನೇ ಆಶ್ರಮದೊಳಗೆ ಹೋಗಿ ಯಾರಾದರೂ ಇದ್ದಾರೆಯೇ ಎಂದು ನೋಡಿದ. ಯಾರೂ ಇರಲಿಲ್ಲ. ಮುಂದೆ ಬರೆದ ಅಕ್ಷರಗಳನ್ನು ನೋಡಿ ಇದು ನಮಗಾಗಿಯೇ ಶಕ್ರ ನಿರ್ಮಿಸಿದ್ದಾನೆ ಎಂದು ತಿಳಿದು ಮನದಲ್ಲಿಯೇ ಅವನಿಗೆ ಗೌರವವನ್ನು ಸೂಚಿಸಿದ. ನಂತರ ಒಂದು ಪರ್ಣಕುಟಿಯ ಒಳಗೆ ಹೋಗಿ ತನ್ನ ಬಿಲ್ಲು, ಬಾಣಗಳನ್ನು ತೆಗೆದಿರಿಸಿ, ಪುಷ್ಕರಣಿಯಲ್ಲಿ ಸ್ನಾನ ಮಾಡಿ ಋಷಿಗಳ ವೇಷ ಧರಿಸಿದ. ನಂತರ ಒಂದು ದೊಣ್ಣೆಯನ್ನು ಹಿಡಿದುಕೊಂಡು ಎರಡೂ ಪರ್ಣಕುಟಿಗಳ ಪ್ರದಕ್ಷಿಣೆ ಹಾಕಿ, ಪ್ರತ್ಯೇಕ ಬುದ್ಧನಂತೆ ಶಾಂತಭಾವದಿಂದ ಹೆಂಡತಿ ಮಕ್ಕಳ ಬಳಿಗೆ ಬಂದ. ಮಾದ್ರಿ ತನ್ನ ಮಕ್ಕಳನ್ನು ಕರೆದುಕೊಂಡು ಹೋಗಿ ಪುಷ್ಕರಿಣಿಯಲ್ಲಿ ಸ್ನಾನ ಮಾಡಿಕೊಂಡು ತಾನೂ ತಪಸ್ವಿನಿಯ ವೇಷಧರಿಸಿ, ಮಕ್ಕಳಿಗೂ ತಪಸ್ವಿಕುಮಾರರ ಬಟ್ಟೆ ತೊಡಿಸಿದಳು. ನಾಲ್ವರೂ ವಂಕಪರ್ವತದ ಪರ್ಣಕುಟಿಯಲ್ಲಿ ತಪಸ್ವೀ ಜೀವನವನ್ನು ನಡೆಸಿದರು. ಆಗ ಮಾದ್ರಿ, 'ಪ್ರಭೂ, ನೀವು ಗಡ್ಡೆ, ಗೆಣಸುಗಳನ್ನು ತರುವುದು ಬೇಡ. ನಿಮ್ಮ ಧ್ಯಾನ, ತಪಸ್ಸಿಗೆ ವಿಘ್ನವಾಗುವುದು ಸರಿಯಲ್ಲ. ನಾನೇ ಹಣ್ಣು, ಹಂಪಲಗಳನ್ನು ತರುತ್ತೇನೆ. ಅದಲ್ಲದೆ ನಿಮ್ಮ ತಪಸ್ಸಿಗೆ, ಬ್ರಹ್ಮಚರ್ಯಕ್ಕೆ ಭಂಗಬರದಂತೆ ನಾನು ಮತ್ತು ಮಕ್ಕಳು ಇನ್ನೊಂದು ಪರ್ಣಶಾಲೆಯಲ್ಲಿ ಇರುತ್ತೇವೆ' ಎಂದಳು. ಆಕೆಯ ಮನೋಧರ್ಮವನ್ನು ವೆಸ್ಸಂತರ ಮೆಚ್ಚಿದ. ತಪಸ್ಸು ಮುಂದುವರೆಯಿತು. ❖

ದಿನ ಭವಿಷ್ಯ

ಶುಕ್ರವಾರ ಜುಲೈ 2, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಆರ್ದ್ರೆ ಅಷ್ಟಮೀ ಗಂ. 28-52 (ಸಾ. 5-38) ಶುಕ್ರವಾರ ನಿತ್ಯ ನಕ್ಷತ್ರ ಉತ್ತರಾಭಾದ್ರ ಗಂ. 1-40 (ಬೆ. 6-46) ಶೋಭನ ನಾಮ ಯೋಗ ಗಂ. 20-14 ಕೌಲವ ಕರಣ ಗಂ. 28-52 ವಿಷ ಗಂ. 33-54 ಅಮೃತ ಗಂ. 59-41 ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 6-00 ಸೂರ್ಯಾಸ್ತ: 6-46 ಅದೃಷ್ಟ ಸಂಖ್ಯೆ 7 8

ಮೇಷ: ಆರೋಗ್ಯ ವಿಷಯದಲ್ಲಿ ಹೆಚ್ಚಿನ ವೆಚ್ಚ ಸಂಭವಿಸುವ ಸಾಧ್ಯತೆ ಇದ್ದು ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ಅವಶ್ಯ. ಶತ್ರುಗಳಿಂದ ಕಿರಿಕಿರಿಯ ಸಾಧ್ಯತೆ. ಹೊಸ ಗೆಳೆತನ ಮಾಡುವಾಗ ಮತ್ತೊಮ್ಮೆ ಯೋಚಿಸುವುದು ಉತ್ತಮ.

ವೃಷಭ: ಕೆಲಸಕಾರ್ಯಗಳು ಕುಂಠಿತಗೊಂಡು ಮಾನಸಿಕ ಉದ್ವೇಗಕ್ಕೆ ಕಾರಣವಾಗಬಹುದು. ಹಣಕಾಸಿನ ಮುಗ್ಗಟ್ಟು ಉಂಟಾಗುವ ಸಾಧ್ಯತೆ. ಆಸ್ತಿ ಮಾರಾಟದಲ್ಲಿ ಯಶಸ್ಸು ಕಾಣುವಿರಿ.

ಮಿಥುನ: ಮನೆಯಲ್ಲಿ ಸಮಾಧಾನದ ವಾತಾವರಣ. ಗುರು ಕರುಣೆಯಿಂದ ಕೌಟುಂಬಿಕ ಮನಸ್ತಾಪಗಳು ನಿವಾರಣೆಯಾಗುವುದು. ಆರ್ಥಿಕ ವಿಷಯದಲ್ಲಿ ಹಿನ್ನಡೆಯಾಗುವ ಸಾಧ್ಯತೆ ಇರುವುದರಿಂದ ಜಾಗೃತೆ ವಹಿಸಿ.

ಕರ್ಕಾಟಕ: ನಿಮಗೆ ತಾತ್ಕಾಲಿಕವಾಗಿ ಯತ್ನ ಕಾರ್ಯಗಳಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ. ಸಹನ ಶಕ್ತಿಯಿಂದ ಕಾರ್ಯಗಳನ್ನು ಸಾಧಿಸಿಕೊಳ್ಳುವ ಅವಕಾಶಗಳು ಕಂಡುಬರುತ್ತಿವೆ. ಗಣೇಶ ಸ್ತೋತ್ರವನ್ನು ಪಠಿಸಿ.

ಸಿಂಹ: ಉತ್ತಮ ಗುರುಬಲ ಹೊಂದಿದ್ದು ಗ್ರಹಗತಿಯೂ ಉತ್ತಮವಾಗಿದೆ. ನೆನೆಗುದಿಗೆ ಬಿದ್ದಿರುವ ನಿಮ್ಮ ಕೆಲಸಕಾರ್ಯಗಳು ಸುಗಮವಾಗಿ ನೆರವೇರುವ ಸಾಧ್ಯತೆ. ಆರೋಗ್ಯ ಮತ್ತು ಆರ್ಥಿಕ ವಿಷಯದಲ್ಲಿ ಉತ್ತಮ ದಿನವಾಗಿದೆ.

ಕನ್ಯಾ: ಕೈಗೊಂಡ ಕೆಲಸಕಾರ್ಯಗಳು ನಿಧಾನಗತಿಯನ್ನು ಹೊಂದುವವು. ಅನಿರೀಕ್ಷಿತ ಖರ್ಚು ಬಂದೆರಗುವ ಸಾಧ್ಯತೆ. ಉದ್ಯೋಗಸ್ಥರಿಗೆ ಉತ್ತಮ ಫಲ ಕಂಡುಬರಲಿದೆ. ಯಾವುದೇ ದೂರಪ್ರಯಾಣ ಕೈಗೊಳ್ಳದಿರುವುದು ಲೇಸು.

ತುಲಾ: ಮಹತ್ವದ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ಮತ್ತೊಮ್ಮೆ ಯೋಚಿಸುವುದು ಉತ್ತಮ. ಹೊಸ ವಸ್ತುಗಳ ಖರೀದಿ ಮಾರಾಟ ವಿಷಯಗಳನ್ನು ಕೈಬಿಡುವುದು ಸೂಕ್ತ.

ವೃಶ್ಚಿಕ: ಪ್ರವಾಸ, ತೀರ್ಥ ಕ್ಷೇತ್ರ ದರ್ಶನದ ಭಾಗ್ಯ ಒದಗಿಬರುವ ಸಾಧ್ಯತೆ ಇದೆ. ವಿದೇಶ ಪ್ರವಾಸದ ಸಾಧ್ಯತೆಯೂ ಕಂಡುಬರುವುದು. ವಿದ್ಯಾರ್ಥಿಗಳಿಗೆ ಅತ್ಯಂತ ಯಶಸ್ಸಿನ ದಿನವಾಗಿದ್ದು ಶಾರದೆಯ ಸ್ತೋತ್ರದಿಂದ ಹೆಚ್ಚಿನ ಯಶಸ್ಸು.

ಧನು: ನಿಮ್ಮ ಕೆಲಸ ಕಾರ್ಯಗಳು ಹಿನ್ನಡೆ ಕಂಡರೂ ಗುರುವಿನ ಅನುಗ್ರಹ ನಿಮ್ಮ ಮೇಲಿದ್ದು ಉತ್ತಮ ಆರೋಗ್ಯ ನಿಮ್ಮ ಪಾಲಿಗೆ ಇದೆ. ಆರ್ಥಿಕ ಪ್ರಗತಿ ಕಾಣುವಿರಿ. ನಿರುದ್ಯೋಗಿಗಳಿಗೆ ಯೋಗ್ಯತಾನುಸಾರ ಉದ್ಯೋಗದ ಸಾಧ್ಯತೆ ಇದೆ.

ಮಕರ: ಆರೋಗ್ಯ ಮತ್ತು ಆರ್ಥಿಕ ವ್ಯವಹಾರಗಳಲ್ಲಿ ಎಚ್ಚರಿಕೆಯಿಂದಿರುವುದು ಉತ್ತಮ. ಪ್ರಯಾಣದಲ್ಲಿ ಜಾಗರೂಕರಾಗಿರಿ. ಹಣಕಾಸಿನ ಹೂಡಿಕೆಯನ್ನು ದಿನದಮಟ್ಟಿಗೆ ಮುಂದೂಡುವುದೇ ಒಳ್ಳೆಯದು.

ಕುಂಭ: ಅನ್ಯರಿಂದ ಎದುರಾದ ತಾಪತ್ರಯಗಳು ಶಮನವಾಗುವ ಸಾಧ್ಯತೆಯಿದೆ. ಅಪೇಕ್ಷಿತ ಕೆಲಸ ಕಾರ್ಯಗಳು ಕೈಗೂಡುವವು. ನಿರುದ್ಯೋಗಿಗಳಿಗೆ ಉದ್ಯೋಗ ಪ್ರಾಪ್ತಿ. ನೌಕರಿಯಲ್ಲಿರುವವರಿಗೆ ಮುಂಬಡ್ತಿಯ ಸಾಧ್ಯತೆ.

ಮೀನ: ಮನೆಯಲ್ಲಿ ಶುಭಕಾರ್ಯಗಳು ನೆರವೇರುವ ಸಾಧ್ಯತೆ ಕಂಡುಬರುವುದು. ನೌಕರ ವರ್ಗ, ವ್ಯಾಪಾರಿಗಳಿಗೆ ಉತ್ತಮ ಫಲಗಳು ಲಭ್ಯವಾಗಲಿದ್ದು ಯಶಸ್ಸು ಕಾಣುವಿರಿ. ಅವಸರದ ನಿರ್ಣಯ ಬೇಡ.

ನಿಮ್ಮ ಜನ್ಮದಿನ 2-ಜುಲೈ ಈ ದಿನವು ಅತ್ಯಂತ ಶುಭಕರವಾಗಿದ್ದು, ವಿಲಾಸೀ ಜೀವನವು ನಿಮ್ಮದಾಗಲಿದೆ. ನಿಮ್ಮ ಜೀವನ ಶೈಲಿಯು ಅತಿಯಾಗಿ ಪರಿಣಮಿಸಿ ಜೀವನದಲ್ಲಿ ಅನೇಕ ಅವಘಡಗಳನ್ನು ಎದುರಿಸುವ ಸಾಧ್ಯತೆ ಕಂಡುಬರುವುದು. ಅತಿಯಾದ ಆತ್ಮವಿಶ್ವಾಸವೂ ನಿಮಗೆ ಮಾರಕವಾಗಿ ಪರಿಣಮಿಸಬಹುದು. ತೈಲೋದ್ಯಮದವರಿಗೆ ಉತ್ತಮ ಆದಾಯ.

ಪದಬಂಧ 4645 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಹಾಡಿನ ಧಾಟಿಯಲ್ಲೇ ಮೂಡಿದ ಒಲವು! (2)
5.ಭೇದ ಭಾವವಿಲ್ಲದಿರುವಿಕೆ (5)
6.ದೂರವೇನಲ್ಲಬಹಳ ಹತ್ತಿರ! (3)
7. ನೆಲ್ಲಿಕಾಯಿಯ ಮುರಬ್ಬ (3)
8.ಸಂಸ್ಥೆಗಳ ಮೇಲೆ ಸರ್ಕಾರದ ಸ್ವಾಮ್ಯ (5)
9.ಮಾಸದ ಹಿಂದೆ ನೋಡಿರುವ ಗೋರಿ! (3)
10.ಕೃಪಾ ದೃಷ್ಟಿಯಿದು (3)
13.ಅನುಸರಿಸಿ ಮುಂದುವರೆದ ಧ್ವನಿ (5)
14.ಜರೂರತೆಯಲ್ಲಿರುವ ಮುಪ್ಪು! (2)

ಮೇಲಿಂದ ಕೆಳಕ್ಕೆ
1.ಆಹಾರವನ್ನು ಸೇವಿಸದಿರುವಿಕೆ (4)
2.ಕುಂಕುಮ ಅಥವಾ ಅರಿಶಿಣ ಸವರಿದ ಅಕ್ಕಿ (3)
4.ನೇಣಿಗೇರಿಸುವ ಕಂಬ (4)
5.ಯಾವುದೇ ಅಪರಾಧ ಮಾಡದಿರುವವನು (5)
7.ಸ್ವಭಾವವನ್ನು ಹೊಗಳಿ ಹೇಳುವುದು (5)
9.ಒಳ್ಳೆಯ ಕುಲದಲ್ಲಿ ಹುಟ್ಟಿದವ (4)
11.ಈತ ಜೈನ ಸನ್ಯಾಸಿ (4)
12.ಹೆಣ್ಣು ಹಾವು (3)



4644ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕಲಹ 4.ಸಮ್ಮಾರ್ಜನೆ 6.ಮಹೌಷಧ 8.ಖಚಿತ 11.ಗುಲಾಮ 13.ಹಸುಗೂಸು 17.ಮಹಾರಾಜ 18.ರುಮಾಲು

ಮೇಲಿಂದ ಕೆಳಕ್ಕೆ: 1.ಕಪ್ತಾನ 2.ಹಸನ್ಮುಖ 3.ಮಹಿಷ 5.ನೆಮ 7.ಧನುಸ್ಸು 9.ತರಗು 10.ವ್ಯಾಮೋಹ 12.ಮಹಜರು 14.ಸುಶ್ರಾವ್ಯ 15.ಸುಮ 16.ಬಯಲು

ಸುಡೊಕು 5031

			3		8		2	4
8		6				5		
	5		4		6		7	
			1		2		4	
		9		3				
6			8		9	2		5
	8		6		1		9	
7		2		8		3		1
	6		2		3		5	7

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5030 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1

ಕೋವಿಡ್ ಮೂರನೇ ಅಲೆ ಎದುರಿಸಲು ವಿನೂತನ ಕ್ರಮ: 2.98 ಲಕ್ಷ ಮಕ್ಕಳಿಗೆ 'ಹೆಲ್ತ್ ಕಾರ್ಡ್' ವಿತರಣೆ

ಮಕ್ಕಳ ಸುರಕ್ಷತೆಗೆ 'ವಿಶೇಷ ಕೋವಿಡ್ ವಾರ್ಡ್'

• ಸಿದ್ದು ಆರ್.ಜಿ.ಹಳ್ಳಿ

ಪ್ರಜಾವಾಣಿ ವಿಶೇಷ

ಹಾವೇರಿ: ಕೋವಿಡ್ ಮೂರನೇ ಅಲೆಯಿಂದ ಜಿಲ್ಲೆಯ 2.98 ಲಕ್ಷ ಮಕ್ಕಳನ್ನು ರಕ್ಷಿಸಲು ಹಾವೇರಿ ಜಿಲ್ಲಾಡಳಿತ ವಿನೂತನ ಕ್ರಮಗಳನ್ನು ಕೈಗೊಂಡಿದೆ. ಜಿಲ್ಲಾಸ್ಪತ್ರೆಯಲ್ಲಿ ಮಕ್ಕಳಿಗಾಗಿಯೇ ಪ್ರತ್ಯೇಕವಾಗಿ ಆಮ್ಲಜನಕ ಸೌಲಭ್ಯವಿರುವ 30 ಹಾಸಿಗೆ ಸಾಮರ್ಥ್ಯದ 'ವಿಶೇಷ ಕೋವಿಡ್ ವಾರ್ಡ್' ತೆರೆಯಲಾಗಿದೆ.

ಕೋವಿಡ್‌ನಿಂದ ಭಯಭೀತರಾದ ಮಕ್ಕಳಿಗೆ ಆತ್ಮಸ್ಥೈರ್ಯ ತುಂಬಲು ಕೋವಿಡ್ ವಾರ್ಡ್‌ನ ಗೋಡೆಗಳ ಮೇಲೆ ಆಕರ್ಷಕ ವರ್ಣಚಿತ್ರಗಳನ್ನು ಬಿಡಿಸಲಾಗಿದೆ. ಮಕ್ಕಳ ಮನಸೆಳೆಯುವ ಮಿಕ್ಕಿಮೌಸ್, ಡೊನಾಲ್ಡ್ ಡಕ್ ಸೇರಿದಂತೆ ವಿವಿಧ ಕಾರ್ಟೂನ್‌ಗಳನ್ನು ಕಲಾವಿದರು ಅರಳಿಸಿದ್ದಾರೆ. ಆಟವಾಡಲು ಮಕ್ಕಳ ಆಟಿಕೆಗಳನ್ನೂ ಇರಿಸಲಾಗಿದೆ.

ಈ ವಾರ್ಡ್‌ನಲ್ಲಿ ಐಸಿಯು ವೆಂಟಿಲೇಟರ್, ಆಕ್ಸಿಜನ್ ಕಾನ್ಸನ್‌ಟ್ರೇಟರ್, ನಿಯೋನೇಟಲ್ ಮಾನಿಟರ್, ಸಿರಿಂಜ್ ಇನ್‌ಫ್ಯೂಷನ್ ಪಂಪ್, ನಾನ್ ರಿಬ್ರೀತರ್ ಮಾಸ್ಕ್, ಅಂಬು ಬ್ಯಾಗ್ ಸೇರಿದಂತೆ ಅಗತ್ಯವಾದ ಎಲ್ಲ ವೈದ್ಯಕೀಯ ಉಪಕರಣಗಳನ್ನು ವ್ಯವಸ್ಥಿತವಾಗಿ ಜೋಡಿಸಲಾಗುತ್ತಿದೆ.

ಸಿಬ್ಬಂದಿಗೆ ವಿಶೇಷ ತರಬೇತಿ: 'ಮಕ್ಕಳ ಕೋವಿಡ್ ವಾರ್ಡ್‌ನಲ್ಲಿ ಅಳವಡಿಸಿರುವ ವೈದ್ಯಕೀಯ ಉಪಕರಣಗಳನ್ನು ಸಮರ್ಪಕವಾಗಿ ಬಳಸುವ ಬಗ್ಗೆ 160 ನರ್ಸಿಂಗ್ ಆಫೀಸರ್‌ಗಳಿಗೆ ತಜ್ಞ ವೈದ್ಯರಿಂದ ಕೌಶಲಯುಕ್ತ ತರಬೇತಿ ಕೊಡಿಸಲಾಗುತ್ತಿದೆ. ಇದರ ಜತೆಗೆ, 10 ದಿನಗಳ 'ಆನ್‌ಲೈನ್ ವೆಂಟಿಲೇಟರ್ ತರಬೇತಿ'ಯನ್ನೂ ನೀಡಲಾಗುತ್ತಿದೆ. ಮಕ್ಕಳ ವಾರ್ಡ್ ಮತ್ತು ನವಜಾತ ಶಿಶುಗಳ ವಿಶೇಷ ನಿಗಾ ಘಟಕದಲ್ಲಿ (ಎನ್‌ಐಸಿಯು) ಕೆಲಸ ಮಾಡಿ ಅನುಭವ ಇರುವ ನರ್ಸಿಂಗ್ ಆಫೀಸರ್‌ಗಳನ್ನೇ 'ಮಕ್ಕಳ ಕೋವಿಡ್ ವಾರ್ಡ್'ಗೆ ನಿಯೋಜಿಸುತ್ತೇವೆ' ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಪಿ.ಆರ್. ಹಾವನೂರ ತಿಳಿಸಿದರು.

3 ಲಕ್ಷ ಹೆಲ್ತ್ ಕಾರ್ಡ್: 'ಕೋವಿಡ್ ಮೂರನೇ ಅಲೆಯಿಂದ ಜಿಲ್ಲೆಯಲ್ಲಿರುವ 18 ವರ್ಷದೊಳಗಿನ 2.98 ಲಕ್ಷ ಮಕ್ಕಳನ್ನು ಸುರಕ್ಷಿತವಾಗಿರಿಸಲು, ಮುಂಜಾಗ್ರತಾ ಕ್ರಮವಾಗಿ ರಾಜ್ಯದಲ್ಲೇ ಮೊದಲ ಬಾರಿಗೆ 'ವಾತ್ಸಲ್ಯ ಮಕ್ಕಳ ಆರೋಗ್ಯ ತಪಾಸಣಾ ಶಿಬಿರ' ಹಮ್ಮಿಕೊಂಡಿದ್ದೇವೆ. ಈಗಾಗಲೇ 98 ಸಾವಿರ ಮಕ್ಕಳನ್ನು ತಪಾಸಣೆ ಮಾಡಲಾಗಿದೆ. ಅಪೌಷ್ಟಿಕತೆ ನಿವಾರಿಸಲು 'ಪೌಷ್ಟಿಕ ಆಹಾರ ಕಿಟ್' ವಿತರಿಸುತ್ತಿದ್ದೇವೆ. ಅನಾರೋಗ್ಯದಿಂದ ಬಳಲುವ ಮಕ್ಕಳಿಗೆ ಮಕ್ಕಳ ತಜ್ಞರಿಂದ ವಿಶೇಷ ಚಿಕಿತ್ಸೆ ಕೊಡಿಸುತ್ತೇವೆ' ಎಂದು ಜಿಲ್ಲಾಧಿಕಾರಿ ಸಂಜಯ ಶೆಟ್ಟೆಣ್ಣವರ ಹೇಳಿದರು.

ಹಾವೇರಿ ಜಿಲ್ಲಾಡಳಿತದಿಂದ 3 ಲಕ್ಷ 'ಆರೋಗ್ಯ ತಪಾಸಣಾ ಚೀಟಿ' ಮುದ್ರಣ ಮಾಡಿಸಿದ್ದು, ವಿತರಿಸುತ್ತಿದ್ದೇವೆ. ಇದರಲ್ಲಿ ಮಕ್ಕಳ ಹೆಸರು, ವಿಳಾಸ, ತೂಕ, ಎತ್ತರ ಸೇರಿದಂತೆ ಆರೋಗ್ಯ ಸಂಬಂಧಿ ವಿವರಗಳು ಮತ್ತು ವೈದ್ಯರ ಸಲಹೆಗಳು ಇರುತ್ತವೆ. ಕೊರೊನಾ ಸೋಂಕು ತಗುಲಿದರೆ, ಮಕ್ಕಳಿಗೆ ಚಿಕಿತ್ಸೆ ನೀಡಲು ಈ 'ಹೆಲ್ತ್ ಕಾರ್ಡ್' ನೆರವಾಗಲಿದೆ ಎಂದು ಮಾಹಿತಿ ನೀಡಿದರು.

ಜಿಲ್ಲೆಯ 1,945 ಮಕ್ಕಳು ಗುಣಮುಖ

'ಕೊರೊನಾ ಮೊದಲನೇ ಅಲೆಯಲ್ಲಿ 946 ಮತ್ತು ಎರಡನೇ ಅಲೆಯಲ್ಲಿ 1,024 ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 1,970 ಮಕ್ಕಳಿಗೆ ಕೋವಿಡ್ ದೃಢಗೊಂಡಿತ್ತು. ಈ ಪೈಕಿ 1,945 ಮಕ್ಕಳು ಗುಣಮುಖರಾಗಿದ್ದು, ಮನೆಗೆ ತೆರಳಿದ್ದಾರೆ. 24 ಮಕ್ಕಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಒಂದು ಮಗು ಮಾತ್ರ ಮೃತಪಟ್ಟಿದೆ. ಆ ಮಗು ರಕ್ತ ಮತ್ತು ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿತ್ತು' ಎಂದು ಡಿಎಚ್‌ಒ ಡಾ.ರಾಘವೇಂದ್ರಸ್ವಾಮಿ ಎಚ್.ಎಸ್. ತಿಳಿಸಿದರು.

ರಾಜ್ಯದಲ್ಲೇ ಮೊದಲ ಬಾರಿಗೆ ಕೈಗೊಂಡಿರುವ 'ವಾತ್ಸಲ್ಯ ಮಕ್ಕಳ ಆರೋಗ್ಯ ಅಭಿಯಾನ' ಸಚಿವ ಬಸವರಾಜ ಬೊಮ್ಮಾಯಿ ಅವರ ಪರಿಕಲ್ಪನೆ

ಮೊಹಮ್ಮದ್ ರೋಶನ್
ಸಿಇಒ, ಹಾವೇರಿ ಜಿಲ್ಲಾ ಪಂಚಾಯಿತಿ

ಜಿಲ್ಲಾಸ್ಪತ್ರೆಯಲ್ಲಿ 30 ಹಾಸಿಗೆ, ತಾಲ್ಲೂಕು ಆಸ್ಪತ್ರೆಯಲ್ಲಿ 10 ಹಾಸಿಗೆ, ಪಿಎಚ್‌ಸಿಗಳಲ್ಲಿ 1 ಹಾಸಿಗೆಯನ್ನು ಮಕ್ಕಳ ಕೋವಿಡ್ ಚಿಕಿತ್ಸೆಗಾಗಿಯೇ ಮೀಸಲಿಡಲಾಗಿದೆ

ಸಂಜಯ ಶೆಟ್ಟೆಣ್ಣವರ
ಹಾವೇರಿ ಜಿಲ್ಲಾಧಿಕಾರಿ

ಹಾವೇರಿ ಜಿಲ್ಲಾಸ್ಪತ್ರೆಯಲ್ಲಿ 'ಮಕ್ಕಳ ಕೋವಿಡ್ ವಾರ್ಡ್' ಅನ್ನು ವಿಶೇಷವಾಗಿ ಸಿದ್ಧಪಡಿಸಿದ್ದು, ಗೋಡೆಗಳ ಮೇಲೆ ಆಕರ್ಷಕ ಚಿತ್ರಗಳನ್ನು ಬಿಡಿಸಲಾಗಿದೆ
– ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

ಸುದ್ದಿ 2 ನಿಮಿಷ

ಸಕ್ರಿಯ ಪ್ರಕರಣ 65 ಸಾವಿರಕ್ಕೆ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, ಸದ್ಯ 65,312 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಹೊಸದಾಗಿ 3,203 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಒಂದು ದಿನದ ಅವಧಿಯಲ್ಲಿ 1.56 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 2.05 ರಷ್ಟು ವರದಿಯಾಗಿದೆ. ಬೆಂಗಳೂರಿನಲ್ಲಿ 676 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500 ರ ಗಡಿಯೊಳಗಡೆ ಇವೆ. ಈ ಸಂಖ್ಯೆ 16 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 28.47 ಲಕ್ಷ ದಾಟಿದೆ.

ಕೊರೊನಾ ಸೋಂಕಿತರಲ್ಲಿ 94 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮರಣ ಪ್ರಮಾಣ ದರವು ಶೇ 2.93 ರಷ್ಟು ವರದಿಯಾಗಿದೆ. ರಾಜ್ಯದ 23 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ದೃಢಪಟ್ಟಿವೆ. ಬೆಂಗಳೂರಿನಲ್ಲಿ 18, ದಕ್ಷಿಣ ಕನ್ನಡದಲ್ಲಿ 14 ಮಂದಿ ಮೃತಪಟ್ಟಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 35,134ಕ್ಕೆ ತಲುಪಿದೆ.

ಸೋಂಕಿತರಲ್ಲಿ 14,302 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 27.46 ಲಕ್ಷ ದಾಟಿದೆ.



'ಲಸಿಕೀಕರಣ ಮುಗಿಯುತ್ತಿದ್ದಂತೆ ಕಾಲೇಜು ಆರಂಭ'

ಬೆಂಗಳೂರು: 'ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ಸಿಬ್ಬಂದಿಗೆ ಇದೇ 7ರೊಳಗೆ ಕೋವಿಡ್ ಲಸಿಕೆ ಹಾಕಿಸಲು ಆದ್ಯತೆ ನೀಡಬೇಕು' ಎಂದು ಕುಲಪತಿಗಳಿಗೆ ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಸೂಚಿಸಿದರು.

ಲಸಿಕೆ ಅಭಿಯಾನವನ್ನು ತ್ವರಿತಗೊಳಿಸುವ ಸಂಬಂಧ ಕುಲಪತಿಗಳ ಜತೆ ಗುರುವಾರ ವಿಡಿಯೊ ಸಂವಾದ ನಡೆಸಿದ ಬಳಿಕ ಮಾತನಾಡಿದ ಅವರು, 'ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಲಸಿಕೀಕರಣ ಮುಗಿದ ಬಳಿಕ ಭೌತಿಕವಾಗಿ ತರಗತಿಗಳನ್ನು ಆರಂಭಿಸುವ ಕುರಿತು ನಿರ್ಧರಿಸಲಾಗುವುದು. ಈಗ ನಡೆಯುತ್ತಿರುವ ಆನ್‌ಲೈನ್ ತರಗತಿಗಳು ಅಬಾಧಿತ' ಎಂದರು. 'ತರಗತಿಗಳು ನೇರವಾಗಿ ಆರಂಭಿಸುವುದಕ್ಕೂ ಮೊದಲು ಎಲ್ಲ ವಿದ್ಯಾರ್ಥಿಗಳಿಗೂ ಲಸಿಕೆ ನೀಡಬೇಕು. ನಿತ್ಯ ಪೂರೈಕೆಯಾಗುವ ಲಸಿಕೆಗೆ ಸಂಬಂಧಿಸಿದಂತೆ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಬೇಕು. ಯಾವುದೇ ಕಾರಣಕ್ಕೂ ಶೈಕ್ಷಣಿಕ ಚಟುವಟಿಕೆ ನಿಲ್ಲಬಾರದು. ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆ ಆಗಬಾರದು. ಈ ವಿಷಯವನ್ನು ಎಲ್ಲ ಕುಲಪತಿಗಳು ಗಂಭೀರವಾಗಿ ಪರಿಗಣಿಸಬೇಕು' ಎಂದು ನಿರ್ದೇಶನ ನೀಡಿದರು.

ಪದವಿ ವಿದ್ಯಾರ್ಥಿಗಳಿಗೆ ಸಹಾಯವಾಣಿ: 'ವಿದ್ಯಾರ್ಥಿಗಳಿಗೆ ಡಿಜಿಟಲ್ ವೇದಿಕೆಗಳ ಮೂಲಕ ಈಗಾಗಲೇ ಎಲ್ಲ ಮಾಹಿತಿ ಸಿಗುತ್ತಿದ್ದರೂ, ಮತ್ತಷ್ಟು ಅನುಕೂಲ ಮಾಡಿಕೊಡಲು ಆಯಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಸಹಾಯವಾಣಿ ರೂಪಿಸಿಕೊಳ್ಳಬೇಕು. ಅದಕ್ಕೆ ಅಗತ್ಯ ನೆರವು ಸರ್ಕಾರ ನೀಡಲಿದೆ. ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ಆಗುತ್ತಿರುವುದರಿಂದ ಈ ವ್ಯವಸ್ಥೆ ಅತ್ಯುತ್ತಮ ಉಪಕ್ರಮ ಆಗಲಿದೆ' ಎಂದರು.

ಪ್ರಜಾವಾಣಿ
ಸಿನಿ ಸಿಪ್ ಚಪ್ಪರಿಸಿದಷ್ಟೂ ನೆನಪು..
ಸಿದ್ಧಲಿಂಗಯ್ಯ 'ಗೆಳತಿ ಗೆಳತಿ' ಹಾಡು ಬರೆದದ್ದೇಕೆ?
ಸಿನಿಮಾ ತೆರೆಮೇಲೆ ಕಾಣದ ಅಪರೂಪದ ನೆನಪು ಸಹೃದಯರಿಗೆ ಗುಟುಕಿನ ರೂಪದಲ್ಲಿ...
https://bit.ly/3jA45vo



ಭಕ್ತರಿಗೆ ಪ್ರವೇಶ: ಸೋಮವಾರದೊಳಗೆ ತೀರ್ಮಾನ

ಬೆಂಗಳೂರು: ದೇವಸ್ಥಾನಗಳಿಗೆ ಭಕ್ತರ ಪ್ರವೇಶ ನಿರ್ಬಂಧ ಸಡಿಲಿಸುವ ಸಂಬಂಧ ಜುಲೈ 5ರೊಳಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಜರಾಯಿ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಸ್ಪಷ್ಟಪಡಿಸಿದರು. 'ಭಕ್ತರಿಗೆ ಪ್ರವೇಶ ನೀಡಿದರೆ ಒಮ್ಮೆಲೆ ನೂರಾರು ಜನ ಸೇರಿ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತೆ ಹೆಚ್ಚಾಗುವ ಆತಂಕ ಇದೆ. ಮುಖ್ಯಮಂತ್ರಿ ಜೊತೆ ಚರ್ಚಿಸಿ ಅಂತಿಮ ತೀರ್ಮಾನಕ್ಕೆ ಬರಲಾಗುವುದು' ಎಂದರು.

ಶತಮಾನೋತ್ಸವ ಭವನ ಉದ್ಘಾಟಿಸಿದ ಸಿಎಂ

ತೆರಿಗೆ ಸಂಗ್ರಹ ಕುಂಠಿತ: ಅಭಿವೃದ್ಧಿ ಕಾರ್ಯಗಳ ಹಿನ್ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದಾಗಿ ತೆರಿಗೆ ಸಂಗ್ರಹ ಕ್ಷೀಣಿಸಿದೆ. ಹೀಗಾಗಿ ಅಭಿವೃದ್ಧಿ ಕೆಲಸಗಳು ಕುಂಠಿತಗೊಂಡಿವೆ. ಸರ್ಕಾರಿ ನೌಕರರ ಇತರ ಬೇಡಿಕೆಗಳನ್ನು ಈಡೇರಿಸಲು ಮುಂದಿನ ದಿನಗಳಲ್ಲಿ ಪ್ರಯತ್ನಿಸುತ್ತೇನೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭರವಸೆ ನೀಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ಕಬ್ಬನ್ ಉದ್ಯಾನದಲ್ಲಿ ನೂತನವಾಗಿ ನಿರ್ಮಿಸಿರುವ ಶತಮಾನೋತ್ಸವ ಭವನ ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನೌಕರರ ಹಲವು ಬೇಡಿಕೆಗಳನ್ನು ಈಡೇರಿಸಿದ ತೃಪ್ತಿ ಇದೆ. ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಈ ಹಿಂದೆ ₹40 ಲಕ್ಷ ಅನುದಾನ ನೀಡಲಾಗುತ್ತಿತ್ತು. ನಮ್ಮ ಸರ್ಕಾರ ₹2.5 ಕೋಟಿ ಅನುದಾನ ಕೊಟ್ಟಿದೆ' ಎಂದರು.

'ಸರ್ಕಾರಿ ನೌಕರರು ಹಾಗೂ ಅವರ ಅವಲಂಬಿತರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಸಂಪೂರ್ಣ ನಗದು ರಹಿತ ವೈದ್ಯಕೀಯ ಸೇವೆ ಒದಗಿಸುವ ಯೋಜನೆ ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ನೌಕರರ ಮೇಲಿನ ಅನಾಮಧೇಯ ದೂರುಗಳಿಗೆ ಸರ್ಕಾರದ ತನಿಖೆಗೆ ಅಗತ್ಯವಿಲ್ಲ ಎಂಬ ಆದೇಶ ಹೊರಡಿಸಲಾಗಿದೆ. ಇದರಿಂದ ನೌಕರರು ಮುಕ್ತವಾಗಿ ಕಾರ್ಯನಿರ್ವಹಿಸಲು ಸಹಾಯಕವಾಗಲಿದೆ. ಜೊತೆಗೆ ರಾಜ್ಯ ಸರ್ಕಾರಿ ಮಹಿಳಾ ನೌಕರರಿಗೆ ಅವರ ಸೇವಾವಧಿಯಲ್ಲಿ 180 ದಿನಗಳ ಶಿಶು ಪಾಲನಾ ರಜೆ ನೀಡುವ ಸಂಬಂಧ ಆದೇಶ ಹೊರಡಿಸಲಾಗಿದೆ. ಇದರಿಂದ ಸುಮಾರು 4 ಲಕ್ಷ ಮಹಿಳೆಯರಿಗೆ ಪ್ರಯೋಜನವಾಗಲಿದೆ' ಎಂದು ತಿಳಿಸಿದರು.

'ಸರ್ಕಾರಿ ನೌಕರರ ಕುಂದು ಕೊರತೆಗಳನ್ನು ಆಲಿಸಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಸಂಘದ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳ ಅಧ್ಯಕ್ಷರ ನೇತೃತ್ವದಲ್ಲಿ ಜಂಟಿ ಸಮಾಲೋಚನ ಸಮಿತಿ ರಚಿಸಲಾಗಿದೆ. ಕೋವಿಡ್ ಸಂಕಷ್ಟದ ಸಮಯದಲ್ಲೂ ನೌಕರರು ಸರ್ಕಾರಕ್ಕೆ ದೇಣಿಗೆ ನೀಡಿರುವುದು ಪ್ರಶಂಸನೀಯ. ರಾಜ್ಯದ ವಿವಿಧೆಡೆಯಿಂದ ಬರುವ ಸರ್ಕಾರಿ ನೌಕರರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ₹13 ಕೋಟಿ ವೆಚ್ಚದಲ್ಲಿ ಶತಮಾನೋತ್ಸವ ಭವನ ನಿರ್ಮಿಸಲಾಗಿದೆ' ಎಂದು ಹೇಳಿದರು.

'ಗ್ರಾಮೀಣ ಭಾಗದ ಎಲ್ಲರಿಗೂ ಸರ್ಕಾರದ ಯೋಜನೆಗಳನ್ನು ತಲುಪಿಸಲು ಅಧಿಕಾರಿಗಳು ಶ್ರಮಿಸುತ್ತಿದ್ದಾರೆ. ಇನ್ನಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಿ ಸರ್ಕಾರದ ಗೌರವ ಹೆಚ್ಚಿಸಬೇಕು' ಎಂದೂ ಅವರು ಸಲಹೆ ನೀಡಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಕ್ಷರಿ ಅವರು ಬಾಕಿ ಇರುವ ತುಟ್ಟಿಭತ್ಯೆ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಲೋಕೋಪಯೋಗಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಇದ್ದರು.

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೂತನ ಶತಮಾನೋತ್ಸವ ಭವನ ಉದ್ಘಾಟಿಸಿದರು. (ಎಡದಿಂದ) ಸಂಸದ ಬಿ.ವೈ.ರಾಘವೇಂದ್ರ, ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಕ್ಷರಿ ಇದ್ದರು –ಪ್ರಜಾವಾಣಿ ಚಿತ್ರ

ಗ್ರಾ.ಪಂ ಗುತ್ತಿಗೆ ನೌಕರರ ಕಾಯಮಾತಿ ಇಲ್ಲ: ಈಶ್ವರಪ್ಪ

ಒಂದನೇ ಪುಟದಿಂದ

'ಜಲಜೀವನ್ ಮಿಷನ್‌ನಡಿ ಪ್ರತಿ ಮನೆಗೂ ನಲ್ಲಿ ನೀರಿನ ಸಂಪರ್ಕ ಕಲ್ಪಿಸಿ, ನಿತ್ಯ 55 ಲೀಟರ್ ನೀರು ಪೂರೈಸಲಾಗುತ್ತಿದೆ. ಕೆಲವೆಡೆ ಪೈಪ್‌ಲೈನ್ ಹಾಕಲಾಗಿದ್ದರೂ ಕೆಲವು ಮನೆಗಳಿಗೆ ನಲ್ಲಿ ಸಂಪರ್ಕ ಇರಲಿಲ್ಲ. ಈ ಕಾಮಗಾರಿ ಮುಂದುವರಿಯಲಿದೆ. ನಲ್ಲಿ ಸಂಪರ್ಕಕ್ಕೆ ಯಾವುದೇ ದರ ನಿಗದಿಪಡಿಸಿಲ್ಲ. ಆದರೆ, ಗ್ರಾಮ ಪಂಚಾಯಿತಿಗಳೇ ನೀರಿನ ದರ ನಿಗದಿ ಮಾಡಲಿವೆ. ಪ್ರತಿ ತಿಂಗಳಿಗೆ ₹ 100 ನಿಗದಿಯಾಗಿದ್ದರೂ ಕೆಲವೆಡೆ ಅದನ್ನೂ ಕಟ್ಟುತ್ತಿಲ್ಲ' ಎಂದರು.

'ಗ್ರಾಮೀಣ ಭಾಗದಲ್ಲಿ ಘನ ತ್ಯಾಜ್ಯ ನಿರ್ವಹಣೆಯ ಜಾಗೃತಿ ಮೂಡಿಸುವ ಕೆಲಸವೂ ಆಗುತ್ತಿದೆ. 1,800 ಗ್ರಾಮ ಪಂಚಾಯಿತಿಗಳಲ್ಲಿ ಘನ ತ್ಯಾಜ್ಯ ನಿರ್ವಹಣೆ ಘಟಕಗಳ ನಿರ್ಮಾಣ ಮುಗಿಯುತ್ತಿದೆ. ಕೆಲವೆಡೆ ತ್ಯಾಜ್ಯ ವಿಲೇವಾರಿಗೆ ಸ್ಥಳ ಸಿಗುತ್ತಿಲ್ಲ' ಎಂದರು.

22 ಲಕ್ಷ ನರೇಗಾ ಕಾರ್ಮಿಕರಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೋವಿಡ್ ಲಸಿಕೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

'ವಿನಾಯಿತಿ': ಸಾವಿರಾರು ಎಕರೆ ಅಕ್ರಮ ಮಂಜೂರು?

ಒಂದನೇ ಪುಟದಿಂದ

ತನಿಖೆ ಆಗಲಿ: 'ನಿಯಮದಿಂದ ಹಾಸನ ಜಿಲ್ಲೆಯೊಂದಕ್ಕೇ ವಿನಾಯಿತಿ ನೀಡಲು ಅವಕಾಶವಿಲ್ಲ. ಕಾನೂನು ಎಲ್ಲರಿಗೂ ಒಂದೇ, ನಿಯಮ ಮತ್ತು ಅಧಿನಿಯಮಕ್ಕೆ ತಿದ್ದುಪಡಿ ಮಾಡಬೇಕಾದರೆ ಸಚಿವ ಸಂಪುಟ ನಿರ್ಧರಿಸಬೇಕು. ಆದರೆ ಹಾಸನದ ಸಂತ್ರಸ್ತರಿಗೆ ಮಾತ್ರ ಅನ್ವಯಿಸುವಂತೆ ಆದೇಶ ಹೊರಡಿಸಿರುವುದು ಅನುಮಾನ ಮೂಡಿಸಿದೆ' ಎನ್ನುತ್ತಾರೆ ನಿವೃತ್ತ ತಹಶೀಲ್ದಾರ್ ಅಣ್ಣೇಗೌಡ.

'ನಿರಾಶ್ರಿತರಿಗೆ 1969–70ರಲ್ಲಿ ಸಕಲೇಶಪುರ ತಾಲ್ಲೂಕಿನಲ್ಲಿ ಕಾಯ್ದಿರಿಸಿರುವ ಭೂಮಿ ಕೇವಲ 1,056 ಎಕರೆ. ಭೂ ಹಗರಣದಲ್ಲಿ ಶಾಮೀಲಾಗಿರುವವರು, 26 ಸಾವಿರ ಎಕರೆ ಕಾಯ್ದಿರಿಸಿದೆ ಎಂದು ನಕಲಿ ಅಧಿಸೂಚನೆಯನ್ನು ಸೃಷ್ಟಿಸಿರುವುದು ಈಗಾಗಲೇ ಬೆಳಕಿಗೆ ಬಂದಿದೆ. ಅದೇ ರೀತಿ ಷರತ್ತಿಗೆ ವಿನಾಯಿತಿ ಆದೇಶ ಪತ್ರವನ್ನೂ ಸೃಷ್ಟಿಸಿರಬಹುದು. ಆ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು' ಎಂದು ವಕೀಲ ಹಾಗೂ ಮಲೆನಾಡು ಜನಪರ ಹೋರಾಟ ಸಮಿತಿ ಅಧ್ಯಕ್ಷ ಎಚ್.ಎ.ಕಿಶೋರ್‌ಕುಮಾರ್ ಒತ್ತಾಯಿಸುತ್ತಾರೆ.

ಅಣ್ಣೇಗೌಡ

ಕಿಶೋರ್ ಕುಮಾರ್

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ವಿಶೇಷ ಭೂ ಸ್ವಾಧೀನಾಧಿಕಾರಿ ಮಂಜುನಾಥ್, 'ಸಂತ್ರಸ್ತರಿಗೆ ಮಂಜೂರಾದ ಜಮೀನು ಹದಿನೈದು ವರ್ಷ ಪರಭಾರೆ ನಿಷೇಧ ಅವಧಿ ಷರತ್ತಿಗೆ ವಿನಾಯಿತಿ ನೀಡಿರುವ ಕುರಿತು ವಿಧಾನಸಭೆಲೆಕ್ಕ ಪರಿಶೋಧನ ಸಮಿತಿ ಮುಂದೆ ಎರಡು ಬಾರಿ ಚರ್ಚೆಯಾಗಿದೆ. ಈ ವಿಷಯ ಸರ್ಕಾರದ ಮಟ್ಟದಲ್ಲಿದೆ' ಎಂದರು.

2019 ಆಗಸ್ಟ್ 25 ರಂದು 'ಪ್ರಜಾವಾಣಿ' ಒಳನೋಟದಲ್ಲಿ ಹಗರಣದ ಸಮಗ್ರ ತನಿಖಾ ವರದಿ ಪ್ರಕಟವಾಗಿತ್ತು. ನಂತರ ಸರ್ಕಾರ ಹಗರಣದ ತನಿಖೆ ನಡೆಸುವಂತೆ ಜಿಲ್ಲಾಧಿಕಾರಿಗೆ ಆದೇಶಿಸಿತ್ತು. ಮಧ್ಯವರ್ತಿಯಿಂದ ಹಣ ಪಡೆದು ಭೂಮಿ ಮಂಜೂರು ಮಾಡಿಕೊಡುವುದಾಗಿ ಹೇಳಿ ವಂಚಿಸಿದ ಆರೋಪದ ಮೇರೆಗೆ ಸಕಲೇಶಪುರ ತಾಲ್ಲೂಕಿನ ಕಂದಾಯ ನಿರೀಕ್ಷಕ ಮಂಜುನಾಥ್ ಸೇರಿದಂತೆ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ. ತನಿಖೆ ಪ್ರಗತಿಯಲ್ಲಿದೆ.

ಕಾರು ಅಪಘಾತದಲ್ಲಿ ನಟ ಜಗ್ಗೇಶ್ ಪುತ್ರ ಪಾರು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ನಟ ಜಗ್ಗೇಶ್ ಅವರ ಕಿರಿಯ ಪುತ್ರ ಯತಿರಾಜ್ ಪ್ರಯಾಣಿಸುತ್ತಿದ್ದ ಕಾರು ನಗರ ಹೊರವಲಯದ ಅಗಲಗುರ್ಕಿ ಬಳಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 44ರಲ್ಲಿ (ಬೆಂಗಳೂರು–ಹೈದರಾಬಾದ್) ಗುರುವಾರ ಅಪಘಾತಕ್ಕೀಡಾಯಿತು.

ಯತಿರಾಜ್ ಬಾಗೇಪಲ್ಲಿ ಕಡೆಯಿಂದ ಬೆಂಗಳೂರಿನತ್ತ ಪ್ರಯಾಣಿಸುತ್ತಿದ್ದರು. ಈ ವೇಳೆ ದ್ವಿಚಕ್ರವಾಹನ ಸವಾರರೊಬ್ಬರು ಹೆದ್ದಾರಿಯಲ್ಲಿ ತಿರುವು ತೆಗೆದುಕೊಳ್ಳಲು (ಯೂಟರ್ನ್) ಮುಂದಾಗಿದ್ದಾರೆ. ಆಗ ದ್ವಿಚಕ್ರವಾಹನ ತಪ್ಪಿಸಲು ಯತಿರಾಜ್ ಮುಂದಾಗಿದ್ದು ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಮೂರು ಪಲ್ಟಿಯಾಗಿದೆ. ಕಾರಿನಿಂದ ಕೆಳಕ್ಕೆ ಬಿದ್ದ ಯತಿರಾಜ್ ಅವರನ್ನು ಸ್ಥಳೀಯರು ಉಪಚರಿಸಿದರು. ಅವರಿಗೆ ಸಣ್ಣಪುಟ್ಟಗಾಯಗಳಾಗಿದ್ದವು. ಕಾರಿನ ಮುಂಭಾಗಕ್ಕೆ ಸಂಪೂರ್ಣ ಹಾನಿಯಾಗಿದೆ.

ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕಳುಹಿಸಲಾಯಿತು. ಈ ವೇಳೆ ಪೊಲೀಸರು ವಿಚಾರಣೆ ನಡೆಸಿದರು.

'ಅಪಘಾತ ನಡೆದ ಸ್ಥಳದಲ್ಲಿ ಬೆಸ್ಕಾಂನ ಮೂರು ಸಿಬ್ಬಂದಿ ಕೆಲಸ ಮಾಡುತ್ತಿದ್ದರು. ಈ ಪ್ರತ್ಯಕ್ಷದರ್ಶಿಗಳು ಅಪಘಾತಕ್ಕೆ ಸಂಬಂಧಿಸಿದಂತೆ ದೂರು ನೀಡಿದ್ದಾರೆ. ಯತಿರಾಜ್ ಅವರಿಗೆ ಮುಖ, ಹಣೆ ಮತ್ತು ಕಾಲಿಗೆ ಗಾಯವಾಗಿದೆ. ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ತೆರಳಿದ್ದಾರೆ. ಅವರು ಗುಣವಾದ ನಂತರ ಮುಂದಿನ ಪ್ರಕ್ರಿಯೆಗಳನ್ನು ನಡೆಸಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್ ಕುಮಾರ್ ತಿಳಿಸಿದ್ದಾರೆ.

ಕಾಳಿ ನದಿಯಿಂದ ಹೊರಬಂದು ಆತಂಕ ಸೃಷ್ಟಿಸಿದ್ದ ಮೊಸಳೆ

ಕೋಗಿಲಬನ: ಬೆಳಿಗ್ಗೆ ಮೊಸಳೆ ವಾಕಿಂಗ್!

ಪ್ರಜಾವಾಣಿ ವಾರ್ತೆ

ದಾಂಡೇಲಿ (ಉತ್ತರ ಕನ್ನಡ): ಇಲ್ಲಿನ ಕಾಳಿ ನದಿಯ ಪಕ್ಕದಲ್ಲಿ ಇರುವ ಕೋಗಿಲಬನ ಗ್ರಾಮದಲ್ಲಿ ಗುರುವಾರ ಬೆಳಿಗ್ಗೆ ಮೊಸಳೆ ಪ್ರತ್ಯಕ್ಷವಾಯಿತು. ಸುಮಾರು ಅರ್ಧಗಂಟೆ ಗ್ರಾಮದೊಳಗಿನ ರಸ್ತೆಯಲ್ಲಿ ಸಂಚರಿಸಿ ಜನರಲ್ಲಿ ಆಂತಕ ಸೃಷ್ಟಿಸಿತ್ತು.

ಕಾಳಿ ನದಿಯಿಂದ ಹೊರಬಂದ ಮೊಸಳೆ ಜನವಸತಿ ಪ್ರದೇಶಗಳಲ್ಲಿ ಸಂಚರಿಸಿತು. ಯಾವುದೇ ಸಾಕು ಪ್ರಾಣಿಗಳಿಗೆ ತೊಂದರೆ ಮಾಡಲಿಲ್ಲ. ಆದರೆ, ಯಾರದ್ದಾದರೂ ಮನೆಯೊಳಗೆ ಮೊಸಳೆ ಹೋದರೆ ಹೇಗೆ? ಎನ್ನುವ ಆತಂಕದಿಂದ ಜನರು ಭಯಭೀತರಾಗಿದ್ದರು. ಸ್ಥಳಕ್ಕೆ ಬಂದ ಅರಣ್ಯ ಇಲಾಖೆ ಸಿಬ್ಬಂದಿಯ ಮೊಸಳೆಯನ್ನು ಮತ್ತೆ ನದಿಗೆ ಸೇರಿಸಿದರು.

ಗ್ರಾಮದ ಪಕ್ಕದಲ್ಲಿ ಕಾಳಿ ನದಿಯಿದ್ದು, ಅಣತಿ ದೂರದಲ್ಲಿ ಮೊಸಳೆ ಪಾರ್ಕ್ ಇದೆ. ಅಲ್ಲಿ ನೂರಾರು ಮೊಸಳೆಗಳಿವೆ. ಆದರೆ, ಜನವಸತಿ ಪ್ರದೇಶಕ್ಕೆ ಆಗಾಗ ರಾತ್ರಿ ವೇಳೆಯಲ್ಲಿ ಮಾತ್ರವೇ ಬರುತ್ತಿದ್ದ ಮೊಸಳೆಗಳು ಬೆಳಗಿನ ಹೊತ್ತಿನಲ್ಲಿ ಬಂದು ಜನರಲ್ಲಿ ಅಚ್ಚರಿ ಉಂಟುಮಾಡಿವೆ. ಬೆಳಿಗ್ಗೆ ವಾಕಿಂಗ್ ಬಂದ ಜನರು ಮೊಸಳೆಯನ್ನು ಕಂಡು ಗಾಬರಿಗೊಂಡರೂ, ಹಲವರು ತಮ್ಮ ಮೊಬೈಲ್‌ನಲ್ಲಿ ದೃಶ್ಯ ಸೆರೆ ಹಿಡಿದು ಜಾಲತಾಣಗಳಲ್ಲಿ ಹಂಚಿಕೊಂಡರು.

ಮುಖ್ಯಾಂಶಗಳು
- ಅರ್ಧಗಂಟೆ ಗ್ರಾಮದೊಳಗಿನ ರಸ್ತೆಯಲ್ಲಿ ಸಂಚಾರ
- ಮತ್ತೆ ನದಿಗೆ ಸೇರಿಸಿದ ಅರಣ್ಯ ಇಲಾಖೆ ಸಿಬ್ಬಂದಿ

ದಾಂಡೇಲಿಯ ಕೋಗಿಲಬನ ಗ್ರಾಮದ ಬೀದಿಗಳಲ್ಲಿ ಸಂಚರಿಸಿದ ಮೊಸಳೆ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business Offers
Finance

★ಸಾಲ ಸೌಲಭ್ಯ★ ವ್ಯಾಪಾರಸಾಲ, ಆಸ್ತಿಸಾಲ, ಅಡಮಾನಸಾಲ, ಶಿಕ್ಷಣಸಾಲ, ಶೇ.6%ರ ಬಡ್ಡಿದರದಲ್ಲಿ, 40%ಸಬ್ಸಿಡಿ, ಎಲ್ಲಾರೀತಿಯ ಸಾಲ ದೊರೆಯುತ್ತದೆ.ಸಂಪರ್ಕಿಸಿ: 09499457849/ 09953286082.ಏಜೆಂಟರು ಸಂಪರ್ಕಿಸಬಹುದು.

ಭವಿಷ್ಯ
Astrology

★ಮಂತ್ರದುರ್ಗಿ ಮಾಂತ್ರಿಕರು★ ಕೇರಳ, ಕೊಳ್ಳೆಗಾಲದ ಮಂತ್ರಸಿದ್ಧ_ವಾಕ್ಸಿದ್ಧಿಯಿಂದ ಸ್ತ್ರೀಪುರುಷ ವಶೀಕರಣ ಕೆಲವೇ_ಗಂಟೆಗಳಲ್ಲಿ.ಫೋನಿನ_ ಮೂಖಾಂತರ ಶಾಶ್ವತ_ಪರಿಹಾರ. (ಸ್ತ್ರೀಪುರುಷ ವಶೀಕರಣ_ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★॥ಶ್ರೀಆಂಜನೇಯಸ್ವಾಮಿ॥★ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾಧೆ, ಕೋರ್ಟ್‌ಕೇಸ್, ವ್ಯಾಪಾರ, ಸಂತಾನ ಇನ್ನೂಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9972550137

★॥ಶ್ರೀಶಾಕಂಬರಿದೇವಿ॥★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ ಇನ್ನೂಯಾವುದೇ ಸಮಸ್ಯೆಗಳಿಗೆ 11ನಿಮಿಷದಲ್ಲಿ ಶಾಶ್ವತ ಪರಿಹಾರ. ಡಾ॥ ವಿವೇಕಾನಂದ ಜೋಶಿ 7899899949

ರಿಯಲ್ ಎಸ್ಟೇಟ್ ಸೆಲ್ಲಿಂಗ್
Mysore
GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8088330330

ಉದ್ಯೋಗಾವಕಾಶ
General

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ ಹಾಗೂ ಆಫೀಸ್ ಕೆಲಸಗಳಿಗೆಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-.8792155097, 8792156697

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್‌ಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9141634619

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು ನೇರನೇಮಕಾತಿ 16,800-56,000/- ವಸತಿಯೂಟವಿದೆ. 7204853296, 7204396011

ಬೆಂಗಳೂರಿನಲ್ಲಿರುವ ಆರ್ಯವೇದಿಕ್ ಕಂಪನಿಗೆ ಪ್ರತಿ ಜಿಲ್ಲೆಯಿಂದ ಆರ್ಯವೇದಿಕ್ ವೈದ್ಯರು, ನೇರ ಮಾರಾಟ ಪ್ರತಿನಿದಿಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ. 8892501007/ 9606701007

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

Part-Time Jobs

ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

ನಿಮ್ಮ ಬಿಡುವಿನ ವೇಳೆಯಲ್ಲಿ ಮನೆಯಿಂದಲೇ ಕುಳಿತು ಬುಕ್ ಬರೆಯುವ ಫಾರಂ ತುಂಬುವ ಎಕ್ಸೆಲ್ ಶೀಟ್ ಡೇಟಾ ಎಂಟ್ರಿ ಕೆಲಸ ಮಾಡಿ ಗಳಿಸಿ ತಿಂಗಳಿಗೆ 12,000-15,000 ಕನ್ನಡ,ಇಂಗ್ಲೀಷ್ ಓದಲು ಬರೆಯಲು ಬರುವ ಎಲ್ಲರಿಗೂ ಮುಕ್ತ ಅವಕಾಶ. 9902603707, 9686114647

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಬೆಂಗಳೂರಿನಲ್ಲಿ ಉಳಿದುಕೊಂಡು ಮನೆಗೆಲಸ, ಅಡುಗೆ, ಮಕ್ಕಳು ನೋಡಿಕೊಳ್ಳಲು ಹಿಂದಿ/ ಕನ್ನಡಬಲ್ಲ ಮಹಿಳೆಯರು ಬೇಕಾಗಿದ್ದಾರೆ. ಊಟ, ವಸತಿ ಸಂಬಳ. ಸಂಪರ್ಕಿಸಿ: 7411548115.

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ದರನ್ನು, ವಯಸ್ಸಾದವರನ್ನು, ರೋಗಿಯನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು-56 ಸಂಪರ್ಕಿಸಿ : 9606385001, 9606523337

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ,ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಭಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9916551457/ 9916544057/ 9900371597/ 6363957317

ವೈವಾಹಿಕ
Brides Wanted
Second Marriage

ಉತ್ತಮ ವರಮಾನ ಇರುವ ಬಿಸಿನೆಸ್ ಮಾಡುತ್ತಿರುವ ವರನಿಗೆ ಎರಡನೇ ವಿವಾಹಕ್ಕಾಗಿ ವಧು ಬೇಕಾಗಿದೆ. 8296595088

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277 Vishal: 9845114560 Tanveer: 9886213331
E-mail: dhclassifieds@deccanherald.co.in
DH Classifieds More value, more impact

ಅನರ್ಹತೆ ಅರ್ಜಿ ಕಾಲಮಿತಿಯೊಳಗೆ ವಿಲೇವಾರಿ: ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್

ಶಾಸಕರ ಅನರ್ಹತೆ: ಸಂಸತ್ತೇ ಕಾಯ್ದೆ ರಚಿಸಲಿ

ನವದೆಹಲಿ (ಪಿಟಿಐ): ಶಾಸಕರ ಅನರ್ಹತೆಗೆ ಸಂಬಂಧಿಸಿದ ಅರ್ಜಿಗಳನ್ನು ವಿಧಾನಸಭೆಯ ಸಭಾಧ್ಯಕ್ಷ ಅಥವಾ ವಿಧಾನಪರಿಷತ್‌ನ ಸಭಾಪತಿಯು ನಿಗದಿತ ಕಾಲಮಿತಿಯಲ್ಲಿ ವಿಲೇವಾರಿ ಮಾಡುವುದಕ್ಕೆ ಸಂಬಂಧಿಸಿದ ಕಾನೂನು ರೂಪಿಸುವ ಕೆಲಸವನ್ನು ಶಾಸನಸಭೆಯೇ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

'ಸಂಸತ್ತು ನಿರ್ಧಾರ ಕೈಗೊಳ್ಳಬೇಕಾದ ವಿಚಾರದಲ್ಲಿ ನಾವು ಕಾನೂನು ರೂಪಿಸುವುದು ಹೇಗೆ ಸಾಧ್ಯ' ಎಂದು ಮುಖ್ಯ ನ್ಯಾಯಮೂರ್ತಿ ಎನ್‌. ವಿ. ರಮಣ, ನ್ಯಾಯಮೂರ್ತಿಗಳಾದ ಎ.ಎಸ್‌. ಬೋಪಣ್ಣ ಹಾಗೂ ಹೃಷಿಕೇಶ ರಾಯ್ ಅವರ ಪೀಠ ಪ್ರಶ್ನಿಸಿದೆ.

ಅನರ್ಹತೆಗೆ ಸಂಬಂಧಿಸಿ ಸಲ್ಲಿಕೆಯಾದ ಅರ್ಜಿಗಳನ್ನು ಸಭಾಧ್ಯಕ್ಷರು ಅಥವಾ ಸಭಾಪತಿ ನಿರ್ದಿಷ್ಟ ಅವಧಿಯೊಳಗೆ ಇತ್ಯರ್ಥಗೊಳಿಸಲು ನಿರ್ದೇಶನ ನೀಡಬೇಕು ಎಂದು ಕೋರಿ ಪಶ್ಚಿಮ ಬಂಗಾಳ ಪ್ರದೇಶ ಕಾಂಗ್ರೆಸ್ ಸಮಿತಿ ಸದಸ್ಯ ರಂಜಿತ್ ಮುಖರ್ಜಿ ಅವರು ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಪೀಠವು ನಡೆಸಿತು. ಸಂವಿಧಾನದ ಹತ್ತನೇ ಪರಿಚ್ಛೇದದ ಅಡಿಯಲ್ಲಿ ಸಂಸತ್ತು ಮಾತ್ರ ಈ ವಿಚಾರದಲ್ಲಿ ಕಾಯ್ದೆ ರೂಪಿಸಬಹುದು ಎಂದಿತು.

ಇಂಥ ಅರ್ಜಿಗಳ ಇತ್ಯರ್ಥಕ್ಕೆ ಗಡುವು ನಿಗದಿಪಡಿಸಬೇಕೆಂಬ ಬಗ್ಗೆ ಮಾತ್ರ ಮನವಿ ಸಲ್ಲಿಸಲಾಗಿದೆ ಎಂದು ಅರ್ಜಿದಾರರ ಪರ ವಕೀಲ ಅಭಿಷೇಕ ಜೇಬರಾಜ್ ವಾದಿಸಿದರು.

'ಈ ವಿಷಯವಾಗಿ, ಕರ್ನಾಟಕದ ಶಾಸಕರ ಪ್ರಕರಣದಲ್ಲಿ ನನ್ನ ಅಭಿಪ್ರಾಯವನ್ನು ಈಗಾಗಲೇ ಹೇಳಿದ್ದೇನೆ. ಆ ಪ್ರಕರಣದಲ್ಲೂ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಇದೇ ರೀತಿಯ ವಾದ ಮಂಡಿಸಿದ್ದರು. ಆಗಲೂ ಈ ವಿಷಯವಾಗಿ ನಿರ್ಧಾರ ತೆಗೆದುಕೊಳ್ಳುವುದನ್ನು ಸಂಸತ್ತಿಗೇ ಬಿಟ್ಟಿದ್ದೆವು' ಎಂದು ಮುಖ್ಯ ನ್ಯಾಯಮೂರ್ತಿ ರಮಣ ಹೇಳಿದರು.

ಈ ಬಗ್ಗೆ ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಓದಿದ್ದೀರೋ ಎಂಬ ನ್ಯಾಯಪೀಠದ ಪ್ರಶ್ನೆಗೆ ಅರ್ಜಿದಾರರ ಪರ ವಕೀಲರು 'ಇಲ್ಲ' ಎಂದು ಉತ್ತರಿಸಿದರು.

'ಮೊದಲು ಅದನ್ನು ಓದಿ ನಂತರ ಬನ್ನಿ' ಎಂದು ಹೇಳಿದ ಪೀಠವು, ಇನ್ನೆರಡು ವಾರಗಳ ಬಳಿಕ ಈ ವಿಷಯ ಕೈಗೆತ್ತಿಕೊಳ್ಳುವುದಾಗಿ ತಿಳಿಸಿತು.

ಕರ್ನಾಟಕದ ಶಾಸಕರ ಅನರ್ಹತೆ ಪ್ರಕರಣವನ್ನು 2019ರ ನ.13ರಂದು ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಶಾಸಕರೊಬ್ಬರು ಎಷ್ಟು ಸಮಯದವರೆಗೆ ಅನರ್ಹರಾಗಿರುತ್ತಾರೆ ಎಂಬುದನ್ನು ಹೇಳುವ ಅಥವಾ ಚುನಾವಣೆಗೆ ಸ್ಪರ್ಧಿಸುವುದನ್ನು ನಿಷೇಧಿಸುವ ಅಧಿಕಾರ ಸ್ಪೀಕರ್‌ಗೆ ಇಲ್ಲ ಎಂದು ಹೇಳಿತ್ತು.

ಕರ್ನಾಟಕ ವಿಧಾನಸಭೆಯ ಅಂದಿನ ಸ್ಪೀಕರ್ ರಮೇಶ್ ಕುಮಾರ್ ಅವರು, 17 ಶಾಸಕರನ್ನು 2023ರವರೆಗೆ (ವಿಧಾನಸಭೆ ಅವಧಿ ಮುಗಿಯುವವರೆಗೆ) ಅನರ್ಹಗೊಳಿಸಿ ಆದೇಶ ಹೊರಡಿಸಿದ್ದರು. ಈ ಪ್ರಕರಣದ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಅನರ್ಹಗೊಂಡ ಶಾಸಕರು ಚುನಾವಣೆಗೆ ಸ್ಪರ್ಧಿಸಬಹುದು ಎಂದು ತೀರ್ಪು ನೀಡಿತ್ತು. ಇದೇ ವೇಳೆಗೆ, ಮರು ಚುನಾವಣೆಯಲ್ಲಿ ಆಯ್ಕೆಯಾಗದ ಹೊರತು ಸರ್ಕಾರದಲ್ಲಿ ಯಾವುದೇ ಅಧಿಕಾರವನ್ನು ಹೊಂದುವಂತಿಲ್ಲ ಎಂದಿತ್ತು.

ಶಾಸಕರ ಖರೀದಿಯಂತಹ ಪ್ರಜಾಪ್ರಭುತ್ವ ವಿರೋಧಿ ಚಟುವಟಿಕೆಗಳಿಗೆ ಲಗಾಮು ಹಾಕುವ ದಿಸೆಯಲ್ಲಿ, ಸಂವಿಧಾನದ 10ನೇ ಪರಿಚ್ಛೇದದ ಅಡಿಯಲ್ಲಿ ಕಾನೂನು ರೂಪಿಸಲು ಸಂಸತ್ತು ಪರಿಶೀಲನೆ ನಡೆಸಬೇಕು ಎಂದೂ ಹೇಳಿತ್ತು.

ಕೋವಿಶೀಲ್ಡ್ ಲಸಿಕೆಗೆ 9 ರಾಷ್ಟ್ರಗಳ ಗ್ರೀನ್‌ಪಾಸ್

ನವದೆಹಲಿ (ಪಿಟಿಐ): ಕೋವಿಡ್–19 ತಡೆಯ ಕೋವಿಶೀಲ್ಡ್ ಲಸಿಕೆ ಹಾಕಿಸಿಕೊಂಡಿರುವವರಿಗೆ ಗ್ರೀನ್‌ಪಾಸ್ ನೀಡಲು ಐರೋಪ್ಯ ಒಕ್ಕೂಟದ ಒಂಬತ್ತು ರಾಷ್ಟ್ರಗಳು ಒಪ್ಪಿಗೆ ನೀಡಿವೆ.

ಕೋವಿಡ್ ಲಸಿಕೆ ಹಾಕಿಸಿಕೊಂಡಿರುವವರು ಐರೋಪ್ಯ ಒಕ್ಕೂಟದ ರಾಷ್ಟ್ರಗಳಿಗೆ ಪ್ರವೇಶಿಸಲು ಡಿಜಿಟಲ್ ಕೋವಿಡ್ ಪ್ರಮಾಣಪತ್ರ ಅಥವಾ ಗ್ರೀನ್‌ಪಾಸ್ ನೀಡಲಾಗುತ್ತದೆ. ಕೋವಿಶೀಲ್ಡ್ ಹಾಕಿಸಿಕೊಂಡವರಿಗೆ ಗ್ರೀನ್‌ಪಾಸ್ ನೀಡಲು ಐರೋಪ್ಯ ಔಷಧೀಯ ಸಂಸ್ಥೆ ಒಪ್ಪಿಗೆ ನೀಡಿಲ್ಲ. ಆದರೆ ಸದಸ್ಯ ರಾಷ್ಟ್ರಗಳು ಒಪ್ಪಿಗೆ ನೀಡಲು ಅವಕಾಶ ನೀಡಿತ್ತು. ಈ ಪ್ರಕಾರ ಒಂಬತ್ತು ದೇಶಗಳು ಈಗ ಒಪ್ಪಿಗೆ ನೀಡಿವೆ.

ಗ್ರೀನ್‌ಪಾಸ್ ಗುರುವಾರದಿಂದಲೇ ಅನ್ವಯವಾಗಲಿದೆ. ಆಸ್ಟ್ರಿಯಾ, ಜರ್ಮನಿ, ಸ್ಲೊವೇನಿಯಾ, ಗ್ರೀಸ್, ಐಸ್‌ಲ್ಯಾಂಡ್, ಐರ್ಲೆಂಡ್, ಸ್ಪೇನ್, ಸ್ವಿಟ್ಜರ್ಲೆಂಡ್ ಮತ್ತು ಈಸ್ಟೋನಿಯಾ ದೇಶಗಳು ಕೋವಿಶೀಲ್ಡ್ ಪಡೆದಿರುವ ಭಾರತೀಯರಿಗೆ ಗ್ರೀನ್‌ಪಾಸ್ ನೀಡಲು ಒಪ್ಪಿಗೆ ನೀಡಿವೆ. 'ಭಾರತ ಸರ್ಕಾರವು ದೃಢೀಕರಿಸುವ ಯಾವ ಲಸಿಕೆಯನ್ನು ಪಡೆದುಕೊಂಡಿದ್ದರೂ, ಅವರು ನಮ್ಮ ದೇಶವನ್ನು ಪ್ರವೇಶಿಸಲು ಅನುಮತಿ ನೀಡುತ್ತೇವೆ' ಎಂದು ಈಸ್ಟೋನಿಯಾ ಹೇಳಿದೆ.

'ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆ ಹಾಕಿಸಿಕೊಂಡಿರುವ ಭಾರತೀಯರು ಯೂರೋಪ್ ಪ್ರವೇಶಿಸಲು ಮತ್ತು ಯೂರೋಪ್‌ನ ಎಲ್ಲಾ ರಾಷ್ಟ್ರಗಳನ್ನು ಪ್ರವೇಶಿಸಲು ಅನುಮತಿ ನೀಡಿ' ಎಂದು ಭಾರತದ ವಿದೇಶಾಂಗ ಸಚಿವಾಲಯವು ಐರೋಪ್ಯ ಒಕ್ಕೂಟದ ಎಲ್ಲಾ ರಾಷ್ಟ್ರಗಳಿಗೆ ಮನವಿ ಮಾಡಿಕೊಂಡಿತ್ತು.

ಲಸಿಕೆ ಹಾಕಿಸಿಕೊಂಡವರು ಐರೋಪ್ಯ ದೇಶಗಳನ್ನು ಪ್ರವೇಶಿಸಲು ಅವಕಾಶವಿಲ್ಲ. ಇದನ್ನು ಮರುಪರಿಶೀಲಿಸಬೇಕು ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಜಿ7 ಶೃಂಗಸಭೆಯ ನಂತರ ಪ್ರಸ್ತಾಪಿಸಿದ್ದರು.

ಮುಖ್ಯಾಂಶಗಳು

- ಐರೋಪ್ಯ ಒಕ್ಕೂಟದ ಆಯ್ದ ದೇಶಗಳನ್ನು ಪ್ರವೇಶಿಸಲು ಡಿಜಿಟಲ್ ಪ್ರಮಾಣಪತ್ರ
- ಕೋವಿಶೀಲ್ಡ್ ಲಸಿಕೆ ಹಾಕಿಸಿಕೊಂಡಿರುವ ಭಾರತೀಯರಿಗೆ ಅನ್ವಯ
- ಕೋವ್ಯಾಕ್ಸಿನ್ ಪಡೆದುಕೊಂಡವರಿಗೂ ಅವಕಾಶ ನೀಡಿದ ಈಸ್ಟೋನಿಯಾ

'ರಾಜ್ಯಗಳಿಗೆ 94.6 ಲಕ್ಷ ಡೋಸ್ ಲಸಿಕೆ'

ನವದೆಹಲಿ (ಪಿಟಿಐ): ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಬಾಕಿ ಉಳಿದಿರುವ ಮತ್ತು ಬಳಸದಿರುವ 1.24 ಕೋಟಿಗೂ ಅಧಿಕ ಡೋಸ್ ಲಸಿಕೆ ಲಭ್ಯವಿದೆ. ಅಲ್ಲದೆ, ಮುಂದಿನ ಮೂರು ದಿನಗಳಲ್ಲಿ ಹೆಚ್ಚುವರಿಯಾಗಿ 94,66,420 ಡೋಸ್ ಲಸಿಕೆಯನ್ನು ಪೂರೈಸಲಾಗುವುದು ಎಂದು ಕೇಂದ್ರ ಸರ್ಕಾರವು ಗುರುವಾರ ತಿಳಿಸಿದೆ.

ಈ ಕುರಿತು ಹೇಳಿಕೆ ನೀಡಿರುವ ಆರೋಗ್ಯ ಸಚಿವಾಲಯವು, ಒಟ್ಟಾರೆ 32.92 ಕೋಟಿ ಲಸಿಕೆಯನ್ನು ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ಈವರೆಗೆ ಉಚಿತವಾಗಿ ಪೂರೈಸಲಾಗಿದೆ. ಈ ಪ್ರಕಾರ, ದೇಶದಲ್ಲಿ ಈವರೆಗೆ ಪೋಲಾಗಿರುವ ಲಸಿಕೆಯೂ ಸೇರಿ 31,67,50,891 ಡೋಸ್‌ಗಳು ಬಳಕೆಯಾಗಿವೆ ಎಂದು ತಿಳಿಸಿದೆ.

ಉಳಿದಂತೆ 994,66,420 ಲಸಿಕೆ ಡೋಸ್‌ಗಳನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಮುಂದಿನ ಮೂರು ದಿನಗಳಲ್ಲಿ ಪೂರೈಸಲಾಗುವುದು ಎಂದು ತಿಳಿಸಿದೆ.

ಕೇಂದ್ರ ಸರ್ಕಾರವು ದೇಶದಾದ್ಯಂತ ಲಸಿಕೆ ಅಭಿಯಾನವನ್ನು ಚುರುಕುಗೊಳಿಸಲು ಬದ್ಧವಾಗಿದೆ ಎಂದು ತಿಳಿಸಿದೆ.

ಒಡಿಶಾ: ಲಸಿಕೆ ಅಭಿಯಾನ ಸ್ಥಗಿತ

ಭುವನೇಶ್ವರ (ಪಿಟಿಐ) ಕೋವಿಶೀಲ್ಡ್ ಲಸಿಕೆಯ ಕೊರತೆಯಿಂದಾಗಿ ಒಡಿಶಾ ಸರ್ಕಾರ ಗುರುವಾರ 16 ಜಿಲ್ಲೆಗಳಲ್ಲಿ ಲಸಿಕೆ ಅಭಿಯಾನವನ್ನು ಸ್ಥಗಿತಗೊಳಿಸಿದೆ.

ರಾಜ್ಯದಲ್ಲಿ ಸದ್ಯ ಕೋವಿಶೀಲ್ಡ್‌ನ 19,520 ಡೋಸ್, ಕೋವ್ಯಾಕ್ಸಿನ್‌ನ 3,24,910 ಲಸಿಕೆಗಳು ಲಭ್ಯವಿವೆ. ಲಸಿಕೆ ಕೊರತೆಯಿಂದ 11 ಜಿಲ್ಲೆಗಳಲ್ಲಿ ಬುಧವಾರವೂ ಅಭಿಯಾನ ನಡೆಸಲಾಗಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

> **ಕೋವಿಡ್ ಲಸಿಕೆ ಅಭಿಯಾನ ಕುರಿತು ಕೆಲವರು ಬೇಜವಾಬ್ದಾರಿಯುತ ಹೇಳಿಕೆ ನೀಡುತ್ತಿದ್ದಾರೆ. ಇಂಥ ನಾಚಿಕೆಗೇಡಿನ ರಾಜಕಾರಣವನ್ನು ಕೈಬಿಡಬೇಕು**
> **ಹರ್ಷವರ್ಧನ್,** ಕೇಂದ್ರ ಆರೋಗ್ಯ ಸಚಿವ

ಸುದ್ದಿ ವೈಭವೀಕರಣ ಬೇಡ: ಅಲಹಾಬಾದ್ ಹೈಕೋರ್ಟ್

ಲಖನೌ (ಪಿಟಿಐ): 'ಪತ್ರಕರ್ತರು ಸೂಕ್ಷ್ಮವಾದ ಘಟನೆಗಳನ್ನು ನಾಟಕೀಯವಾಗಿ ಬಿಂಬಿಸಿ, ಸುದ್ದಿಯನ್ನು ಸೃಷ್ಟಿಸಲು ಒತ್ತು ನೀಡಬಾರದು' ಎಂದು ಅಲಹಾಬಾದ್ ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಆತ್ಮಹತ್ಯೆಗೆ ಯತ್ನಿಸಿದ ವ್ಯಕ್ತಿಗೆ ನೆರವು ನೀಡಿದ ಆರೋಪದಡಿ ಬಂಧಿಸಲಾಗಿರುವ ಪತ್ರಕರ್ತರೊಬ್ಬರ ಜಾಮೀನು ಅರ್ಜಿಯನ್ನು ಕೋರ್ಟ್ ಇದೇ ಸಂದರ್ಭದಲ್ಲಿ ತಳ್ಳಿಹಾಕಿತು.

ಉತ್ತರ ಪ್ರದೇಶದ ಸಚಿವಾಲಯ ಕಟ್ಟಡದ ಹೊರಗಡೆ ಕಳೆದ ವರ್ಷ ನಡೆದಿದ್ದ ವ್ಯಕ್ತಿಯೊಬ್ಬರ ಆತ್ಮಹತ್ಯೆಗೆ ಯತ್ನಕ್ಕೆ ನೆರವು ಹಾಗೂ ಅದನ್ನು ಚಿತ್ರೀಕರಿಸಿದ ಪ್ರಕರಣದ ಸಹ ಆರೋಪಿ ಪತ್ರಕರ್ತ ಶಮಿಮ್ ಅಹ್ಮದ್ ಅವರ ಜಾಮೀನು ಅರ್ಜಿಯ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ವಿಕಾಸ್ ಕುನ್ವರ್ ಶ್ರೀವಾತ್ಸವ್ ಅವರು ಈ ಮಾತು ಹೇಳಿದರು.

ಆದೇಶದಲ್ಲಿ ನ್ಯಾಯಮೂರ್ತಿಗಳು, ಪತ್ರಕರ್ತರು ಯಾವುದೇ ಘಟನೆಯನ್ನು ನಾಟಕೀಯಗೊಳಿಸುವ, ಭಯಾನಕವಾಗಿ ಬಿಂಬಿಸುವ ಮೂಲಕ ಸುದ್ದಿಯನ್ನು ಸೃಷ್ಟಿಸಬಾರದು. ಎಂದು ಅಭಿಪ್ರಾಯಪಟ್ಟರು.

ತನ್ನನ್ನು ಮನೆಯಿಂದ ಎತ್ತಂಗಡಿ ಮಾಡಲಾಗುತ್ತದೆ ಎಂದು ಭೀತಿಗೊಂಡಿದ್ದ ವ್ಯಕ್ತಿಯೊಬ್ಬರು ಸಚಿವಾಲಯದ ಕಚೇರಿ ಎದುರು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದರು. ಪತ್ರಕರ್ತ ಶಮೀಮ್ ಮತ್ತು ಸಹ ಆರೋಪಿ ನೌಶಾದ್ ಅಹ್ಮದ್ ವ್ಯಕ್ತಿಯ ರಕ್ಷಣೆಗೆ ಮುಂದಾಗದೇ, ಆತ್ಮಹತ್ಯೆ ಯತ್ನದ ಕೃತ್ಯವನ್ನು ಚಿತ್ರೀಕರಿಸಿದ್ದರು ಎಂದು ಹೇಳಲಾಗಿತ್ತು.

ಮುಂಗಾರು ಚುರುಕು?

ಪ್ರಜಾವಾಣಿ ವಾರ್ತೆ

ನವದೆಹಲಿ: ನೈರುತ್ಯ ಮುಂಗಾರು ಸದ್ಯ ಸ್ವಲ್ಪ ಮಟ್ಟಿಗಿನ ಬಿಡುವು ನೀಡಿದ್ದು, ಜುಲೈ ಎರಡನೇ ವಾರದ ನಂತರ ದೇಶದಾದ್ಯಂತ ಮಳೆ ಚುರುಕುಗೊಳ್ಳುವ ಸಂಭವವಿದೆ.

ಜುಲೈ 2021ರಲ್ಲಿ ದೇಶದಾದ್ಯಂತ ವಾಡಿಕೆ ಮಳೆ ಸುರಿಯುವ ಸಂಭವವಿದೆ. ಇದು, ಸರಾಸರಿ ಮಳೆಯ ಶೇ 94–106ರಷ್ಟು ಇರುವ ಸಂಭವಗಳಿವೆ ಎಂದು ಭಾರತದ ಹವಾಮಾನ ಇಲಾಖೆಯ ಪ್ರಧಾನ ನಿರ್ದೇಶಕ ಎಂ.ಮೊಹಾಪಾತ್ರ ಅವರು ತಿಳಿಸಿದ್ದಾರೆ.

ಜೂನ್ 19ರ ನಂತರ ಮುಂಗಾರು ಹಂಗಾಮಿನ ಮಳೆ ಚುರುಕುಗೊಂಡಿಲ್ಲ. ಆದರೂ, ಜೂನ್ ತಿಂಗಳಲ್ಲಿ ಸರಾಸರಿ ಮಳೆಗಿಂತಲೂ ಶೇ 10ರಷ್ಟು ಹೆಚ್ಚು ಮಳೆಯಾಗಿದೆ. ಈ ಪೈಕಿ ಹೆಚ್ಚಿನ ಮಳೆಯು ಜೂನ್ 3 ಮತ್ತು 19ರ ನಡುವೆ ಆಗಿದೆ ಎಂದಿದ್ದಾರೆ.

ಕೆಳ ಹಂತದ ಕೋರ್ಟ್‌ನ ತೀರ್ಪು ಎತ್ತಿಹಿಡಿದ ಹೈಕೋರ್ಟ್

ಗುಲ್ಶನ್ ಕುಮಾರ್ ಕೊಲೆ ಪ್ರಕರಣ ರವೂಫ್‌ಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಮುಂಬೈ: 'ಕ್ಯಾಸೆಟ್ ಕಿಂಗ್' ಗುಲ್ಶನ್ ಕುಮಾರ್ ಹತ್ಯೆಯ ಪ್ರಮುಖ ಆರೋಪಿ ಅಬ್ದುಲ್ ರವೂಫ್ ಮರ್ಚೆಂಟ್‌ಗೆ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಬಾಂಬೆ ಹೈಕೋರ್ಟ್ ಗುರುವಾರ ಎತ್ತಿಹಿಡಿದಿದೆ.

ಪ್ರಕರಣ ನಡೆದು ಇಪ್ಪತ್ನಾಲ್ಕು ವರ್ಷಗಳ ನಂತರ ಈ ತೀರ್ಪು ಬಂದಿದೆ. ಮ್ಯೂಸಿಕ್ ಲೇಬಲ್ ಮಾಲೀಕ ರಮೇಶ್ ತೌರಾನಿಯನ್ನು ಈ ಪ್ರಕರಣದಿಂದ ಖುಲಾಸೆಗೊಳಿಸಿದೆ.

ಇನ್ನೊಬ್ಬ ಆರೋಪಿಯನ್ನು ಪ್ರಕರಣದಿಂದ ಖುಲಾಸೆಗೊಳಿಸಿದ್ದ ಆದೇಶವನ್ನು ನ್ಯಾಯಮೂರ್ತಿಗಳಾದ ಎಸ್.ಎಸ್. ಜಾಧವ್ ಮತ್ತು ಎನ್.ಆರ್. ಬೋರ್ಕರ್ ಅವರ ವಿಭಾಗೀಯ ಪೀಠವು ರದ್ದುಪಡಿಸಿತು. ರವೂಫ್ ಸಹೋದರ ಅಬ್ದುಲ್ ರಶೀದ್ ಮರ್ಚೆಂಟ್‌ಗೂ ಜೀವಾವಧಿ ಶಿಕ್ಷೆ ವಿಧಿಸಿತು. ರಮೇಶ್ ತೌರಾನಿಯವರನ್ನು ಖುಲಾಸೆಗೊಳಿಸುವ ಜತೆಗೆ ಮಹಾರಾಷ್ಟ್ರ ಸರ್ಕಾರದ ಮೇಲ್ಮನವಿಯನ್ನು ವಜಾಗೊಳಿಸಿತು. ರಶೀದ್ ಶರಣಾಗಲು ವಿಫಲವಾದರೆ, ಸೆಷನ್ಸ್ ನ್ಯಾಯಾಲಯವು ಜಾಮೀನು ರಹಿತ ವಾರಂಟ್ ಹೊರಡಿಸಬಹುದು ಎಂದು ಪೀಠ ಹೇಳಿದೆ.

ಭೂಗತ ಪಾತಕಿ ದಾವೂದ್ ಇಬ್ರಾಹಿಂನ ಗುಂಪಿನೊಂದಿಗೆ ಸಂಬಂಧ ಹೊಂದಿದ್ದ ಅಬ್ದುಲ್ ರವೂಫ್ ಮರ್ಚೆಂಟ್ ಅಲಿಯಾಸ್ ದೌಡ್ ಮರ್ಚೆಂಟ್‌ನ ಅಪರಾಧ ನ್ಯಾಯಾಲಯದಲ್ಲಿ ಸಾಬೀತಾಗಿದ್ದು, 'ರವೂಫ್ ಎರಡು ಬಾರಿ ಪರಾರಿಯಾಗಿದ್ದಾನೆ. ಆತ ಯಾವುದೇ ಕ್ಷಮೆಗೆ ಅರ್ಹನಲ್ಲ' ಎಂದು ನ್ಯಾಯಾಲಯ ಹೇಳಿದೆ.

41ರ ಹರೆಯದ ಗುಲ್ಶನ್ ಕುಮಾರ್ ಅವರನ್ನು 1997ರ ಆಗಸ್ಟ್‌ನಲ್ಲಿ ಮುಂಬೈ ಉಪನಗರ ಅಂಧೇರಿಯ ಜೀತ್ ನಗರದ ಜೀತೇಶ್ವರ ಮಹಾದೇವ ದೇವಾಲಯದ ಹೊರಗೆ ಗುಂಡಿಕ್ಕಿ ಕೊಲ್ಲಲಾಗಿತ್ತು. ಪ್ರಾಸಿಕ್ಯೂಷನ್ ಪ್ರಕಾರ, ಅವರ ಪ್ರತಿಸ್ಪರ್ಧಿಗಳು ಅವರನ್ನು ಇಲ್ಲವಾಗಿಸಲು ಭೂಗತ ಪಾತಕಿ ಅಬು ಸಲೀಂಗೆ ಸುಪಾರಿ ನೀಡಿದ್ದರು. ಪ್ರಕರಣದ ವಿಚಾರಣೆ ವೇಳೆ 2002ರ ಏಪ್ರಿಲ್ 29ರಂದು ಸೆಷನ್ಸ್ ನ್ಯಾಯಾಲಯವು 19 ಆರೋಪಿಗಳಲ್ಲಿ 18 ಮಂದಿಯನ್ನು ಖುಲಾಸೆಗೊಳಿಸಿತ್ತು.

ಪ್ರಜಾವಾಣಿ ಸೆಲೆಬ್ರಿಟಿ LIVE
f Prajavani.net ▶ Prajavani 🐦 Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ

ಶನಿವಾರದ ವಿಶೇಷ
ಸರೋದ್ ವಾದಕ
ಪಂಡಿತ್ ರಾಜೀವ್ ತಾರಾನಾಥ್ ಜೊತೆಗೆ ಮುಖಾಮುಖಿ
3-7-2021 ಶನಿವಾರ ಮಧ್ಯಾಹ್ನ 12 ರಿಂದ 1

ಪ್ರಜಾವಾಣಿ facebook LIVE
FB.com/prajavani.net
ಪಿಯುಸಿ ಗೊಂದಲಗಳಿಗೆ ಇಲ್ಲಿದೆ ಪರಿಹಾರ
ಪಿಯುಸಿ ಮತ್ತು ಸಿಬಿಎಸ್‌ಇ ಹನ್ನೆರಡನೇ ತರಗತಿ ಪರೀಕ್ಷೆ ರದ್ದಾಗಿದ್ದು ಗ್ರೇಡ್ ಆಧಾರದ ಮೇಲೆ ಎಲ್ಲರನ್ನೂ ಉತ್ತೀರ್ಣ ಮಾಡುವುದಾಗಿ ಸರ್ಕಾರ ಹೇಳಿದೆ. ಆದರೆ ಗ್ರೇಡ್, ಮುಂದಿನ ಶಿಕ್ಷಣ ಮೊದಲಾದವುಗಳ ಕುರಿತು ವಿದ್ಯಾರ್ಥಿಗಳಲ್ಲಿ ಆತಂಕವಿದೆ. ಈ ಆತಂಕ, ಗೊಂದಲವನ್ನು ಪರಿಹರಿಸಲಿದ್ದಾರೆ ಡಾ. ಚಂದ್ರಶೇಖರ್ ಎಚ್. ಬಿ., ಹಿರಿಯ ಸಹಾಯಕ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿ.ಎಸ್. ಇ. ಆರ್. ಟಿ), ಬೆಂಗಳೂರು

ಸಂದರ್ಶಕರು: ನಾಗರಾಜ ಕೆ. ಎಲ್, ಉಪನ್ಯಾಸಕರು, ಪ್ರಾರ್ಥನ ಪಿಯು ಕಾಲೇಜ್, ವಿಜಯಪುರ
ನೀವೂ ಪ್ರಶ್ನೆಗಳನ್ನು ಕೇಳಬಹುದು
ಇಂದು ಸಂಜೆ 7ಕ್ಕೆ

ನೀರವ್ ಸಹೋದರಿ ಖಾತೆಯಿಂದ ₹17.25 ಕೋಟಿ ರವಾನೆ

ನವದೆಹಲಿ (ಪಿಟಿಐ): 'ಭಾರತದಿಂದ ಪಲಾಯನ ಮಾಡಿರುವ ಉದ್ಯಮಿ ನೀರವ್ ಮೋದಿ ಅವರ ಸಹೋದರಿ ಪೂರ್ವಿ ಮೋದಿ ಅವರು ತಮ್ಮ ಬ್ರಿಟನ್‌ನ ಬ್ಯಾಂಕ್ ಖಾತೆಯಿಂದ ₹ 17.25 ಕೋಟಿಯನ್ನು ಭಾರತ ಸರ್ಕಾರಕ್ಕೆ ರವಾನಿಸಿದ್ದಾರೆ' ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ಗುರುವಾರ ತಿಳಿಸಿದೆ.

ಪಿಎನ್‌ಬಿ ಸಾಲ ವಂಚನೆ ಪ್ರಕರಣದಲ್ಲಿ ಪೂರ್ವಿ ಅವರಿಗೆ ಸಹಾಯವನ್ನು ನೀಡುವ ಬದಲು ಕ್ರಿಮಿನಲ್ ಮೊಕದ್ದಮೆಗಳಿಂದ ಕ್ಷಮಿಸಲು ಅನುಮತಿ ನೀಡಲು ಭರವಸೆ ನೀಡಿದ ಬಳಿಕ ಈ ಹಣವನ್ನು ಭಾರತ ಸರ್ಕಾರಕ್ಕೆ ರವಾನಿಸಲಾಗಿದೆ ಎನ್ನಲಾಗಿದೆ.

'ಲಂಡನ್‌ನ ಬ್ಯಾಂಕೊಂದರಲ್ಲಿ ತಮ್ಮ ಹೆಸರಿನ ಖಾತೆ ಇರುವುದು ತಮ್ಮ ಅರಿವಿಗೆ ಬಂದಿದ್ದು, ಅದನ್ನು ಸಹೋದರ ನೀರವ್ ಮೋದಿ ಅವರ ಆದೇಶದ ಮೇರೆಗೆ ತೆರೆಯಲಾಗಿತ್ತು. ಆದರೆ, ಅದರಲ್ಲಿರುವ ಹಣವು ತಮಗೆ ಸೇರಿದ್ದಲ್ಲ ಎಂದು ತಿಳಿದು ಬಂದಿದೆ ಎಂದು ಪೂರ್ವಿ ಮೋದಿ ಜೂನ್ 24ರಂದು ಇ.ಡಿ ಗಮನಕ್ಕೆ ತಂದಿದ್ದರು' ಎಂದು ಇ.ಡಿ ಮಾಹಿತಿ ನೀಡಿದೆ. 'ಪೂರ್ವಿ ಅವರ ಸಹಕಾರದಿಂದ ಇ.ಡಿ ಒಟ್ಟು ₹17.25 ಕೋಟಿಯನ್ನು ವಸೂಲಿ ಮಾಡಲು ಸಾಧ್ಯವಾಗಿದೆ' ಎಂದೂ ಜಾರಿ ನಿರ್ದೇಶನಾಲಯವು ತಿಳಿಸಿದೆ.

'ಮಹಾರಾಷ್ಟ್ರದಲ್ಲಿ ಭೌಗೋಳಿಕವಾಗಿ ಮುಂಬೈಗಿಂತ ದೊಡ್ಡ ನಗರ ಪುಣೆ'

ಮುಂಬೈ: ಭೌಗೋಳಿಕ ವಿಸ್ತೀರ್ಣದ ವ್ಯಾಪ್ತಿಯ ದೃಷ್ಟಿಯಿಂದ ಪುಣೆ ನಗರವು ಮಹಾರಾಷ್ಟ್ರದ ಅತಿದೊಡ್ಡ ನಗರ ಎಂಬ ಹಿರಿಮೆಗೆ ಪಾತ್ರವಾಗಿದೆ. ಈ ಮೂಲಕ ದೇಶದ ಆರ್ಥಿಕ ರಾಜಧಾನಿ ಮುಂಬೈಯನ್ನೂ ಹಿಂದಿಕ್ಕಿದೆ.

ಪುಣೆ ಮಹಾನಗರಪಾಲಿಕೆಯ (ಪಿಎಂಸಿ) ವ್ಯಾಪ್ತಿಯು ಈಗ 518 ಚದರ ಕಿ.ಮೀ ಆಗಿದ್ದರೆ, ಬೃಹನ್ ಮುಂಬೈ ಮಹಾನಗರಪಾಲಿಕೆಯ (ಬಿಎಂಸಿ) ವ್ಯಾಪ್ತಿಯು 434 ಚದರ ಕಿ.ಮೀ ಆಗಿರುತ್ತದೆ.

ಪುಣೆ ಮಹಾನಗರಪಾಲಿಕೆಯ ಈ ಮೊದಲಿನ ವ್ಯಾಪ್ತಿ 331 ಚದರ ಕಿ.ಮೀ ಇತ್ತು. ಮಹಾರಾಷ್ಟ್ರದ ನಗರಾಭಿವೃದ್ಧಿ ಇಲಾಖೆಯು ಇದರ ವ್ಯಾಪ್ತಿಗೆ ಆಸುಪಾಸಿನ 23 ಗ್ರಾಮಗಳನ್ನು ಸೇರಿಸಿ ಆದೇಶ ಹೊರಡಿಸಿದೆ. ಈ ಮೂಲಕ ಪುಣೆಯ ನಗರಪಾಲಿಕೆಯ ಒಟ್ಟು ವ್ಯಾಪ್ತಿಯು 518 ಚದರ ಕಿ.ಮೀಗಳಿಗೆ ಹಿಗ್ಗಿದೆ.

ಆದರೂ, ಬಜೆಟ್ ಗಾತ್ರ ಹಾಗೂ ಜನಸಂಖ್ಯೆಯನ್ನು ಪರಿಗಣಿಸಿದರೆ ಪುಣೆ ಈಗಲೂ ಮುಂಬೈ ನಂತರದ ಸ್ಥಾನದಲ್ಲಿಯೇ ಇದೆ. 2021–22ನೇ ಹಣಕಾಸು ವರ್ಷದಲ್ಲಿ ಮುಂಬೈ ಪಾಲಿಕೆಯ ಬಜೆಟ್ ಗಾತ್ರ 39,038 ಕೋಟಿ ಆಗಿದ್ದರೆ, ಪುಣೆ ಪಾಲಿಕೆಯ ಬಜೆಟ್ ಗಾತ್ರ 8,370 ಕೋಟಿ ಆಗಿದೆ.

ಪುಣೆಯ ಸದ್ಯದ ಜನಸಂಖ್ಯೆಯು 34 ಲಕ್ಷ ಆಗಿದ್ದರೆ, ಮುಂಬೈ ನಗರಪಾಲಿಕೆಯ ಜನಸಂಖ್ಯೆಯು 1.2 ಕೋಟಿ ಆಗಿದೆ.

ವೈದ್ಯರಿಗೆ ನಮನ ಗುವಾಹಟಿಯ ವೈದ್ಯಕೀಯ ಕಾಲೇಜು ಆಸ್ಪತ್ರೆ (ಜಿಎಂಸಿಎಚ್) ಆವರಣದಲ್ಲಿ ವೈದ್ಯರ ದಿನದಂದು ಗುರುವಾರ ನರ್ಸ್‌ಗಳು, ಕೋವಿಡ್ 19 ಸಾಂಕ್ರಾಮಿಕ ಸಂದರ್ಭದಲ್ಲಿ ದೇಶದಾದ್ಯಂತ ಪ್ರಾಣ ಕಳೆದುಕೊಂಡ ವೈದ್ಯರ ಸ್ಮರಣಾರ್ಥ ಮೊಂಬತ್ತಿ ಬೆಳಗಿದರು – ಪಿಟಿಐ ಚಿತ್ರ

ಬೀದಿ ನಾಯಿಗಳಿಗೂ ಆಹಾರದ ಹಕ್ಕಿದೆ: ದೆಹಲಿ ಹೈಕೋರ್ಟ್

ನವದೆಹಲಿ: 'ಬೀದಿ ನಾಯಿಗಳಿಗೆ ಇತರರಿಗೆ ತೊಂದರೆ ಅಥವಾ ಕಿರುಕುಳವಾಗದ ರೀತಿಯಲ್ಲಿ ಆಹಾರ ನೀಡುವ ಹಕ್ಕು ನಾಗರಿಕರಿಗೆ ಇದೆ. ಬೀದಿ ನಾಯಿಗಳಿಗೆ ಆಹಾರ ನೀಡುವುದನ್ನು ಯಾರೂ ನಿರ್ಬಂಧಿಸಬಾರದು' ಎಂದು ದೆಹಲಿ ಹೈಕೋರ್ಟ್ ಗುರುವಾರ ಹೇಳಿದೆ.

'ಪ್ರಾಣಿಗಳಿಗೆ ಕಾನೂನಿನ ಅಡಿಯಲ್ಲಿ ಜೀವಿಸುವ, ಆಹಾರ ಪಡೆಯುವ ಹಕ್ಕಿದೆ. ಪ್ರಾಣಿಗಳ ಗೌರವ ಮತ್ತು ಘನತೆಯನ್ನು ಎತ್ತಿಹಿಡಿಯುವುದು, ಅವುಗಳ ರಕ್ಷಣೆ ಮಾಡುವುದು ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು ಸೇರಿದಂತೆ ಪ್ರತಿಯೊಬ್ಬ ನಾಗರಿಕರ ನೈತಿಕ ಬಾಧ್ಯತೆಗಳಾಗಿವೆ. ಬೀದಿ ನಾಯಿಗಳಷ್ಟೇ ಅಲ್ಲ, ಎಲ್ಲ ಜೀವಿಗಳ ಬಗ್ಗೆಯೂ ಮನುಷ್ಯರಾದವರು ಸಹಾನುಭೂತಿ ತೋರಿಸಬೇಕು' ಎಂದು ನ್ಯಾಯಮೂರ್ತಿ ಜೆ.ಆರ್. ಮಿಧಾ ಅವರಿದ್ದ ಏಕಸದಸ್ಯ ಪೀಠ ಒತ್ತಿ ಹೇಳಿದೆ.

ಡಾ. ಮಾಯಾ ಡಿ. ಚಬ್ಲಾನಿ ಅವರ ಮನವಿ ಅರ್ಜಿಯನ್ನು ಆಲಿಸಿದ ನ್ಯಾಯಾಲಯವು, ಪ್ರಾಣಿಗಳಿಗೆ ಕ್ರೌರ್ಯ ತೋರಿಸುವುದು ಕಾನೂನಿಗೆ ವಿರುದ್ಧವಾದುದು. ಈ ವಿಚಾರದಲ್ಲಿ ಉತ್ತಮ ಸ್ಥರದಲ್ಲಿರುವ ನಾಗರಿಕರು ಮತ್ತು ಸರ್ಕಾರಿ ಅಧಿಕಾರಿಗಳಲ್ಲೇ ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳುವ ಪ್ರವೃತ್ತಿ ಹೆಚ್ಚುತ್ತಿದೆ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಬೀದಿನಾಯಿಗಳನ್ನು ಪಾಲನೆ ಮಾಡುವವರಿಗೆ ಯಾವುದೇ ತೊಂದರೆ ಇಲ್ಲ ಎನ್ನುವ ಭರವಸೆ ನೀಡುವುದು, ಆರ್‌ಡಬ್ಲ್ಯೂಎ (ರೆಸಿಡೆಂಟ್ ವೆಲ್ಫೇರ್ ಅಸೋಸಿಯೇಷನ್ಸ್), ಮಹಾನಗರ ಪಾಲಿಕೆ, ಎಲ್ಲ ಸರ್ಕಾರಿ ಅಧಿಕಾರಿಗಳ ಕರ್ತವ್ಯ ಹಾಗೂ ಜವಾಬ್ದಾರಿ ಎಂದಿದೆ.

ಕೃಷ್ಣಾ ನದಿ ನೀರು ಹಂಚಿಕೆ

ಆಂಧ್ರ–ತೆಲಂಗಾಣದ ವಿವಿಧೆಡೆ ಉದ್ವಿಗ್ನ ಸ್ಥಿತಿ

ಹೈದರಾಬಾದ್: ಕೃಷ್ಣಾ ನದಿ ನೀರಿನ ಹಂಚಿಕೆ ಕುರಿತಂತೆ ಆಂಧ್ರಪ್ರದೇಶ ಮತ್ತು ತೆಲಂಗಾಣ ನಡುವಣ ವಿವಾದದ ಹಿನ್ನೆಲೆಯಲ್ಲಿ ಶ್ರೀಶೈಲಂ, ನಾಗಾರ್ಜುನ ಸಾಗರ ಮತ್ತು ಪುಲಿಚಿಂತಲಾದ ಜಲವಿದ್ಯುತ್ ಯೋಜನೆಗಳ ಬಳಿ ಗುರುವಾರ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿತ್ತು.

ಯೋಜನಾ ಸ್ಥಳಕ್ಕೆ ಸಂಪರ್ಕ ಕಲ್ಪಿಸುವ ಉಭಯ ಮಾರ್ಗಗಳಲ್ಲಿ ಪೊಲೀಸ್‌ನ ಬಿಗಿ ಬಂದೋಬಸ್ತ್ ಇತ್ತು.

ಕೃಷ್ಣಾ ನದಿ ನೀರು ಹಂಚಿಕೆಗೆ ಸಂಬಂಧಿಸಿ 2015ರಲ್ಲಿ ಮುಖ್ಯಮಂತ್ರಿಗಳಾಗಿದ್ದ ಚಂದ್ರಬಾಬು ನಾಯ್ಡು ಮತ್ತು ಕೆ.ಚಂದ್ರಶೇಖರ ರಾವ್ ಬಿಗಿ ನಿಲುವು ಕೈಗೊಂಡ ನಂತರ ಪರಿಸ್ಥಿತಿ ಬಿಗಡಾಯಿಸಿದೆ.

ಆಂಧ್ರದ ಮುಖ್ಯಮಂತ್ರಿಯಾಗಿ ಜಗನ್‌ಮೋಹನ್ ರೆಡ್ಡಿ 2019ರಲ್ಲಿ ಅಧಿಕಾರಕ್ಕೆ ಬಂದ ಬಳಿಕ ಸೌಹಾರ್ದವಾಗಿ ವಿವಾದ ಬಗೆಹರಿಸಿಕೊಳ್ಳಲು ಒತ್ತು ನೀಡಿದ್ದರು. ಆದರೆ, ಮೇ 2020ರಲ್ಲಿ ರಾಯಲಸೀಮಾ ಏತನೀರಾವತಿ ಯೋಜನೆಗೆ ಶ್ರೀಶೈಲಂ ಜಲಾಶಯದಿಂದ 3 ಟಿ.ಎಂ.ಸಿ ನೀರು ಪಡೆಯುವ ವಿಷಯ ಸಮಸ್ಯೆಯನ್ನು ಮತ್ತೆ ಹೆಚ್ಚಿಸಿತ್ತು.

ಆಗ, ಜಗನಮೋಹನ್ ರೆಡ್ಡಿ ಹಾಗೂ ಅವರ ತಂದೆ, ಮಾಜಿ ಮುಖ್ಯಮಂತ್ರಿ ವೈ.ಎಸ್.ಆರ್.ರೆಡ್ಡಿ ಅವರ ವಿರುದ್ಧವೂ ಆರೋಪ ಮಾಡಿದ್ದು, ತೆಲಂಗಾಣದ ಪಾಲಿನ ನೀರನ್ನು ಆಂಧ್ರಪ್ರದೇಶ ಕಳವು ಮಾಡುತ್ತಿದೆ ಎಂದು ಕೆಲ ಸಚಿವರು ಆರೋಪಿಸಿದ್ದರು.

ಸಂಕ್ಷಿಪ್ತ ಸುದ್ದಿ

ಝೈಡಸ್ ಕ್ಯಾಡಿಲಾ ಬಳಕೆಗೆ ಅನುಮೋದನೆ ಕೋರಿ ಅರ್ಜಿ

ನವದೆಹಲಿ(ರಾಯಿಟರ್ಸ್): ಭಾರತದ ಔಷಧ ಉತ್ಪಾದಕ ಕಂಪನಿ ಝೈಡಸ್ ಕ್ಯಾಡಿಲಾ, ಅಭಿವೃದ್ಧಿಪಡಿಸಿರುವ ಕೋವಿಡ್ ಲಸಿಕೆಯ ತುರ್ತು ಬಳಕೆಗೆ ಅನುಮೋದನೆ ಕೋರಿ ಡಿಸಿಜಿಐಗೆ ಅರ್ಜಿ ಸಲ್ಲಿಸಿದೆ. ಕಂಪನಿಯು ವರ್ಷಕ್ಕೆ 12 ಕೋಟಿ ಡೋಸ್ ಲಸಿಕೆ ಉತ್ಪಾದನೆಯ ಗುರಿ ಹೊಂದಿದೆ.

ಝೈಡಸ್ ಕಂಪನಿಯ ಕೋವಿಡ್ ಲಸಿಕೆ, ಝೈಕೋವ್-ಡಿಗೆ ಅನುಮೋದನೆ ಸಿಕ್ಕರೆ ಮಾಡರ್ನಾ, ಅಸ್ಟ್ರಾಜೆನೆಕಾ ಮತ್ತು ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಕೋವಿಶೀಲ್ಡ್, ಭಾರತ್ ಬಯೋಟೆಕ್‌ನ ಕೊವಾಕ್ಸಿನ್ ಮತ್ತು ರಷ್ಯಾದ ಗಮಲೇಯ ಇನ್‌ಸ್ಟಿಟ್ಯೂಟ್ ಅಭಿವೃದ್ಧಿಪಡಿಸಿರುವ ಸ್ಪುಟ್ನಿಕ್ ವಿ ನಂತರ ಭಾರತದಲ್ಲಿ ಬಳಕೆಗೆ ಅನುಮೋದನೆ ಪಡೆದ ಐದನೇ ಲಸಿಕೆಯಾಗಲಿದೆ.

ಅಖಿಲ್ ಗೋಗೊಯಿ ಆರೋಪ ಮುಕ್ತ

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ನಡೆದ ಸಿಎಎ ವಿರೋಧಿ ಹೋರಾಟ ಸಂದರ್ಭದಲ್ಲಿನ ಹಿಂಸಾಚಾರದಲ್ಲಿ ಭಾಗಿಯಾದ ಆರೋಪದಡಿ ಬಂಧನಕ್ಕೊಳಗಾಗಿದ್ದ ಶಾಸಕ ಅಖಿಲ್ ಗೋಗೊಯಿ ಅವರನ್ನು ಎನ್‌ಐಎ ವಿಶೇಷ ನ್ಯಾಯಾಲಯ ಎಲ್ಲ ಆರೋಪಗಳಿಂದ ಗುರುವಾರ ಮುಕ್ತಗೊಳಿಸಿತು.

ಅವರು ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳಿಂದಾಗಿ ಗುವಾಹಟಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ನ್ಯಾಯಾಲಯವು ತೀರ್ಪಿನ ಪ್ರತಿಯನ್ನು ಗುವಾಹಟಿ ಸೆಂಟ್ರಲ್ ಜೈಲಿಗೆ ಕಳುಹಿಸಿತು. ಹೀಗಾಗಿ ಅವರು ಆಸ್ಪತ್ರೆಯಿಂದ ಮನೆಗೆ ತೆರಳಿದರು.

ನಿಂಬರಂ ವಿರುದ್ಧ 'ಕಮಿಷನ್' ಆರೋಪ: ಖಂಡನೆ

ಜೈಪುರ (ಪಿಟಿಐ): ಮನೆಮನೆಗಳಿಂದ ಕಸ ಸಂಗ್ರಹಿಸುತ್ತಿರುವ ಸಂಸ್ಥೆಯಿಂದ ₹ 20 ಕೋಟಿ ಕಮಿಷನ್ ಪಡೆದಿದ್ದಾರೆ ಎಂದು ಆರ್‌ಎಸ್‌ಎಸ್‌ನ ಹಿರಿಯ ನಾಯಕ ನಿಂಬರಂ ಅವರ ವಿರುದ್ಧ ಕೇಳಿಬಂದಿರುವ ಆರೋಪವನ್ನು ಆರ್‌ಎಸ್‌ಎಸ್ ಗುರುವಾರ ಖಂಡಿಸಿದೆ.

ಚರ್ಚ್‌ನಲ್ಲಿ ಸಲಿಂಗಿಗಳ ವಿವಾಹಕ್ಕೆ ಅನುಮತಿ

ಲಂಡನ್ (ಎಪಿ): 'ಸಲಿಂಗಿ ಜೋಡಿಗೆ ತನ್ನ ಆವರಣದಲ್ಲಿ ಮದುವೆಯಾಗಲು ಅವಕಾಶ ನೀಡಲಾಗುವುದು' ಎಂದು ಬ್ರಿಟನ್‌ನ ಮೆಥೋಡಿಸ್ಟ್ ಚರ್ಚ್ ಘೋಷಿಸಿದೆ.

ಈ ಸಂಬಂಧ ನಡೆಸಲಾದ ಮೆಥೋಡಿಸ್ಟ್ ಸಭೆಯಲ್ಲಿ 254 ಮಂದಿ ಪರವಾಗಿ ಮತ್ತು 46 ಮಂದಿ ವಿರುದ್ಧವಾಗಿ ಮತ ಚಲಾಯಿಸಿದರು.

ಸೇನಾ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ ಹೇಳಿಕೆ

'ಡ್ರೋನ್ ದಾಳಿ ಎದುರಿಸಲು ಸಿದ್ಧತೆ'

ನವದೆಹಲಿ (ಪಿಟಿಐ): ಡ್ರೋನ್‌ಗಳ ಮೂಲಕ ದಾಳಿಯ ಸವಾಲುಗಳನ್ನು ಎದುರಿಸುವ ಸಾಮರ್ಥ್ಯವನ್ನು ಭಾರತೀಯ ಸೇನೆಯು ಅಭಿವೃದ್ಧಿಪಡಿಸುತ್ತಿದೆ ಎಂದು ಸೇನಾ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ ಅವರು ಗುರುವಾರ ಹೇಳಿದರು.

ಚಿಂತಕರ ಜೊತೆಗಿನ ವರ್ಚುಯಲ್ ಸಭೆಯಲ್ಲಿ ಮಾತನಾಡಿದ ಅವರು, ಭದ್ರತಾ ಪಡೆಗಳಿಗೆ ಸವಾಲಿನ ಬಗೆಗೆ ಅರಿವಿದೆ ಹಾಗೂ ಅವುಗಳನ್ನು ಎದುರಿಸಲು ಈಗಾಗಲೇ ಹಲವು ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದೂ ಅವರು ತಿಳಿಸಿದರು.

ರಾಷ್ಟ್ರಗಳ ಚಿತಾವಣೆಯಿಂದ ನಡೆಯುವ ಅಥವಾ ನೇರವಾಗಿ ರಾಷ್ಟ್ರಗಳಿಂದಲೇ ಎದುರಾಗುವ ಅಪಾಯಗಳನ್ನು ಎದುರಿಸಲು ನಾವು ಸಾಮರ್ಥ್ಯ ವೃದ್ಧಿಸಿಕೊಳ್ಳುತ್ತಿದ್ದೇವೆ. ಪ್ರತ್ಯಕ್ಷ ಮತ್ತು ಪರೋಕ್ಷ ಡ್ರೋನ್ ದಾಳಿಗಳನ್ನು ಎದುರಿಸಲೂ ಸಜ್ಜಾಗುತ್ತಿದ್ದೇವೆ ಎಂದಿದ್ದಾರೆ.



ಜನರಲ್ ಎಂ.ಎಂ. ನರವಣೆ

ಇತ್ತೀಚೆಗೆ ಜಮ್ಮುವಿನಲ್ಲಿರುವ ಭಾರತೀಯ ವಾಯುಪಡೆಯ ಕೇಂದ್ರದ ಮೇಲೆ ಡ್ರೋನ್‌ಗಳ ಮೂಲಕ ಬಾಂಬ್ ದಾಳಿ ನಡೆದಿತ್ತು.

ಜಮ್ಮು ಮತ್ತು ಕಾಶ್ಮೀರದ ಗಡಿ ನಿಯಂತ್ರಣ ರೇಖೆಯಲ್ಲಿನ ಪರಿಸ್ಥಿತಿ ಕುರಿತು ಪ್ರತಿಕ್ರಿಯಿಸಿದ ಅವರು, 'ಫೆಬ್ರುವರಿಯಲ್ಲಿ ಭಾರತ ಮತ್ತು ಪಾಕಿಸ್ತಾನ ಸೇನೆಗಳ ನಡುವೆ ಕದನ ವಿರಾಮ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದರು.

ಒಳನುಸುಳುವಿಕೆಯ ಚಟುವಟಿಕೆಗಳಿಗೆ ಕಡಿವಾಣ ಬಿದ್ದಿರುವುದರಿಂದ ಕಾಶ್ಮೀರದಲ್ಲಿ ಭಯೋತ್ಪಾದಕರ ಸಂಖ್ಯೆ ಕಡಿಮೆಯಾಗಿದೆ ಹಾಗೂ ಭಯೋತ್ಪಾದನೆಗೆ ಸಂಬಂಧಿಸಿದ ಕೃತ್ಯಗಳು ಕಡಿಮೆಯಾಗಿವೆ ಎಂದರು.

ಮಾತುಕತೆಯಿಂದ ಗಡಿ ಗೊಂದಲ ಇತ್ಯರ್ಥ

ನವದೆಹಲಿ (ಪಿಟಿಐ): 'ಪೂರ್ವ ಲಡಾಖ್‌ನಲ್ಲಿನ ಗಡಿ ವಿವಾದ ಕುರಿತು ಭಾರತ ಮತ್ತು ಚೀನಾ ನಡುವೆ ನಡೆದಿರುವ ಮಾತುಕತೆ ಫಲಪ್ರದವಾಗುತ್ತಿದ್ದು, ಸೇನೆಯ ಹಿಂತೆಗೆತ ಪ್ರಕ್ರಿಯೆ ಆರಂಭದ ಪರಿಸ್ಥಿತಿ ಸಹಜ ಸ್ಥಿತಿಗೆ ಬರುತ್ತಿದೆ' ಎಂದು ಸೇನಾ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ ಗುರುವಾರ ಅಭಿಪ್ರಾಯಪಟ್ಟರು. ಬಾಕಿ ಇರುವ ಗೊಂದಲಗಳೂ ಬಗೆಹರಿಯಲಿವೆ ಎಂದೂ ಅವರು ಆಶಿಸಿದರು.

ಚಿಂತಕರ ಜೊತೆಗಿನ ವರ್ಚುಯಲ್ ಸಭೆಯಲ್ಲಿ ಮಾತನಾಡಿದ ಅವರು, ಉಭಯ ದೇಶಗಳ ಸೇನಾ ಪ್ರಮುಖರ ವಿವಿಧ ಹಂತಗಳಲ್ಲಿ ಮಾತುಕತೆ ನಡೆದಿದೆ. ಫೆಬ್ರುವರಿಯಲ್ಲಿ ಸೇನೆ ಹಿಂತೆಗೆದುಕೊಂಡ ಬಳಿಕ ವಾಸ್ತವ ಗಡಿ ರೇಖೆಯುದ್ದಕ್ಕೂ ಪರಿಸ್ಥಿತಿ ಪನಾಂಗ್ ಸರೋವರ ಮತ್ತು ಕೈಲಾಶ್ ವಲಯದಲ್ಲಿ ಸಹಜ ಸ್ಥಿತಿಗೆ ಬರುತ್ತಿದೆ ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ನರವಣೆ ಅವರು, ಗಡಿ ಭಾಗದಲ್ಲಿ ಕಳೆದ ಒಂದು ವರ್ಷದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ಗಮನಿಸಿದರೆ ಸೇನೆಯು ನಿರಂತರವಾಗಿ ಸಿದ್ಧವಾಗಿರಬೇಕಿದೆ ಎಂದು ಅಭಿಪ್ರಾಯಪಟ್ಟರು.

ಊಹಿಸಿ...ಗಳಿಸಿ!
33 ರಿಂದ 44ರಲ್ಲಿ ಯಾವ 4 ಬೆಸ ಸಂಖ್ಯೆಗಳು ನಾಳೆ ಪ್ರಕಟವಾಗಲಿವೆ
ನಮ್ಮ ಹಾಗೂ ನಿಮ್ಮ ಉತ್ತರ ಒಂದೇ ಇದ್ದರೆ, ನಂತರ ನಡೆಯುವ ಲಕ್ಕಿ ಡ್ರಾನಲ್ಲಿ ಬಹುಮಾನ ಪಡೆಯುವಿರಿ.
www.bit.ly/adhrusta ಗೆ ಲಾಗಿನ್ ಆಗಿ, ಸಂಜೆ 6 ಗಂಟೆಯೊಳಗೆ ನಿಮ್ಮ ಉತರ ಕಳುಹಿಸಿ
ಪ್ರತಿ ದಿನ 10 ಅದೃಷ್ಟಶಾಲಿಗಳಿಗೆ ₹500 ಗಿಫ್ಟ್ ವೌಚರ್
ಪ್ರಜಾವಾಣಿ ಅಂಗೈಯಲ್ಲಿ ಅದೃಷ್ಟ
ಹಿಂದಿನ ಪ್ರಶ್ನೆಗೆ ಉತ್ತರ
75 76 77 78 79
ಬಂಪರ್ ಬಹುಮಾನ*
₹25000 ಮೌಲ್ಯದ ಗೋಲ್ಡ್ ವೌಚರ್
*ಷರತ್ತುಗಳು ಅನ್ವಯ

ವಿಂಬಲ್ಡನ್: ನಾಲ್ಕು ದಿನಗಳಲ್ಲಿ ಹೊರನಡೆದ ಅಗ್ರ ಎಂಟು ಮಂದಿ; ರೋಜರ್ ಫೆಡರರ್‌ಗೆ ಗೆಲುವು

ಲಿನೆಟೆಗೆ ಮಣಿದ ಎಲಿನಾ ಸ್ವಿಟೋಲಿನಾ

ಲಂಡನ್ (ಎಪಿ): ಉಕ್ರೇನ್ ಆಟಗಾರ್ತಿ ಮೂರನೇ ಶ್ರೇಯಾಂಕದ ಎಲಿನಾ ಸ್ವಿಟೋಲಿನಾ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಗುರುವಾರ ಆಘಾತ ಕಂಡರು. ಮಹಿಳಾ ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ ಅವರು ಪೋಲೆಂಡ್‌ನ ಮಗ್ದಾ ಲಿನೆಟೆಗೆ 3–6, 4–6ರಲ್ಲಿ ಮಣಿದರು.

ಟೂರ್ನಿ ಆರಂಭವಾಗಿ ಕೇವಲ ನಾಲ್ಕು ದಿನಗಳಾಗಿವೆ. ಇಷ್ಟರಲ್ಲಿ ಅಗ್ರ 11 ಟೆನಿಸ್ ಪಟುಗಳ ಪೈಕಿ ಎಂಟು ಮಂದಿ ಹೊರನಡೆದಿದ್ದಾರೆ. ಕೆಲವರು ಸೋತು ಹೊರಬಿದ್ದಿದ್ದರೆ ಇನ್ನು ಕೆಲವರು ಗಾಯಗೊಂಡು ಅಥವಾ ಹಿಂದೆ ಸರಿದು ವಾಪಸಾಗಿದ್ದಾರೆ.

ರಾತ್ರಿ ನಡೆದ ಪಂದ್ಯದಲ್ಲಿ ಕೊಕೊ ಗಫ್ ರಷ್ಯಾದ ಎಲಿನಾ ವೆಸ್ನಿನಾ ಅವರನ್ನು 6–4,6–3ರಲ್ಲಿ ಮಣಿಸಿದರು.

ಜೆಕ್ ಗಣರಾಜ್ಯದ ಬಾರ್ಬೊರಾ ಕ್ರೆಸಿಕೋವಾ 7–5, 6–4ರಲ್ಲಿ ಜರ್ಮನಿಯ ಆ್ಯಂಡ್ರಿ ಪೆಟ್ಕೊವಿಚ್ ವಿರುದ್ಧ ಜಯ ಗಳಿಸಿ ಸತತ 14 ಪಂದ್ಯಗಳಲ್ಲಿ ಗೆದ್ದ ಸಾಧನೆ ಮಾಡಿದರು. ಅಮೆರಿಕದ ಶೆಲ್ಬಿ ರೋಜರ್ಸ್ ವಿಂಬಲ್ಡನ್‌ನಲ್ಲಿ ಇದೇ ಮೊದಲ ಬಾರಿ ಮೂರನೇ ಸುತ್ತು ಪ್ರವೇಶಿಸಿದರು. ವಿಶ್ವ ಕ್ರಮಾಂಕದಲ್ಲಿ 15ನೇ ಸ್ಥಾನದಲ್ಲಿರುವ ಮರಿಯಾ ಸಕ್ಕರಿ ವಿರುದ್ಧ ಅವರು 7–5, 6–4ರಲ್ಲಿ ಜಯ ಗಳಿಸಿದರು.

ಅನಸ್ತೇಸಿಯಾ ಪೌಲಿಚೆಂಕೋವಾ 6–3, 6–3ರಲ್ಲಿ ಕ್ರಿಸ್ಟಿನಾ ಪ್ಲಿಸ್ಕೋವ ವಿರುದ್ಧ ಗೆಲುವು ಸಾಧಿಸಿದರು.

ಫೆಡರರ್‌ಗೆ ಜಯ: ಪುರುಷರ ವಿಭಾಗದಲ್ಲಿ ರಿಚರ್ಡ್ ಗಾಸ್ಕೆಟ್ ಅವರನ್ನು ರೋಜರ್ ಫೆಡರರ್ 7-6 (7/1), 6-1, 6-4ರಲ್ಲಿ ಮಣಿಸಿದರು.

ಈ ಮೂಲಕ ವಿಂಬಲ್ಡನ್‌ನಲ್ಲಿ 46 ವರ್ಷಗಳ ನಂತರ ಮೂರನೇ ಸುತ್ತು ಪ್ರವೇಶಿಸಿದ ಅತಿ ಹಿರಿಯ ಆಟಗಾರ ಎನಿಸಿಕೊಂಡರು. ಅವರಿಗೆ ಈಗ 39 ವರ್ಷ. 1975ರಲ್ಲಿ ಆಸ್ಟ್ರೇಲಿಯಾದ ಕೆನ್ ರೋಸ್‌ವೆಲ್ 40ನೇ ವರ್ಷದಲ್ಲಿ ಮೂರನೇ ಸುತ್ತು ತಲುಪಿದ್ದರು.

ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಮೂರನೇ ಸುತ್ತು ಪ್ರವೇಶಿಸಿದರು. 13 ಏಸ್‌ಗಳನ್ನು ಸಿಡಿಸಿದ ಅವರು ಟೆನಿಸ್ ಸ್ಯಾಂಡ್‌ಗ್ರೆನ್ ಎದುರು 7-5, 6-2, 6-3ರಲ್ಲಿ ಗೆಲುವು ಸಾಧಿಸಿದರು. ನಿಕ್ ಕಿರ್ಗಿಯೋಸ್ ಇಟಲಿಯ ಗ್ಯಾನ್‌ಲುಕಾ ಮ್ಯಾಗರ್ ವಿರುದ್ಧ 7-6(7), 6-4, 6-4ರಲ್ಲಿ ಜಯ ಗಳಿಸಿದರು. ಡ್ಯಾನಿಯಲ್ ಮೆಡ್ವೆಡೆವ್ ಸ್ಪೇನ್‌ನ ಕಾರ್ಲೋಸ್ ಅಲ್ಕರಸ್ ಅವರನ್ನು 6-4, 6–1, 6–2ರಲ್ಲಿ ಮಣಿಸಿದರು.

ಚೆಂಡನ್ನು ರಿಟರ್ನ್ ಮಾಡಿದ ಮಗ್ದಾ ಲಿನೆಟೆ –ರಾಯಿಟರ್ಸ್ ಚಿತ್ರ

ಸಾನಿಯಾ ಜೋಡಿ ಜಯಭೇರಿ

ಭಾರತದ ಸಾನಿಯಾ ಮಿರ್ಜಾ ಮತ್ತು ಅಮೆರಿಕದ ಬೆಥಾನಿ ಮಟೆಕ್ ಸ್ಯಾಂಡ್ಸ್ ಜೋಡಿ ಮಹಿಳೆಯರ ಡಬಲ್ಸ್‌ನಲ್ಲಿ ಆರನೇ ಶ್ರೇಯಾಂಕದ ಡೆಸಿರೆ ಕ್ರೌಸಿಕ್ (ಅಮೆರಿಕ) ಮತ್ತು ಅಲೆಕ್ಸಾ ಗೌರಚಿ (ಚಿಲಿ) ವಿರುದ್ಧ 7–5, 6–3ರಲ್ಲಿ ಗೆಲುವು ಸಾಧಿಸಿದರು. ಪಂದ್ಯ 27 ನಿಮಿಷಗಳಲ್ಲಿ ಮುಕ್ತಾಯ ಕಂಡಿತು. ಪುರುಷರ ಡಬಲ್ಸ್ ವಿಭಾಗದಲ್ಲಿ ರೋಹನ್ ಬೋಪಣ್ಣ ಮತ್ತು ದಿವಿಜ್ ಶರಣ್ ಜೋಡಿ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಎಡೋರ್ಡ್ ರೋಜರ್ ವಸೆಲಿನ್ ಮತ್ತು ಹೆನ್ರಿ ಕಾಂಟಿನೆನ್ ವಿರುದ್ಧ ಭಾರತದ ಆಟಗಾರರು 6-7 (6) 4-6ರಲ್ಲಿ ಸೋತರು.



ಸಾನಿಯಾ ಮಿರ್ಜಾ

ಕ್ರಿಕೆಟ್: ಇಂಗ್ಲೆಂಡ್ ತಂಡಕ್ಕೆ ಸರಣಿ

ಟಾಂಟನ್ (ಪಿಟಿಐ): ಸೋಫಿಯಾ ಡಂಕ್ಲಿ (ಔಟಾಗದೆ 73; 81ಎಸೆತ, 5ಬೌಂಡರಿ, 1ಸಿಕ್ಸರ್) ಅವರ ಅರ್ಧಶತಕದ ಬಲದಿಂದ ಇಂಗ್ಲೆಂಡ್ ಮಹಿಳಾ ತಂಡವು ಬುಧವಾರ ತಡರಾತ್ರಿ ನಡೆದ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತದ ಎದುರು 5 ವಿಕೆಟ್‌ಗಳಿಂದ ಜಯಿಸಿತು.

ಆತಿಥೇಯ ಇಂಗ್ಲೆಂಡ್ ತಂಡವು ಮೂರು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಸಾಧಿಸಿತು. ಮಿಥಾಲಿ ರಾಜ್ ಅರ್ಧಶತಕದ ಬಲದಿಂದ ಭಾರತ ತಂಡವು 50 ಓವರ್‌ಗಳಲ್ಲಿ 221 ರನ್‌ಗಳನ್ನು ಗಳಿಸಿತ್ತು. ಅದಕ್ಕುತ್ತರವಾಗಿ ಇಂಗ್ಲೆಂಡ್ ತಂಡವು 47.3 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 225 ರನ್ ಗಳಿಸಿ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 221, **ಇಂಗ್ಲೆಂಡ್:** 47.3 ಓವರ್‌ಗಳಲ್ಲಿ 5ಕ್ಕೆ 225 (ಲಾರೆನ್ ವಿನ್‌ಫೀಲ್ಡ್ ಹಿಲ್ 42, ಸೋಫಿಯಾ ಡಂಕ್ಲಿ ಔಟಾಗದೆ 73, ಪೂನಂ ಯಾದವ್ 63ಕ್ಕೆ2) **ಫಲಿತಾಂಶ:** ಇಂಗ್ಲೆಂಡ್ ತಂಡಕ್ಕೆ 5 ವಿಕೆಟ್ ಜಯ, ಸರಣಿಯಲ್ಲಿ 2-0 ಮುನ್ನಡೆ

ಸುದ್ದಿ 2 ನಿಮಿಷ

ಆರ್‌ಸಿಬಿ ಫ್ರಾಂಚೈಸ್ ಮುಖ್ಯಸ್ಥರಾಗಿ ಪ್ರಥಮೇಶ್ ಮಿಶ್ರಾ ನೇಮಕ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸ್ ಮುಖ್ಯಸ್ಥರಾಗಿ ಪ್ರಥಮೇಶ್ ಮಿಶ್ರಾ ನೇಮಕವಾಗಿದ್ದಾರೆ.

ರಾಯಲ್ ಚಾಲೆಂಜರ್ಸ್ ಸ್ಪೋರ್ಟ್ಸ್ ಲಿಮಿಟೆಡ್‌ನ ಅಂಗಸಂಸ್ಥೆಯಾಗಿರುವ ಡಿಯಾಜಿಯೊ ಇಂಡಿಯಾದಲ್ಲಿ ಮುಖ್ಯ ವಾಣಿಜ್ಯಾಧಿಕಾರಿಯಾಗಿ ಮಿಶ್ರಾ ಅವರಿಗೆ ಹೆಚ್ಚುವರಿಯಾಗಿ ಫ್ರಾಂಚೈಸಿ ಮುಖ್ಯಸ್ಥರ ಹೊಣೆಯನ್ನು ನೀಡಲಾಗಿದೆ.

ಆನಂದ್ ಕೃಪಾಲು ಅವರ ಅಧಿಕಾರಾವಧಿ ಮುಗಿದಿದ್ದು ಆ ಸ್ಥಾನಕ್ಕೆ ಮಿಶ್ರಾ ನೇಮಕವಾಗಿದ್ದಾರೆ.

'ತಂಡದ ನಾಯಕ ವಿರಾಟ್ ಕೊಹ್ಲಿ, ಕೋಚ್ ಮೈಕ್ ಹೆಸನ್ ಮತ್ತು ಸೈಮನ್ ಕ್ಯಾಟಿಚ್ ಅವರೊಂದಿಗೆ ಕಾರ್ಯನಿರ್ವಹಿಸಲು ಉತ್ಸುಕನಾಗಿದ್ದೇನೆ. ಆನಂದ್ ಅವರು ಇದುವರೆಗೆ ಸಂಸ್ಥೆಗೆ ಉತ್ತಮ ಕಾಣಿಕೆ ನೀಡಿದ್ದಾರೆ. ಅವರ ಮಾರ್ಗದರ್ಶನಕ್ಕೆ ಆಭಾರಿಯಾಗಿದ್ದೇನೆ' ಎಂದು ಮಿಶ್ರಾ ಹೇಳಿದ್ದಾರೆ.

ಫಿಕ್ಸಿಂಗ್: ಯುಎಇ ಆಟಗಾರರಿಗೆ ನಿಷೇಧ ಶಿಕ್ಷೆ

ದುಬೈ (ಪಿಟಿಐ): ಕ್ರಿಕೆಟ್ ಪಂದ್ಯದ ಫಿಕ್ಸಿಂಗ್ ಮತ್ತು ಬುಕ್ಕಿಯೊಂದಿಗಿನ ಸಂಪರ್ಕದಲ್ಲಿದ್ದ ಯುನೈಟೆಡ್ ಅರಬ್ ಎಮಿರೇಟ್ಸ್ ತಂಡದ ಇಬ್ಬರು ಆಟಗಾರರಿಗೆ ಎಂಟು ವರ್ಷಗಳ ನಿಷೇಧ ಶಿಕ್ಷೆ ವಿಧಿಸಲಾಗಿದೆ. ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಭ್ರಷ್ಟಾಚಾರ ತಡೆ ಘಟಕದ ಟ್ರಿಬ್ಯುನಲ್ ಗುರುವಾರ ಈ ತೀರ್ಪು ಪ್ರಕಟಿಸಿದೆ. ಆಟಗಾರರಾದ ಅಮೀರ್ ಹಯಾತ್ ಮತ್ತು ಅಷ್ಫಾಕ್ ಅಹಮದ್ ಅವರು ಬುಕ್ಕಿಯೊಂದಿಗೆ ಸಂಪರ್ಕವಿರುವುದಾಗಿ ಒಪ್ಪಿಕೊಂಡಿದ್ದಾರೆ. 2019ರಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯವನ್ನು ಫಿಕ್ಸ್ ಮಾಡುವ ಹುನ್ನಾರವನ್ನೂ ಒಪ್ಪಿಕೊಂಡಿದ್ದಾರೆ. ಭಾರತ ಮೂಲದ ಬುಕ್ಕಿ ಸಂಪರ್ಕಿಸಿದ್ದಾಗಿ ತಿಳಿಸಿದ್ದಾರೆ. ಹೋದ ವರ್ಷದ ಸೆಪ್ಟೆಂಬರ್‌ನಲ್ಲಿ ಇವರಿಬ್ಬರು ಆಟಗಾರರ ಮೇಲೆ ಪ್ರಕರಣ ದಾಖಲಾಗಿತ್ತು. ಈ ಇಬ್ಬರೂ ಆಟಗಾರರು ಪಾಕಿಸ್ತಾನ ಮೂಲದವರು.

ಟೋಕಿಯೊಗೆ 15 ಅಥ್ಲೀಟ್‌ಗಳು

ನವದೆಹಲಿ (ಪಿಟಿಐ): ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ, ಓಟಗಾರ್ತಿ ದ್ಯುತಿ ಚಾಂದ್ ಸೇರಿದಂತೆ ಟೋಕಿಯೊ ಒಲಿಂಪಿಕ್ಸ್‌ನ ಅಥ್ಲೆಟಿಕ್ಸ್ ವಿಭಾಗದ ವೈಯಕ್ತಿಕ ಸ್ಪರ್ಧೆಗಳಲ್ಲಿ ಭಾರತದ 15 ಕ್ರೀಡಾಪಟುಗಳು ಸ್ಪರ್ಧಿಸಲಿದ್ದಾರೆ.

ದ್ಯುತಿ ಚಾಂದ್

ಪುರುಷರ ಮತ್ತು ಮಿಶ್ರ ವಿಭಾಗಗಳ ರಿಲೆ ತಂಡಗಳು ಕೂಡ ಅರ್ಹತೆ ಗಳಿಸಿಕೊಂಡಿವೆ ಎಂದು ವಿಶ್ವ ಅಥ್ಲೆಟಿಕ್ಸ್ ಸಂಸ್ಥೆ ತಿಳಿಸಿದೆ.

ಅಥ್ಲೀಟ್‌ಗಳು: ನೀರಜ್ ಚೋಪ್ರಾ, ಶಿವಪಾಲ್ ಸಿಂಗ್ (ಪುರುಷರ ಜಾವೆಲಿನ್ ಥ್ರೋ), ಅವಿನಾಶ್ ಸಬ್ಳೆ (ಪುರುಷರ 3000 ಮೀ ಸ್ಟೀಪಲ್‌ಚೇಸ್), ಕೆ.ಟಿ. ಇರ್ಫಾನ್, ಸಂದೀಪ್ ಕುಮಾರ್, ರಾಹುಲ್ ರೋಹಿಲಾ (20 ಕಿ.ಮೀ ನಡಿಗೆ), ಭಾವನಾ ಜಾಟ್, ಪ್ರಿಯಾಂಕಾ ಗೋಸ್ವಾಮಿ (ಮಹಿಳೆಯರ 20 ಕಿ.ಮೀ ನಡಿಗೆ), ಎಂ. ಶ್ರೀಶಂಕರ್ (ಪುರುಷರ ಲಾಂಗ್ ಜಂಪ್), ತಜಿಂದರ್ ಪಾಲ್ ಸಿಂಗ್ ತೂರ್ (ಪುರುಷರ ಶಾಟ್‌ಪಟ್), ಕಮಲ್‌ಪ್ರೀತ್ ಕೌರ್, ಸೀಮಾ ಪೂನಿಯಾ (ಮಹಿಳೆಯರ ಡಿಸ್ಕಸ್‌ಥ್ರೋ), ದ್ಯುತಿ ಚಾಂದ್ (ಮಹಿಳೆಯರ 100ಮೀ, 200ಮೀ ಓಟ), ಎಂ.ಪಿ. ಜಬೀರ್ (ಪುರುಷರ 400ಮೀ ಹರ್ಡಲ್ಸ್), ಅನು ರಾಣಿ (ಮಹಿಳೆಯರ ಜಾವೆಲಿನ್ ಥ್ರೋ), ಎಂ.ಪಿ. ಜಬೀರ್ (400 ಮೀ ಹರ್ಡಲ್ಸ್).

ಒಲಿಂಪಿಕ್ಸ್: ಫವಾದ್ ಮಿರ್ಜಾಗೆ ಡಯಾರಾ ಫೋರ್ ಅಶ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೋಕಿಯೊ ಒಲಿಂಪಿಕ್ಸ್‌ನ ಈಕ್ವೆಸ್ಟ್ರಿಯನ್‌ನಲ್ಲಿ ಸ್ಪರ್ಧಿಸಲಿರುವ ಭಾರತದ ಫವಾದ್ ಮಿರ್ಜಾ ಅವರು ಡಯಾರಾ ಫೋರ್ ಕುದುರೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ.

ಭಾರತದಿಂದ ಒಲಿಂಪಿಕ್ ಈಕ್ವೆಸ್ಟ್ರಿಯನ್ ವೈಯಕ್ತಿಕ ವಿಭಾಗದಲ್ಲಿ ಸ್ಪರ್ಧಿಸುತ್ತಿರುವ ಮೂರನೇ ಕ್ರೀಡಾಪಟುವಾಗಿದ್ದಾರೆ. ಈ ಹಿಂದೆ ಇಂದ್ರಜೀತ್ ಲಂಬಾ ಮತ್ತು ಇಮ್ತಿಯಾಜ್ ಅನೀಸ್ ಅವರು ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದರು.

'ಇದೇ ತಿಂಗಳು ಟೋಕಿಯೊದಲ್ಲಿ ನಡೆಯಲಿರುವ ಒಲಿಂಪಿಕ್ಸ್‌ನಲ್ಲಿ ಡಯಾರಾ ಫೋರ್ ಅಶ್ವದೊಂದಿಗೆ ಸ್ಪರ್ಧಿಸಲಿದ್ದೇನೆ. ಉತ್ತಮವಾಗಿ ಸಿದ್ಧತೆ ಮಾಡಿಕೊಳ್ಳುತ್ತಿರುವುದರಿಂದ ಕುದುರೆಯ ಅರ್ಹತಾ ಸಾಮರ್ಥ್ಯದ ಮೇಲೆ ನನಗೆ ವಿಶ್ವಾಸವಿದೆ' ಎಂದು ಮಿರ್ಜಾ ಗುರುವಾರ ನಡೆದ ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಇತಿಹಾಸ ನಿರ್ಮಿಸುವ ಹಾದಿಯಲ್ಲಿದ್ದೇವೆ. ಅದಕ್ಕಾಗಿ ಡಯಾರಾ ನೆರವು ನೀಡಲಿದೆ. ಬಹಳ ಸುಂದರ ಮತ್ತು ಚುರುಕಾದ ಅಶ್ವವಾಗಿದೆ. ಸ್ಪರ್ಧೆಗೆ ಕುದುರೆಯನ್ನು ಆಯ್ಕೆ ಮಾಡಿಕೊಳ್ಳುವುದು ಕಠಿಣ ಸವಾಲಾಗಿತ್ತು' ಎಂದು ಹೇಳಿದರು.

ಅವರು ಸವಾರಿ ಮಾಡಲಿರುವ ಕುದುರೆಯ ಮೌಲ್ಯವು ₹ 2.43 ಕೋಟಿ. ಇದನ್ನು 2019ರಲ್ಲಿ ಖರೀದಿಸಲಾಗಿದೆ.

2018ರ ಏಷ್ಯನ್ ಗೇಮ್ಸ್‌ನಲ್ಲಿ ಮಿರ್ಜಾ ಅವರು ಸಿನೊರ್ ಮೆಡಿಕಾಟ್ ಅಶ್ವದೊಂದಿಗೆ ಕಣಕ್ಕಿಳಿದು ಬೆಳ್ಳಿ ಪದಕ ಜಯಿಸಿದ್ದರು. 36 ವರ್ಷಗಳ ಪದಕದ ಬರವನ್ನು ನೀಗಿಸಿದ್ದರು. 'ಎಂಬಸಿ ಸಮೂಹ ಸಂಸ್ಥೆ ಮತ್ತು ಜೀತು ವಿರ್ವಾನಿ ನನಗೆ ಪ್ರಾಯೋಜಕತ್ವ ನೀಡಿ ಈ ಮಟ್ಟಕ್ಕೆ ಬೆಳೆಯಲು ಕಾರಣ ರಾಗಿದ್ದಾರೆ. ಅವರಿಗೆ ನಾನು ಕೃತಜ್ಞ' ಎಂದು ಬೆಂಗಳೂರು ಮೂಲದ ಮಿರ್ಜಾ ಹೇಳಿದ್ದಾರೆ.

'ಡಯಾರಾ ಮತ್ತು ಮೆಡಿಕಾಟ್ ಎರಡೂ ಅತ್ಯುತ್ತಮ ಕುದುರೆಗಳು. ಈ ಎರಡೂ ನನ್ನ ಬಳಿ ಇರುವುದು ಅದೃಷ್ಟ. ಒಲಿಂಪಿಕ್ಸ್‌ನಲ್ಲಿ ಕ್ರಾಸ್ ಕಂಟ್ರಿ ಮತ್ತು ಎರಡು ಸುತ್ತುಗಳ ಶೋ ಜಂಪಿಂಗ್ ಇರುತ್ತದೆ. ಈ ಸ್ಪರ್ಧೆಗೆ ಮೆಡಿಕಾಟ್‌ಗಿಂತ ಡಯಾರಾ ಸೂಕ್ತವಾಗಿರುತ್ತದೆಯೆಂದು ಆಯ್ಕೆ ಮಾಡಿ ಕೊಂಡಿದ್ದೇವೆ' ಎಂದು ಮಿರ್ಜಾ ಹೇಳಿದ್ದಾರೆ.

'ಹೋದ ವಾರ ಪೋಲೆಂಡ್‌ನಲ್ಲಿ ನಡೆದಿದ್ದ ನೇಷನ್ಸ್ ಕಪ್ ಈಕ್ವೆಸ್ಟ್ರಿಯನ್‌ನಲ್ಲಿ ಡಯಾರಾ ಸ್ಪರ್ಧಿಸಿತ್ತು. ಎರಡನೇ ಸ್ಥಾನ ಗಳಿಸಿತ್ತು. ಈ ಬಾರಿ ಎರಡೂ ಕುದುರೆಗಳನ್ನು ಜರ್ಮನಿಯ ಎರಡು ತಾಣಗಳಲ್ಲಿ ಪ್ರತ್ಯೇಕವಾಗಿ ಜುಲೈ 11ರಿಂದ ಕ್ವಾರಂಟೈನ್ ಮಾಡಲಾಗುತ್ತಿದೆ ಅಡೆ ತಡೆ ಇಲ್ಲ' ಎಂದು ವಿವರಿಸಿದರು.

ಫವಾದ್ ಮಿರ್ಜಾ

'ಮಾಸಾಂತ್ಯದಿಂದ ಕ್ರಿಕೆಟ್ ಚಟುವಟಿಕೆಗಳು ಆರಂಭ'

ಬೆಂಗಳೂರು: ಈ ತಿಂಗಳ ಕೊನೆಯಲ್ಲಿ ಅಥವಾ ಆಗಸ್ಟ್ ಮೊದಲ ವಾರದಲ್ಲಿ ಕ್ರಿಕೆಟ್ ಋತುವನ್ನು ಆರಂಭಿಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಸಿದ್ಧತೆ ಆರಂಭಿಸಿದೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಅಕ್ಟೋಬರ್–ನವೆಂಬರ್‌ನಲ್ಲಿ ದೇಶಿ ಕ್ರಿಕೆಟ್ ಋತುವನ್ನು ಆರಂಭಿಸುವ ಸಾಧ್ಯತೆ ಇದೆ. ಅದಕ್ಕಾಗಿ ಕೆಎಸ್‌ಸಿಎ 1, 2 ಮತ್ತು 3ನೇ ಡಿವಿಷನ್ ಲೀಗ್‌ನಲ್ಲಿ ಏಕದಿನ ಕ್ರಿಕೆಟ್ ಮೂಲಕ ತನ್ನ ಚಟುವಟಿಕೆಗಳನ್ನು ಆರಂಭಿಸಲಿದೆ.

ಆಟಗಾರರ ಹೆಸರುಗಳನ್ನು ನೋಂದಣಿ ಮಾಡಿಕೊಳ್ಳಲು ಈಗಾಗಲೇ ಕ್ಲಬ್‌ಗಳಿಗೆ ಸೂಚನೆ ನೀಡಲಾಗಿದೆ. ಡಿವಿಷನ್ ಲೀಗ್‌ನಲ್ಲಿ ಆಡುವ ಆಟಗಾರರು ಜುಲೈ 17ರೊಳಗೆ ನಿರಾಕ್ಷೇಪಣ ಪತ್ರ ಪಡೆಯಬೇಕು. ಈ ಪತ್ರದೊಂದಿಗೆ ಅಂತರ ಕ್ಲಬ್ ವರ್ಗಾವಣೆ ಮಾಡಿಕೊಳ್ಳಲು 21ರವರೆಗೆ ಸಮಯ ನೀಡಲಾಗಿದೆ.

ಆಗಸ್ಟ್‌ನಲ್ಲಿ ಇವೇ ಕ್ಲಬ್‌ಗಳು ಟಿ20 ಟೂರ್ನಿಯಲ್ಲಿ ಆಡಲಿವೆ. 19 ವರ್ಷದೊಳಗಿನವರ ಅಂತರ ಕ್ಲಬ್ ಟೂರ್ನಿಯು ಆಗಸ್ಟ್ ಕೊನೆಯ ವಾರದಿಂದ ಸೆಪ್ಟೆಂಬರ್ ಎರಡನೇ ವಾರದವರೆಗೆ ಆಯೋಜಿಸಲು ಉದ್ದೇಶಿಸಲಾಗಿದೆ.

'ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಇಳಿಮುಖವಾಗುತ್ತಿವೆ. ಜನಜೀವನ ಸಹಜ ಸ್ಥಿತಿಗೆ ಮರಳುತ್ತಿದೆ. ಆದ್ದರಿಂದ ಕ್ರಿಕೆಟ್ ಚಟುವಟಿಕೆಗಳಿಗೆ ಚಾಲನೆ ನೀಡಲು ಟೂರ್ನಮೆಂಟ್ ಸಮಿತಿಯು ಸಭೆಯಲ್ಲಿ ಚರ್ಚಿಸಿತು' ಎಂದು ಕೆಎಸ್‌ಸಿಎ ಖಜಾಂಚಿ ವಿನಯ್ ಮೃತ್ಯುಂಜಯ ತಿಳಿಸಿದ್ದಾರೆ.

'ರಾಜ್ಯ ಸರ್ಕಾರವು ಕ್ರಿಕೆಟ್ ಚಟುವಟಿಕೆಗಳನ್ನು ಆಯೋಜಿಸಲು ಅವಕಾಶ ನೀಡಿದೆ. ನಿಯಮಗಳ ಚೌಕಟ್ಟಿನಲ್ಲಿ ಮತ್ತು ಕೋವಿಡ್ ನಿಯಮಾವಳಿನ್ನು ಸಂಪೂರ್ಣವಾಗಿ ಜಾರಿಗೊಳಿಸಲಾಗುವುದು. ಆಟಗಾರರು, ಸಿಬ್ಬಂದಿ ಮತ್ತು ಅಧಿಕಾರಿಗಳ ಸುರಕ್ಷತೆಗೆ ಆದ್ಯತೆ ನೀಡಲಾಗುವುದು' ಎಂದು ತಿಳಿಸಿದರು.

ಯೂರೊ ಕಪ್: ಕ್ವಾರ್ಟರ್ ಫೈನಲ್ ಇಂದಿನಿಂದ

ಸ್ಪೇನ್–ಸ್ವಿಟ್ಜರ್ಲೆಂಡ್ ಹಣಾಹಣಿ

ಸೇಂಟ್ ಪೀಟರ್ಸ್‌ಬರ್ಗ್ (ಎಎಫ್‌ಪಿ): ಆರೂವರೆ ದಶಕಗಳ ನಂತರ ಪ್ರಮುಖ ಟೂರ್ನಿಯೊಂದರ ಕ್ವಾರ್ಟರ್ ಫೈನಲ್ ಪ್ರವೇಶಿಸಿರುವ ಸ್ವಿಟ್ಜರ್ಲೆಂಡ್ ತಂಡ ಯೂರೊ ಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಶುಕ್ರವಾರ ಸ್ಪೇನ್ ವಿರುದ್ಧ ಸೆಣಸಲಿದೆ.

ವಿಶ್ವ ಚಾಂಪಿಯನ್ ಫ್ರಾನ್ಸ್ ವಿರುದ್ಧ ಗೆದ್ದು ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರೂ ಸ್ಪೇನ್ ವಿರುದ್ಧ ಜಯಿಸಬೇಕಾದರೆ ಸ್ವಿಟ್ಜರ್ಲೆಂಡ್ ಕಠಿಣ ಪರಿಶ್ರಮಪಡಬೇಕಾಗಬಹುದು.

ದಾಖಲೆಯ ನಾಲ್ಕನೇ ಚಾಂಪಿಯನ್‌ಷಿಪ್ ಮೇಲೆ ಸ್ಪೇನ್ ಕಣ್ಣಿಟ್ಟಿದೆ. ಸ್ವಟ್ಜರ್ಲೆಂಡ್ ವಿರುದ್ಧ ಈ ಹಿಂದಿನ ಪಂದ್ಯಗಳಲ್ಲಿ ಸ್ಪೇನ್ ಮೇಲುಗೈ ಸಾಧಿಸಿದೆ. ಹಿಂದಿನ ಒಟ್ಟು 22 ಪಂದ್ಯಗಳಲ್ಲಿ ಸ್ಪೇನ್ ಒಂದು ಬಾರಿ ಮಾತ್ರ ಈ ತಂಡಕ್ಕೆ ಮಣಿದಿದೆ. ಹೀಗಾಗಿ ನಾಯಕ ಸರ್ಜಿಯೊ ಬಸ್ಕ್ವೆಟ್ಸ್ ಗೆಲುವಿನ ಭರವಸೆಯಲ್ಲಿದ್ದಾರೆ.1954ರ ವಿಶ್ವಕಪ್ ಟೂರ್ನಿಯ ಎಂಟರ ಘಟ್ಟ ಪ್ರವೇಶಿಸಿದ ನಂತರ ಸ್ವಿಟ್ಜರ್ಲೆಂಡ್ ಪ್ರಮುಖ ಟೂರ್ನಿಯ ನಾಕೌಟ್ ಹಂತಕ್ಕೇರಲಿಲ್ಲ.

ಪಂದ್ಯ ಆರಂಭ: ರಾತ್ರಿ 9.30 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸೋನಿ ಸಿಕ್ಸ್

ಬೆಲ್ಜಿಯಂಗೆ ಇಟಲಿ ಸವಾಲು

ಮ್ಯೂನಿಚ್ (ಎಪಿ): ಹಾಲಿ ಚಾಂಪಿಯನ್ ಪೋರ್ಚುಗಲ್ ತಂಡವನ್ನು ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿರುವ ಬೆಲ್ಜಿಯಂ ಸೆಮಿಫೈನಲ್ ಕನಸಿನೊಂದಿಗೆ ಇಟಲಿಯನ್ನು ಎದುರಿಸಲಿದೆ. ರೊಮೇಲು ಲುಕಾಕು ಮೇಲೆ ಬೆಲ್ಜಿಯಂ ನಿರೀಕ್ಷೆ ಇರಿಸಿಕೊಂಡಿದೆ. ಟೂರ್ನಿಯಲ್ಲಿ ಜಯ ಗಳಿಸಿದ ನಾಲ್ಕು ಪಂದ್ಯಗಳಲ್ಲಿ ಅವರು ಮೂರು ಗೋಲು ಗಳಿಸಿದ್ದಾರೆ. ಕೆವಿನ್ ಡಿ ಬ್ರೂನಿ ಮತ್ತು ಏಡನ್ ಹಜಾರ್ಡ್ ಈ ಪಂದ್ಯದಲ್ಲಿ ಕಣಕ್ಕೆ ಇಳಿಯುತ್ತಿಲ್ಲ.

ಲಿಯೊನಾರ್ಡೊ ಬೊನುಚಿ ಮೇಲೆ ಇಟಲಿ ನಾಯಕ ಜಾರ್ಜಿಯೊ ಚೀಲಿನಿ ಭರವಸೆ ಇರಿಸಿಕೊಂಡಿದ್ದಾರೆ. ವಿಶ್ವಕಪ್ ಟೂರ್ನಿಯಲ್ಲಿ ಮೂರನೇ ಸ್ಥಾನ ಗಳಿಸಿದ ನಂತರ ಬೆಲ್ಜಿಯಂ ಪ್ರಮುಖ ಟೂರ್ನಿಗಳಲ್ಲಿ ಗಮನಾರ್ಹ ಸಾಧನೆ ಮಾಡಲಿಲ್ಲ. ಹಿಂದಿನ 13 ಪಂದ್ಯಗಳಲ್ಲಿ ಈ ತಂಡ ಸೋಲು ಕಂಡಿಲ್ಲ. ಹೀಗಾಗಿ ಇಟಲಿ ಎದುರಿನ ಪಂದ್ಯ ಕುತೂಹಲ ಕೆರಳಿಸಿದೆ.

ಪಂದ್ಯ ಆರಂಭ: ರಾತ್ರಿ 12.30 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸೋನಿ ಸಿಕ್ಸ್

ಕೆಐಒಸಿಎಲ್ ಸಿಎಂಡಿಯಾಗಿ ಎಸ್‌.ಕೆ. ಗೊರೈ

ಪ್ರಜಾವಾಣಿ ವಾರ್ತೆ

ಮಂಗಳೂರು: ಕುದುರೆಮುಖ ಕಬ್ಬಿಣ ಮತ್ತು ಅದಿರು ಕಂಪನಿ (ಕೆಐಒಸಿಎಲ್) ಪ್ರಭಾರ ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕರಾಗಿ (ಸಿಎಂಡಿ) ಹಣಕಾಸು ನಿರ್ದೇಶಕ ಸ್ವಪ್ನಕುಮಾರ್ ಗೊರೈ ಅವರನ್ನು ನೇಮಿಸಲಾಗಿದೆ.

ಎಸ್‌.ಕೆ. ಗೊರೈ

ಹಾಲಿ ಸಿಎಂಡಿ ಎಂ.ವಿ. ಸುಬ್ಬರಾವ್ ಅವರು ಜೂನ್ 30ರಂದು ನಿವೃತ್ತರಾಗಿದ್ದು, ಅವರ ಜಾಗಕ್ಕೆ ಈ ನೇಮಕ ಮಾಡಲಾಗಿದೆ. ಲೆಕ್ಕಪರಿಶೋಧಕರಾಗಿರುವ ಗೊರೈ, ಸರ್ಕಾರಿ ಹಾಗೂ ಖಾಸಗಿ ಕಂಪನಿಗಳಲ್ಲಿ ಸುಮಾರು 33 ವರ್ಷಗಳ ಸೇವಾ ಅನುಭವ ಹೊಂದಿದ್ದಾರೆ.

ಮಾರ್ಚ್ ವೇಳೆಗೆ ಶೇ 9.8ಕ್ಕೆ ಎನ್‌ಪಿಎ ಪ್ರಮಾಣ

ಮುಂಬೈ (ಪಿಟಿಐ): ಬ್ಯಾಂಕುಗಳ ಒಟ್ಟು ಅನುತ್ಪಾದಕ ಆಸ್ತಿಯ ಪ್ರಮಾಣವು ಮುಂದಿನ ವರ್ಷದ ಮಾರ್ಚ್ ತಿಂಗಳ ವೇಳೆಗೆ ಶೇಕಡ 9.8ಕ್ಕೆ ಹೆಚ್ಚಳ ಕಾಣುವ ಸಾಧ್ಯತೆ ಇದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ. ಈ ವರ್ಷದ ಮಾರ್ಚ್‌ನಲ್ಲಿ ಎನ್‌ಪಿಎ ಪ್ರಮಾಣವು ಶೇ 7.48ರಷ್ಟು ಇತ್ತು.

ಮುಂದಿನ ದಿನಗಳಲ್ಲಿ ಯಾವುದೇ ಬದಲಾವಣೆ ಆಗದಿದ್ದರೆ ಎನ್‌ಪಿಎ ಪ್ರಮಾಣದಲ್ಲಿ ಇಷ್ಟು ಹೆಚ್ಚಳ ಆಗಲಿದೆ ಎಂದು ಆರ್‌ಬಿಐನ ಹಣಕಾಸು ಸ್ಥಿರತೆ ವರದಿಯಲ್ಲಿ ಹೇಳಲಾಗಿದೆ.

ಬ್ಯಾಂಕ್‌ಗಳ ಮೇಲೆ ಮುಂದಿನ ದಿನಗಳಲ್ಲಿ ತೀರಾ ಒತ್ತಡ ಉಂಟಾದರೆ, ಎನ್‌ಪಿಎ ಪ್ರಮಾಣವು ಶೇ 11.22ರ ಮಟ್ಟಕ್ಕೆ ಏರಬಹುದು ಎಂದೂ ವರದಿಯಲ್ಲಿ ಎಚ್ಚರಿಸಲಾಗಿದೆ. ವರದಿಯನ್ನು ಗುರುವಾರ ಬಿಡುಗಡೆ ಮಾಡಲಾಗಿದೆ.

ಈ ವರ್ಷದ ಜನವರಿಯಲ್ಲಿ ಬಿಡುಗಡೆ ಮಾಡಿದ್ದ ಹಣಕಾಸು ಸ್ಥಿರತೆ ವರದಿಯು, 'ಪರಿಸ್ಥಿತಿಯಲ್ಲಿ ಬದಲಾವಣೆ ಆಗದೆ ಇದ್ದರೆ ಎನ್‌ಪಿಎ ಪ್ರಮಾಣವು ಸೆಪ್ಟೆಂಬರ್ ವೇಳೆಗೆ ಶೇ 13.5ರಷ್ಟಾಗಬಹುದು' ಎಂದು ಅಂದಾಜು ಮಾಡಿತ್ತು. ಆದರೆ, 'ಬ್ಯಾಂಕ್‌ಗಳ ಬಳಿ ಸಾಕಷ್ಟು ಬಂಡವಾಳ ಸಂಗ್ರಹ ಇದೆ' ಈಗ ಬಿಡುಗಡೆ ಮಾಡಿರುವ ವರದಿಯಲ್ಲಿ ಹೇಳಲಾಗಿದೆ.

'ಸುಧಾರಿಸುತ್ತಿದೆ': ಕೊರೊನಾ ವೈರಾಣುವಿನ ಎರಡನೆಯ ಅಲೆಗೆ ದೇಶವು ಬಹಳ ದೊಡ್ಡ ಬೆಲೆ ತೆರಬೇಕಾಯಿತು. ಆದರೆ, ಕುಸಿದಿದ್ದ ಆರ್ಥಿಕ ಚಟುವಟಿಕೆಗಳು ಮೇ ತಿಂಗಳ ಕೊನೆಯ ವೇಳೆಗೆ ಸುಧಾರಿಸಿಕೊಳ್ಳಲು ಆರಂಭಿಸಿದವು ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ವರದಿಯ ಮುನ್ನುಡಿಯಲ್ಲಿ ಬರೆದಿದ್ದಾರೆ.

ಬಳಕೆದಾರರ ದತ್ತಾಂಶ ಸೋರಿಕೆ ಆಗುತ್ತಿರುವುದು, ಸೈಬರ್ ದಾಳಿಗಳು ಹೆಚ್ಚುತ್ತಿರುವುದು ಅರ್ಥ ವ್ಯವಸ್ಥೆಗೆ ಎದುರಾಗಿರುವ ಅಪಾಯಗಳಲ್ಲಿ ಒಂದು ಎಂದೂ ಅವರು ಎಚ್ಚರಿಕೆ ನೀಡಿದ್ದಾರೆ. ಬ್ಯಾಂಕ್‌ಗಳ ಹಣಕಾಸಿನ ಸ್ಥಿತಿಯ ಮೇಲೆ ಮೊದಲು ಅಂದಾಜಿಸಿದಷ್ಟು ಕೆಟ್ಟ ಪರಿಣಾಮ ಉಂಟಾಗಿಲ್ಲ ಎಂದು ದಾಸ್ ಅವರು ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	385
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-42000
ಕುಮಟ	
ಚಿಪ್ಪು	27699-33469
ಕೋಕ	21699-30120
ಹಳೆಚಾಲಿ	41599-42500
ಹೊಸಚಾಲಿ	35669-39569
ಸಿದ್ದಾಪುರ	
ಬಿಳಿಗೋಟು	24509-33108
ಚಾಲಿ	36266-39219
ಕೋಕ	19099-31299
ಕೆಂಪುಗೋಟು	27899-29799
ರಾಶಿ	39029-41599
ತಟ್ಟಿಬೆಟ್ಟೆ	36669-40179
ಶಿರಸಿ	
ರಾಶಿ	26421-42899
ಬೆಟ್ಟೆ	20796-39199
ಬಿಳಿಗೋಟು	20669-34882
ಚಾಲಿ	30199-39298
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	311-397
ದ್ವಿತಳಿ (ಬಿ.ವಿ)	280-466

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11400	11000	10925	159.25 ಸೆಂಟ್ಸ್
ಎಸಿ	4730	4500	4350	
ಆರ್‌ಪಿ	5600	5500	5625	
ಆರ್‌ಸಿ	3300	3150	3325	1721 ಡಾಲರ್ಸ್

ವಿನಿಮಯ ದರ

$ ಡಾಲರ್	74.55
£ ಪೌಂಡ್	102.73
€ ಯುರೊ	88.39
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹510
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹510

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1360 (1360)
ಸೋಯಾ (ರಿಫೈನ್ಡ್)	₹1285 (1285)
ಸೂರ್ಯಕಾಂತಿ (ರಿಫೈನ್ಡ್)	₹1330(1340)
ಪಾಮೋಲಿನ್	₹1147(1155)

ಬೆಂಗಳೂರು ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದೊಡ್ಡ	₹1500-2000
ಮಧ್ಯಮ	₹1200-1500
ಸಣ್ಣ	₹1000-1200

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,721
ಇಂದಿನ ಅಂತ್ಯ	15,680
▼	41
ದಿನದ ಕನಿಷ್ಠ	15,667

ಮುಂಬೈ ಧಾರಣೆ

ಶೇಂಗಾ

1-7-2021

ಜಾವಾ 70/80(ಹೊಸ)	9700-9750
ಜಾವಾ 80/90(ಹೊಸ)	8950-9000
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1370 (1375)
ಒಂದು ವಾರದ ಡೆಲಿವರಿ	1365 (1370)
ಸೋಯಾ ಕಚ್ಚಾ	1240 (1225)
ಪಾಮ್ ವಾರದ ಡೆಲಿವರಿ	1145 (1153)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (1260)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,200 (46,550)
ಬೆಳ್ಳಿ ಕೆ.ಜಿ 69,100 (67,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಜೆಟ್ ಏರ್‌ವೇಸ್‌ನಲ್ಲಿ ₹ 1,375 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಆರ್ಥಿಕವಾಗಿ ದಿವಾಳಿ ಆಗಿರುವ ಜೆಟ್ ಏರ್‌ವೇಸ್ ಕಂಪನಿಯ ಪುನಶ್ಚೇತನಕ್ಕೆ ಜಲನ್ ಕಲ್‌ರಾಕ್ ಒಕ್ಕೂಟವು ಒಟ್ಟಾರೆ ₹ 1,375 ಕೋಟಿ ಹೂಡಿಕೆ ಮಾಡಲಿದೆ.

ಒಟ್ಟಾರೆ ಮೊತ್ತದಲ್ಲಿ ಸಾಲದಾತರಿಗೆ ಮತ್ತು ಷೇರುದಾರರಿಗೆ ಪಾವತಿಸಲಿರುವ ₹ 475 ಕೋಟಿ ಮೊತ್ತವೂ ಒಳಗೊಂಡಿದೆ. ಕಂಪನಿಯ ಸುಗಮ ಕಾರ್ಯಾಚರಣೆಗಾಗಿ ಬಂಡವಾಳ ವೆಚ್ಚ ಮತ್ತು ದುಡಿಯುವ ಬಂಡವಾಳದ ಅಗತ್ಯಕ್ಕಾಗಿ ₹ 900 ಕೋಟಿ ಹೂಡಿಕೆ ಆಗಲಿದೆ ಎಂದು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (ಎನ್‌ಸಿಎಲ್‌ಟಿ) ಆದೇಶದಲ್ಲಿ ವಿವರಿಸಲಾಗಿದೆ. ಕಾರ್ಪೊರೇಟ್ ಇನ್‌ಸಾಲ್ವೆನ್ಸಿ ರೆಸಲ್ಯೂಷನ್ ಪ್ರೊಸೆಸ್ (ಸಿಐಆರ್‌ಪಿ) ವೆಚ್ಚ ₹ 475 ಕೋಟಿ ಮೊತ್ತವನ್ನೂ ಇದು ಒಳಗೊಂಡಿದೆ.

ಅಲ್ಲದೆ, ಕಂಪನಿಯ ಷೇರುಗಳಲ್ಲಿ ಒಕ್ಕೂಟವು ಗರಿಷ್ಠ ₹ 600 ಕೋಟಿಗಳಷ್ಟು ಹೂಡಿಕೆ ಮಾಡಲಿದೆ.

ಜೆಟ್ ಏರ್‌ವೇಸ್ ಪುನಶ್ಚೇತನಕ್ಕೆ ಜಲನ್ ಕಲ್‌ರಾಕ್ ಒಕ್ಕೂಟ ಸಲ್ಲಿಸಿದ್ದ ಪ್ರಸ್ತಾವಕ್ಕೆ ಎನ್‌ಸಿಎಲ್‌ಟಿ ಜೂನ್ 22ರಂದು ಒಪ್ಪಿಗೆ ನೀಡಿತ್ತು.

ಭಾರಿ ಕಡಿತ: ಕಂಪನಿಯಿಂದ ₹ 7,807 ಕೋಟಿ ವಸೂಲಿ ಮಾಡಲು ಎಸ್‌ಬಿಐ ನೇತೃತ್ವದಲ್ಲಿ ಸಾಲದಾತರು ಎನ್‌ಸಿಎಲ್‌ಟಿ ಅಡಿ ದಿವಾಳಿ ಪ್ರಕ್ರಿಯೆಗೆ ಚಾಲನೆ ನೀಡಿದ್ದವು. ಆದರೆ, ಪುನಶ್ಚೇತನ ಯೋಜನೆಯಡಿ ಸಾಲದಾತರಿಗೆ ₹ 380 ಕೋಟಿ ಮಾತ್ರ ಸಿಗಲಿದೆ. ಅಂದರೆ ವಸೂಲಿ ಮಾಡಲು ಉದ್ದೇಶಿಸಿದ ಮೊತ್ತದಲ್ಲಿ ಶೇ 95ರಷ್ಟು ಕಡಿತ ಆದಂತಾಗಿದೆ.

ಜಿಎಸ್‌ಟಿ ಜಾರಿ: ನ್ಯಾಯಯುತ ವ್ಯಾಪಾರ ಪ್ರಮಾಣ ಹೆಚ್ಚಳ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವಿವಿಧ ರಾಜ್ಯಗಳಲ್ಲಿ ಬೇರೆ, ಬೇರೆ ತೆರಿಗೆ ವಿಧಿಸುತ್ತಿದ್ದರಿಂದ ದೇಶದಲ್ಲಿ ನ್ಯಾಯಯುತವಲ್ಲದ ವ್ಯಾಪಾರ ವ್ಯವಸ್ಥೆ ಇತ್ತು. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ದೇಶದಲ್ಲಿ ಒಂದೇ ತೆರಿಗೆ ಮಾಡಿದ ನಂತರ ನ್ಯಾಯಯುತ ವ್ಯಾಪಾರದ ಪ್ರಮಾಣ ಹೆಚ್ಚಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ಕರ್ನಾಟಕ ರಾಜ್ಯ ತೆರಿಗೆ ಸಲಹೆಗಾರರ ಸಂಘ ಗುರುವಾರ ಜಿಎಸ್‌ಟಿ ಜಾರಿಯ ನಾಲ್ಕನೇ ವರ್ಷದ ದಿನ ಅಂಗವಾಗಿ ಆಯೋಜಿಸಿದ್ದ ವರ್ಚುವಲ್ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿಎಸ್‌ಟಿ ಜಾರಿಯ ನಾಲ್ಕು ವರ್ಷಗಳ ಸಾಧನೆ ದೊಡ್ಡದಿದೆ. ಮುಂದಿನ 40 ವರ್ಷಗಳ ಬಗ್ಗೆ ಚಿಂತನೆ ಮಾಡಬೇಕಿದೆ ಎಂದರು. ಪ್ರವಾಸ, ಸಾರಿಗೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ತೆರಿಗೆ ವಿಧಿಸುವ ವಿಷಯದಲ್ಲಿ ಸಣ್ಣ ಪ್ರಮಾಣದ ಗೊಂದಲಗಳಿವೆ. ಅವುಗಳನ್ನು ಬಗೆಹರಿಸಿಕೊಂಡು ಮುಂದೆ ಸಾಗಲಾಗುತ್ತಿದೆ. ಹತ್ತು ವರ್ಷಗಳ ಕಾಲ ಚರ್ಚೆ ಮಾಡಿದ ನಂತರ ಜಿಎಸ್‌ಟಿ ಜಾರಿಗೊಳಿಸಲಾಗಿದೆ. ಹಲವಾರು ವೈರುಧ್ಯ ಮತ್ತು ವೈವಿಧ್ಯತೆ ರಾಜ್ಯಗಳನ್ನು ಒಗ್ಗೂಡಿಸಿಕೊಂಡು ಹೋಗುವುದು ಬಹುದೊಡ್ಡ ಕೆಲಸ. ಈ ದೊಡ್ಡ ಕೆಲಸದ ಹಿಂದಿರುವ ಶಕ್ತಿ ಎಂದರೆ ಪ್ರಧಾನಿ ನರೇಂದ್ರ ಮೋದಿ ಎಂದು ಅವರು ಬಣ್ಣಿಸಿದರು. ಜಿಎಸ್‌ಟಿ ವ್ಯವಸ್ಥೆ ದೇಶದಲ್ಲಿ ಯಶಸ್ವಿಯಾಗಲು ತೆರಿಗೆ ಸಲಹೆಗಾರರ ಕೊಡುಗೆ ಅಪಾರವಾಗಿದೆ. ತೆರಿಗೆ ಸಲಹೆಗಾರರು, ತೆರಿಗೆ ಅಧಿಕಾರಿಗಳು ಜಂಟಿಯಾಗಿ ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ಕೆಲಸ ಆಗಬೇಕಿದೆ ಎಂದು ಹೇಳಿದರು.



ಬಸವರಾಜ ಬೊಮ್ಮಾಯಿ

ಕುಗ್ಗಿದ ತಯಾರಿಕಾ ವಲಯ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಗಳು ಜೂನ್ ತಿಂಗಳಿನಲ್ಲಿ ಕುಗ್ಗಿವೆ. ತಯಾರಿಕಾ ವಲಯದ ಚಟುವಟಿಕೆಗಳು ಕುಗ್ಗಿದ್ದು 11 ತಿಂಗಳ ಅವಧಿಯಲ್ಲಿ ಇದೇ ಮೊದಲು ಎಂದು ಐಎಚ್‌ಎಸ್ ಮರ್ಕಿಟ್ ಇಂಡಿಯಾ ಸಂಸ್ಥೆ ಹೇಳಿದೆ.

ಐಎಚ್‌ಎಸ್ ಮರ್ಕಿಟ್ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಮೇನಲ್ಲಿ 50.8ರಷ್ಟು ಇತ್ತು.

ಇದು ಜೂನ್‌ನಲ್ಲಿ 48.1ಕ್ಕೆ ಇಳಿಕೆ ಕಂಡಿದೆ. ಈ ಮೊದಲು 2020ರ ಜುಲೈನಲ್ಲಿ ವಲಯದ ಚಟುವಟಿಕೆಗಳ ಸೂಚ್ಯಂಕವು 50ಕ್ಕಿಂತಲೂ ಕಡಿಮೆ ಮಟ್ಟದಲ್ಲಿತ್ತು. 'ಪಿಎಂಐ' 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಸಕಾರಾತ್ಮಕ ಬೆಳವಣಿಗೆ ಎಂದು, 50ಕ್ಕಿಂತ ಕಡಿಮೆ ಇದ್ದರೆ ಕುಸಿತ ಎಂದು ಪರಿಗಣಿಸಲಾಗುತ್ತದೆ.

ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳ ಮತ್ತು ಅದನ್ನು ನಿಯಂತ್ರಿಸಲು ಕೈಗೊಂಡ ಕಠಿಣ ಸ್ವರೂಪದ ಕ್ರಮಗಳು ಬೇಡಿಕೆಯ ಮೇಲೆ ಪರಿಣಾಮ ಉಂಟುಮಾಡಿವೆ. ಜೊತೆಗೆ ಉದ್ಯೋಗ ನಷ್ಟವೂ ಸಂಭವಿಸಿದೆ ಎಂದು ಅದು ತಿಳಿಸಿದೆ. ಬೇಡಿಕೆ, ತಯಾರಿಕೆ, ರಫ್ತು ಮತ್ತು ಖರೀದಿ ಪ್ರಮಾಣದಲ್ಲಿ ಇಳಿಕೆ ಆಗಿದೆ. ವಹಿವಾಟು ನಡೆಸುವ ಉತ್ಸಾಹವು ತಗ್ಗಿದ್ದು, ಉದ್ಯೋಗ ನಷ್ಟವು ಮುಂದುವರಿದಿದೆ ಎಂದು ಸಮೀಕ್ಷೆಯಲ್ಲಿ ತಿಳಿಸಲಾಗಿದೆ.

ಕೋವಿಡ್–19 ನಿರ್ಬಂಧಗಳಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತದ ಸರಕುಗಳಿಗೆ ಬೇಡಿಕೆ ತಗ್ಗಿದೆ.

ಹೊಸ ರಫ್ತು ಬೇಡಿಕೆಯು 10 ತಿಂಗಳಿನಲ್ಲಿ ಇದೇ ಮೊದಲ ಬಾರಿಗೆ ಇಳಿಕೆ ಕಂಡಿದೆ. ತಯಾರಿಕಾ ವೆಚ್ಚವು ಜೂನ್‌ನಲ್ಲಿ ಇನ್ನಷ್ಟು ಹೆಚ್ಚಾಗಿದೆ. ರಾಸಾಯನಿಕ, ಎಲೆಕ್ಟ್ರಾನಿಕ್ಸ್ ಬಿಡಿಭಾಗಗಳು, ವಿದ್ಯುತ್, ಲೋಹ ಮತ್ತು ಪ್ಲಾಸ್ಟಿಕ್ ದರ ಹೆಚ್ಚಾಗಿದೆ. ಈ ಹೆಚ್ಚುವರಿ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸಲಾಗಿದೆ. ಸರಕು ತಯಾರಕರು ಸತತ 10ನೇ ತಿಂಗಳಿನಲ್ಲಿಯೂ ಬೆಲೆ ಏರಿಕೆ ಮಾಡಿದ್ದಾರೆ ಎಂದು ಸಮೀಕ್ಷೆ ತಿಳಿಸಿದೆ.

ಲಾಕ್‌ಡೌನ್ ನಿರ್ಬಂಧ ಸಡಿಲಿಕೆ ಪರಿಣಾಮ

ಜೂನ್‌ನಲ್ಲಿ ಜಿಗಿದ ವಾಹನ ಮಾರಾಟ

ನವದೆಹಲಿ (ಪಿಟಿಐ): ಪ್ರಮುಖ ವಾಹನ ತಯಾರಿಕಾ ಕಂಪನಿಗಳ ಜೂನ್ ತಿಂಗಳ ಮಾರಾಟದಲ್ಲಿ ಏರಿಕೆ ಕಂಡುಬಂದಿದೆ. ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಿಸಿದ್ದರಿಂದ ಮಾರಾಟದಲ್ಲಿ ಹೆಚ್ಚಳ ಆಗಿದೆ ಎಂದು ಕಂಪನಿಗಳು ಹೇಳಿವೆ.

ಒಟ್ಟಾರೆ ಮಾರಾಟವು ಮೇ ತಿಂಗಳಿಗೆ ಹೋಲಿಸಿದರೆ ಜೂನ್‌ನಲ್ಲಿ ಮೂರು ಪಟ್ಟು ಹೆಚ್ಚಾಗಿದೆ ಎಂದು ಮಾರುತಿ ಸುಜುಕಿ ಇಂಡಿಯಾ ಕಂಪನಿ ತಿಳಿಸಿದೆ. ಮೇನಲ್ಲಿ 46,555 ವಾಹನಗಳು ಮಾರಾಟ ಆಗಿದ್ದವು. ಜೂನ್‌ನಲ್ಲಿ ಇದು 1.47 ಲಕ್ಷಕ್ಕೆ ಏರಿಕೆ ಆಗಿದೆ.

ಟಾಟಾ ಮೋಟರ್ಸ್ ಕಂಪನಿಯ ದೇಶಿ ಮಾರಾಟವು ಶೇ 78ರಷ್ಟು ಹೆಚ್ಚಾಗಿದ್ದು, 43,704ಕ್ಕೆ ವಾಹನಗಳನ್ನು ಕಂಪನಿ ಮಾರಾಟ ಮಾಡಿದೆ. ಹುಂಡೈ ಮೋಟರ್ ಇಂಡಿಯಾದ ವಾಹನಗಳ ಮಾರಾಟವು ಮೇ ತಿಂಗಳಿಗೆ ಹೋಲಿಸಿದರೆ ಜೂನ್‌ನಲ್ಲಿ ಶೇ 77ರಷ್ಟು ಹೆಚ್ಚಾಗಿದ್ದು, 54,474ಕ್ಕೆ ತಲುಪಿದೆ.

ಹೋಂಡಾ ಕಾರ್ಸ್‌ನ ದೇಶಿ ಸಗಟು ಮಾರಾಟವು 2,032ರಿಂದ 4,767ಕ್ಕೆ ಏರಿಕೆ ಕಂಡಿದೆ. ಟೊಯೊಟಾ ಕಂಪನಿಯು 8,801 ವಾಹನಗಳನ್ನು ಮಾರಾಟ ಮಾಡಿದ್ದು, ಮೇನಲ್ಲಿ ಆಗಿದ್ದ ಮಾರಾಟಕ್ಕೆ ಹೋಲಿಸಿದರೆ 13 ಪಟ್ಟು ಹೆಚ್ಚಾಗಿದೆ ಎಂದು ಹೇಳಿದೆ.

ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಒಟ್ಟಾರೆ ವಾಹನ ಮಾರಾಟವು 17,447ರಿಂದ 32,964ಕ್ಕೆ ಏರಿಕೆ ಆಗಿದೆ. ಕಿಯಾ ಮೋಟರ್ಸ್ ಕಂಪನಿಯ ವಾಹನ ಮಾರಾಟ ಶೇ 36ರಷ್ಟು ಹೆಚ್ಚಾಗಿದ್ದು 15,015ಕ್ಕೆ ತಲುಪಿದೆ.

ದ್ವಿಚಕ್ರ ವಾಹನ ವಿಭಾಗದಲ್ಲಿ ಟಿವಿಎಸ್ ಮೋಟರ್ ಕಂಪನಿಯು 2.51 ಲಕ್ಷ ವಾಹನಗಳನ್ನು ಮಾರಾಟ ಮಾಡಿದ್ದು, ಮೇ ತಿಂಗಳಿಗೆ ಹೋಲಿಸಿದರೆ ಶೇ 51ರಷ್ಟು ಏರಿಕೆ ಕಂಡಿದೆ ಎಂದು ತಿಳಿಸಿದೆ.

ರಾಯಲ್ ಎನ್‌ಫೀಲ್ಡ್ ಕಂಪನಿಯ ಮಾರಾಟವು 27,294ರಿಂದ 43,048ಕ್ಕೆ ಏರಿಕೆ ಆಗಿದೆ. ಬಜಾಜ್ ಆಟೊ ಕಂಪನಿಯ ಒಟ್ಟಾರೆ ಮಾರಾಟ ಶೇ 24ರಷ್ಟು ಹೆಚ್ಚಾಗಿದೆ.

ಎಲ್‌ಐಸಿಯಿಂದ 'ಸರಳ್ ಪೆನ್ಶನ್'

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) 'ಸರಳ್ ಪೆನ್ಶನ್' ಹೆಸರಿನಲ್ಲಿ ಆ್ಯನ್ಯುಟಿ ಯೋಜನೆಯನ್ನು ಆರಂಭಿಸಿದೆ.

ಇದರ ಅಡಿಯಲ್ಲಿ ವಿಮಾ ಪ್ರೀಮಿಯಂ ಮೊತ್ತವನ್ನು ಒಂದು ಬಾರಿಗೆ ಪಾವತಿಸಬೇಕು, ಪಿಂಚಣಿ ಸೌಲಭ್ಯವು ತಕ್ಷಣದಿಂದಲೇ ಜಾರಿಗೆ ಬರುತ್ತದೆ ಎಂದು ಎಲ್‌ಐಸಿ ಪ್ರಕಟಣೆ ತಿಳಿಸಿದೆ.

ಈ ಯೋಜನೆಯನ್ನು ಎಲ್‌ಐಸಿ ಶಾಖೆಗಳಿಂದ ಅಥವಾ www.licindia.in ವೆಬ್‌ಸೈಟ್ ಮೂಲಕ ಖರೀದಿಸಬಹುದು. ಪಿಂಚಣಿ ಮೊತ್ತವನ್ನು ವರ್ಷಕ್ಕೊಮ್ಮೆ, ವರ್ಷಕ್ಕೆ ಎರಡು ಬಾರಿ, ಮೂರು ತಿಂಗಳಿಗೆ ಒಮ್ಮೆ ಅಥವಾ ತಿಂಗಳಿಗೆ ಒಮ್ಮೆ ಪಡೆದುಕೊಳ್ಳುವ ಆಯ್ಕೆ ಇದೆ.